ಬಾಲನಲ್ಲಿ ಹುಟ್ಟಿದ್ದು; ಬಾ

ಳುಮಾಡುವವನು.

ಮೂತ್ರ.

ಗುವುದು

ಬಾಕಿ.

).

ಪಾ. ಸಾ

ಭಂಜಿಕೆ

॥ ಶ್ರೀ ಘನಮಠೇಶಾಯ ನಮಃ ॥

ಶ್ರೀ ವೈರಾಗ್ಯ ಚಕ್ರವರ್ತಿ ಘನಮಠ ಶಿವಯೋಗಿಗಳ
ಶತಮಾನೋತ್ಸವದ (೧೦೦) ಸ್ಮಾರಕ ಗ್ರಂಥ (೧)

# ಘನಮಠೇಶ
# ವಚನ


ಲೇಖಕರು :

ಶಿವಕವಿ ಅಮರನಾಥ ಶಾಸ್ತ್ರಿಗಳು ಗುರುವಿನಮಠ,

ಸಂತೆಕೆಲೂರ.

ತಾ. ಲಿಂಗಸುಗೂರು] ● [ಜಿ. ರಾಯಚೂರು



೨೨—೧೨—೭೯ ಬೆಲೆ ೬ ರೂ.

ಪ್ರಕಾಶಕರು ಮತ್ತು ಸಹಾಯಕರು
ಶ್ರೀಮಾನ್ ವೀರನಗೌಡರು ಮಾಲಿಪಾಟೀಲ, ಮುಂಸಲಿಕಾರಲಕುಂಟೆ
( ಮಸ್ಕಿ ಟಿ. ಪಿ. ಸಿ. ಚೇರಮನ್ )

ಶ್ರೀಮಾನ್ ಬಸವರಾಜಪ್ಪಗೌಡರು ಪೊ. ಪಾಟೀಲ, ಆನ್ವರಿ
( M. L. A. ಲಿಂಗಸುಗೂರ )

ಪ್ರಥಮ ಮುದ್ರಣ ೧೯೭೯, ೧೦೦೦ ಪ್ರತಿಗಳು


— ಮುದ್ರಕರು —
ಶ್ರೀ ವ್ಹಿ. ಎಮ್. ಗಾರವಾಡಮಠ
ಶ್ರೀ ಶಿವಶಕ್ತಿ ಪ್ರಿಂಟಿಂಗ ಪ್ರೆಸ್, ಬಾಗಲಕೋಟೆ.

॥ ಶ್ರೀಗುರು ವಿಜಯಮಹಾಂತೇಶ್ವರ ವಿಜಯತೇತಾರಾಂ. ॥



ಶ್ರೀಮದ್ ವೈರಾಗ್ಯನಿಧಿ ವೈರಾಗ್ಯ ಚಕ್ರವರ್ತಿ ವೀರ ವಿರಾಗಿ ನೂತನಲ್ಲಮ ಇತ್ಯಾದಿ ಪುಣ್ಯ ವಾಚಕ ಶಬ್ಧಗಳಿಂದ ಕರ್ನಾಟಕದ ನಾನಾ ದಿಶೆಗಳಲ್ಲಿ ಪ್ರಖ್ಯಾತರಾದ ಲಿಂ। ಘನ ಮಠದ ನಾಗಭೂಷಣ ಶಿವಯೋಗಿಗಳ ಶತಮಾನೋತ್ಸವದ ಪ್ರಥಮ ಕಾಣಿಕೆಯಾಗಿ ಪ್ರಕಾಶನಗೊಳ್ಳುತ್ತಿರುವ **ಘನಮಠೇಶ ವಚನ** ಈ ಗ್ರಂಥವು ಶ್ರೀ ಮ. ನಿ. ಪ್ರ. ಶಿವಾನುಭವಚರವರ್ಯ ಮಹಾಂತ ಸ್ವಾಮಿಗಳವರು ಚಿತ್ತರಗಿ ಇಲಕಲ್ಲ ಸಂಸ್ಥಾನಮಠದೊಡೆಯರು ಇವರ ಅಮೃತ ಹಸ್ತದಿಂದ ಬಿಡುಗಡೆಯಾಗಿರುತ್ತದೆ.

—ಪ್ರಕಾಶಕರು

॥ ಶ್ರೀ ವಿಜಯ ಮಹಾಂತೇಶ ಪ್ರಸೀದ ॥

## ಶ್ರೀ ನಿ. ಪ್ರ. ಮಹಾಂತಸ್ವಾಮಿಗಳು

### ಚಿತ್ತರಗಿ ಶ್ರೀ ವಿಜಯ ಮಹಾಂತೇಶಮಠ ಇಲಕಲ್ಲ ಅವರ

# 卐 ಆಶೀರ್ವಚನ 卐

ಶಿವಕವಿಗಳಾದ ಶ್ರೀ ಅಮರನಾಥ ಶಾಸ್ತ್ರಿಗಳು ಗುರುವಿನಮಠ ಸಂತೆಕೆಲೂರ ಅವರು ಕನ್ನಡದ ಅಭಿಮಾನಿಗಳು. ಕನ್ನಡದ ಕಾವ್ಯ ಲೇಖದಲ್ಲಿ ಲೀಲಾಜಾಲವಾಗಿ ವಿಹರಿಸಿದವರು. ಕನ್ನಡದ ಮಹಾ ಕಾವ್ಯಗಳನ್ನು ಚನ್ನಾಗಿ ಅರ್ಥೈಸಿಕೊಂಡವರು. ಸ್ವತಃ ನಾಲ್ಕಾರು ಕಾವ್ಯಗಳನ್ನು ರಚಿಸಿ ಕಾವ್ಯ ಲೋಕಕ್ಕೆ ಪರಿಚಿತರಾಗಿದ್ದಾರೆ. ಪ್ರಸ್ತುತ ಶ್ರೀ ಗುರು ಘನಮಠೇಶ ವಚನ ಎಂಬ ಮಹತ್ವಪೂರ್ಣ ಕೃತಿಯನ್ನು ಬರೆದು ಮಹದುಪಕಾರ ಮಾಡಿದ್ದಾರೆ. ಕನ್ನಡದ ಮಹಾನ್ ದಾರ್ಶನಿಕರ, ಮಹಾನುಭಾವಿಗಳ ಶರಣರ, ಸಂತರ, ದಾಸರ, ಆಚಾರ್ಯರ ಬಗೆಗೆ 'ಘನಮಠ' ಎಂಬ ಮುದ್ರಿಕೆಯ ಮುಖಾಂತರ ಅವರ ಜೀವನ ಸಾರ ಸರ್ವಸ್ವವನ್ನು ತಿಳಿಭಾಷೆಯಲ್ಲಿ ಸರಸವಾಗಿ ತಿಳಿಸಿದ್ದಾರೆ.

—

"ಕುಳ್ಳುಸಾವಿರ ಕೊಂಡು। ಒಳ್ಳೆಮಕ್ಕಳ ನಿತ್ತೆ ।
ಜೊಳ್ಳುಮಾತಲ್ಲ ಜಗದೊಳಗೆ ಕಲಬುರಗಿ ।
ಒಳ್ಳೆ ಸುಕ್ಷೇತ್ರ ಘನಮಠ"

ಹಾನಗಲ್ಲ ಇಲಕಲ್ಲ ಜ್ಞಾನಿ ಶಿವಯೋಗಿಗಳು ।
ನೂನವಾಗದಿಹ ಶಿವಯೋಗ ಮಂದಿರದ ।
ತಾಣ ರಚಿಸಿದರು ಘನಮಠ

ಸೂತ್ರ ರೂಪದಲ್ಲಿ ನಾಡಿನ ಪುಣ್ಯ ಪುರುಷರ ಜೀವನದ ಮುಖ್ಯ ವಿಷಯ ವನ್ನು ತಿಳಿಸಿದ್ದಾರೆ. ಅಲ್ಲದೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ತಾತ್ವಿಕ ವಿವೇಚನೆಯನ್ನು ಬಹು ಸುಂದರವಾಗಿ ಹೇಳುವಲ್ಲಿ ಪಾಂಡಿತ್ಯದ ಪ್ರತಿಭೆಯೇ ಹರಿದು ಬಂದಿದೆ.

" ಲಿಂಗದೊಳು ಜಂಗಮವು । ಜಂಗಮದಿ ಜಗವೆಲ್ಲ
ಲಿಂಗದೊಳರಿದು ತಿಳಿಯಲ್ಕೆ ಮಾನವನ
ಅಂಗವೇ ಲಿಂಗ ಘನಮಠ "

ತತ್ವವನ್ನು ಸರಳ ಸುಂದರವಾಗಿ ಹೇಳಿ, ವಚನಗಳ ವೈಶಿಷ್ಟ್ಯವನ್ನು ಎತ್ತಿ ತೋರಿಸಿದ್ದಾರೆ.

ಈ ಕೃತಿಯಲ್ಲಿ ಬರುವ ನೀತಿಯ ವಚನಗಳು ಅತ್ಯಂತ ಮಹತ್ವ ಪೂರ್ಣವಾದವುಗಳು

ನಿಂದೆ ನಾಲಿಗೆ ಕೇಡು । ಸಂದೇಹ ಮನ ಕೇಡು।
ದುಂದುಗಾರಿಕೆಯು ಧನ ಕೇಡು। ಸತಿಗೆ ಸ್ವ
ಚ್ಛಂದ ತಾ ಕೇಡು- ಘನಮಠ

ಅತಿ ಸೂಕ್ಷ್ಮವಾಗಿ ಸೂತ್ರ ರೂಪದಲ್ಲಿ ನೀತಿಯನ್ನು ನೀಡಿದ್ದಾರೆ.

ಒಟ್ಟಾರೆ ಕವಿಗಳ ಈ ಕೃತಿಯು ಕನ್ನಡದ ಮಾರ್ಗದರ್ಶನವಾಗಿ ಪರಿಣಮಿಸಿದೆ.

ಚಿತ್ತರಗಿ ಮಹಾ ಶಿವಯೋಗಿಯ ಕೃಪೆಯಿಂದ ಕವಿಗಳು ಇನ್ನೂ ಮಹತ್ವಪೂರ್ಣವಾದ ಮಹಂತ ಕೃತಿಗಳನ್ನು ಬರೆದು ನಾಡಿಗೆ ಮಹದುಪಕಾರ ಮಾಡಲೆಂದು ಹೃದಯಾರೆ ಹಾರೈಸುತ್ತೇನೆ.

ಇತಿ ಶಿವಂ ಭೂಯಾತ್.

**ಲಿಂಗಸುಗೂರ (ಛಾವಣಿ)**

ತಾ। ೨೬-೧೧-೭೯


# ಪ್ರಕಾಶಕದ್ವಯರ ನುಡಿ

ಶ್ರೀ ವೈರಾಗ್ಯ ಚಕ್ರವರ್ತಿ ಘನಮಠ ಶಿವಯೋಗಿಗಳ ಶತಮಾನೋತ್ಸವದ ಪುಣ್ಯ ತಿಥಿಯ ಸಂಭ್ರಮದ ಕಾರ್ಯಾಚರಣೆಯು ದಿನಾಂಕ ೨೨-೧೨-೭೯ಕ್ಕೆ ಪ್ರಾಪ್ತವಾಗುದು ನಮ್ಮ ರಾಯಚೂರ ಜಿಲ್ಲೆಯ ಸಕಲ ಮಠ ಸದ್ಭಕ್ತರಿಗೆಲ್ಲ ಸಂತಸದಾಯಕ ಅಷ್ಟೇ ಏಕೆ ಕನ್ನಡ ನಾಡಿಗೆಲ್ಲಾ ಹರ್ಷ ದಾಯಕವಾಗಿದೆ. ಶ್ರೀ ಶಿವಯೋಗಿಗಳು ತಮ್ಮ ಜೀವನವಿಡೀ ಕನ್ನಡ ನಾಡ ನೆಲ್ಲಾ ಸಂಚಾರ ಮಾಡಿ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ, ಕೃಷಿಕ ಅನಂತ ಮುಖವಾಗಿ ವೀರವಿರಾಗಿಗಳಾಗಿ ನಾಡಿಗೆ ಸೇವೆ ಸಲ್ಲಿಸಿದ್ದಾರೆ. ಕೆಲವರು ಸಕಲ ವಿದ್ಯ ಕಲೆಗಳಲ್ಲಿ ನಿಷ್ಣಾತರಿದ್ದರೆಂದು ಅವರು ಸಮಾಜಕ್ಕೆ ಸಲ್ಲಿಸಿದ ಭಕ್ತಿ ಸುಧಾಸಾರ ಮತ್ತು ಕೃಷಿ ಜ್ಞಾನ ಪ್ರದೀಪಿಕೆ ಎಂಬ ಉದ್ಗ್ರಂಥ ಗಳಿಂದ ಗೊತ್ತಾಗುತ್ತದೆ. ನಾಡನ್ನೆಲ್ಲಾ ಸಂಚಾರ ಮಾಡಿ ಅಂತ್ಯಕ್ಕೆ ಸಂತೆಕೆಲೂರಲ್ಲಿ ಅವರು ಜೀವ ಸಮಾಧಿಯನ್ನೈಯ್ದಿದ್ದಾರೆ.


ಅಂದಿನಿಂದ ಇಲ್ಲಿಯವರೆಗೆ ನಾಡಿನ ಅನಂತ ಸಾಹಿತಿಗಳು, ಕವಿಗಳು, ಶಿವಯೋಗಿಗಳ ಪುರಾಣ, ಶಿವಭಜನೆ, ಕೀರ್ತನೆ, ಗದ್ಯ ಚರಿತ್ರೆ, ನಾನಾ ರೂಪಗಳಲ್ಲಿ ಬರೆದು ಶಿವಯೋಗಿಗಳ ಸೇವೆ ಮಾಡಿದ್ದಾರೆ. ಇದೇ ಸಮಯಕ್ಕೆ ವಯೋವೃದ್ಧರು, ಶಿವಕವಿಗಳು ನಮ್ಮ ಮನೆಯ ಗುರುಗಳು ಆದ ವೇ॥ ಪಂ॥ ಶಿವಕವಿ ಅಮರನಾಥ ಶಾಸ್ತ್ರಿಗಳವರು ಶಿವಯೋಗಿಗಳ ಘನಮಠೇಶ ಎಂಬ ಪವಿತ್ರ ನಾಮವು ನಾಡು ನುಡಿಯಲ್ಲಿ ಬೆರತು ಹೋಗುವಂತೆ ಜಾನಪದ ಸಾಹಿತ್ಯದಲ್ಲಿ ಘನಮಠೇಶರ ಮುದ್ರಿಕೆಯನ್ನಿಟ್ಟು ತ್ರಿಪದಿ ರೂಪದಲ್ಲಿ ಒಂದು ಸಾವಿರ ಪದ್ಯಗಳನ್ನು ಬರೆದು ಘನಮಠೇಶ ವಚನ ಎಂಬ ಗ್ರಂಥದ ಹೆಸರಿಟ್ಟು ಈ ಗ್ರಂಥವನ್ನು ಪ್ರಕಾಶನಪಡಿಸಿ ಕೀರ್ತಿಶಾಲಿಗಳಾಗಿರೆಂದು ಬೋಧಿಸಲಾಗಿ ಅವರ ಅಪೇಕ್ಷೆಯಂತೆ ಈ ಪೂಜ್ಯ ಗ್ರಂಥ ಪ್ರಕಾಶನಪಡಿಸಿ ಶ್ರೀ ಶಿವಯೋಗಿ ಗಳ ಹಾಗೂ ಗುರುಗಳ ಉಭಯರ ಸೇವೆ ಸಲ್ಲಿಸುವ ಆಸೆಯಿಂದ ಈ ಗ್ರಂಥ ವನ್ನು ಪ್ರಕಾಶನಪಡಿಸಿ ಈ ಗ್ರಂಥದ ಸರ್ವಾಧಿಕಾರವನ್ನು ಗ್ರಂಥಕರ್ತರಿಗೆ ತ್ರಿಕರ್ಣಪೂರ್ವಕವಾಗಿ ಅರ್ಪಿಸಲಾಗಿದೆ.

ಶ್ರೀ ಬಿ. ಟಿ. ಪಾಟೀಲ M.L.A.
ಆನ್ವರಿ
ತಾ॥ ಲಿಂಗಸುಗೂರ ೧-೧೨-೭೯

ಶ್ರೀ ವ್ಹಿ. ಬಿ. ಪಾಟೀಲ
ಮುಸಲಿಕಾರಲಕುಂಟೆ (ಮಸ್ಕಿ)
ಟೌನ ಪಂಚಾಯತ ಚೇರಮನ್



ಶ್ರೀ ವೀರನಗೌಡರು
ಮಾಲಿಪಾಟೀಲ
ಮುಸ್ಲಿ ಕಾರಲಕುಂಟಿ
(ಮಸ್ಕಿ ಟಿ. ಪಿ. ಸಿ. ಚೇರಮನ್)



ಶ್ರೀ ಬಸವರಾಜಪ್ಪಗೌಡರು ಪೊ. ಪಾಟೀಲ
ಅನ್ವರಿ M. L. A. ಲಿಂಗಸುಗೂರ

ಪುರಾಣ ಪ್ರವಚನ ಪ್ರವೀಣರಾದ

## ಶ್ರೀ ನಿ. ಪ್ರ. ಶಂಕರ ಮಹಾಸ್ವಾಮಿಗಳು

ಶೆಟ್ಟರಮಠ, ಅಥಣಿ. ಅವರಿಂದ

## — ಮುನ್ನುಡಿ —

ಜಾಗತಿಕ ಮಹಾಪುರುಷರ ಮಾಲಿಕೆಯಲ್ಲಿ ಶ್ರೀ ಘನಮಠ ಶಿವ ಯೋಗಿಗಳ ಮೂರ್ತಿ ಸ್ವರೂಪ ಉಜ್ವಲವಾಗಿ ಕಂಗೊಳಿಸುತ್ತದೆ.

ಅವರು ಕೇವಲ ಮಹಿಮಾವಂತರಾಗದೆ ಮಾನವನ ಉದ್ಧಾರ ಕ್ಕಾಗಿ ಕನ್ನಡ ಭಾಷೆಯಲ್ಲಿ ನೈತಿಕ ತಾತ್ವಿಕ, ವೈರಾಗ್ಯ ಪರ ಪದ್ಯಗಳನ್ನು ರಚಿಸಿ ಜನಜಾಗ್ರತೆಯನ್ನುಂಟು ಮಾಡಿದ್ದಾರೆ. ಸಂಸಾರಿಗಳಾಗಿದ್ದರೂ ಶಿವಯೋಗಿಗಳೆಂದು ಕರೆಯಿಸಿಕೊಂಡಿರುವದು ಇದೊಂದು ಅವರಲ್ಲಿರುವ ಆತ್ಮ ಶಕ್ತಿಯ ವೈಶಿಷ್ಟ್ಯವು.

ಶ್ರೀ ಘನಮಠಾರ್ಯರು ಬಸವಾದಿ ಪ್ರಮಥರ ನಡೆ ನುಡಿಗಳಂತೆ ಕಡೆತನಕ ನಡೆದರಲ್ಲದೆ ಬಸವಾ ನಿನ್ನ ಸಮಾನ ದೈವವದಾರೋ ಎಂಬುದು ಅವರ ಜೀವನದ ಜಪವಾಗಿತ್ತಲ್ಲದೇ ಬಸವಣ್ಣನವರ ವಚನ ಗ್ರಂಥವನ್ನು ಬೆನ್ನಿಗೆ ಕಟ್ಟಿಕೊಂಡೇ ಪ್ರಚಾರಕ್ಕಾಗಿ ವಿಜಾಪೂರ, ರಾಯಚೂರ, ಗುಲ ಬುರ್ಗಾ ಜಿಲ್ಲೆಗಳಲ್ಲಿ ಸಂಚರಿಸಿದರು.

ಮೂರು ತಿಂಗಳ ಪರ್ಯಂತ ಬಸವ ಪುರಾಣ ಹೇಳುವ ಅವಕಾಶ ನಮಗೆ ದೊರೆತದ್ದು ಪುಣ್ಯ ವಿಶೇಷವೆಂದೇ ಭಾವಿಸುವೆ.

ಈ ಗ್ರಂಥಕ್ಕೆ ಮುನ್ನುಡಿ ಬರೆಯಲು ಅರಿಕೆ ಮಾಡಿಕೊಂಡದ್ದ ಕ್ಕಾಗಿ ಈ ಕಾರ್ಯ ಕೈಕೊಳ್ಳುವ ಸದಾವಕಾಶ ಸಿಕ್ಕಂತಾಯಿತು. ವೇ|| ಶಾಸ್ತ್ರಿಗಳವರು ಈಗಾಗಲೇ ಅನೇಕ ಪುರಾಣಗಳನ್ನು ರಚಿಸಿದ್ದಾರೆ. ಶ್ರೀ ಘನಮಠಾರ್ಯರ ಚರಿತ್ರೆಯನ್ನು ಕೂಡ ಈಗಾಗಲೇ ಅಚ್ಚು ಹಾಕಿಸಿದ್ದಾರೆ. ವೇದಾಗಮದ ಸಾರವನ್ನು ಕನ್ನಡದಲ್ಲಿ ರಚಿಸಿದವರೆಂದರೆ ಮೊಟ್ಟಮೊದಲು ಬಸವಾದಿ ಪ್ರಮಥರು ಹಾಗೂ ಶಿವಶರಣರು ಅದೇ ರೀತಿ ವೇ| ಅಮರನಾಥ ಶಾಸ್ತ್ರಿಗಳವರು ಕೂಡ ವೀರಶೈವ ಮತದ ಪಂಚಾಚಾರ ಷಟಸ್ಥಲ ಸಿದ್ಧಾಂತ ವನ್ನು ಈ ತ್ರಿಪದಿಯಲ್ಲಿ ಅಡಗಿಸಿದ್ದಾರಲ್ಲದೆ ಕೃಷಿ ಜ್ಞಾನ ಹಾಗೂ ಮಾಧ್ವ

ಮತಾದಿಗಳ ಬಗ್ಗೆಯೂ ಕೂಡ ತಿಳಿಗನ್ನಡದಲ್ಲಿ ವಚನ ರಚಿಸಿ ಕನ್ನಡಮ್ಮನ ಸೇವೆಗೈದಿದ್ದಾರೆ.

ವೇದ ಆಗಮ ಉಪನಿಷತ್‌ಗಳ ಸಾರ ಸಂಗ್ರಹವನ್ನು ಮೊಟ್ಟ ಮೊದಲು ತಿಳಿಭಾಷೆಯಲ್ಲಿ ರಚಿಸಿದವರು ಬಸವಾದಿ ಪ್ರಥಮರು. ಬಸವಣ್ಣನವರಕ್ಕಿಂತ ಪೂರ್ವದಲ್ಲಿಯು ಕೆಲವು ಶಿವಶರಣರು ವಚನಗಳನ್ನು ಬರೆದು ಕನ್ನಡ ಸಾಹಿತ್ಯಕ್ಕೆ ಒಂದು ಶೋಭೆ ತಂದುಕೊಟ್ಟವರು. ಅವರಲ್ಲಿ ದೇವರ ದಾಸಿಮಯ್ಯ ಹಾಗೂ ಶಂಕರ ದಾಸಿಮಯ್ಯ ಇವರೇ ಮೊದಲಾದ ಶರಣರು ವಚನ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದವರು.

ಶ್ರೀ ಘನಮಠೇಶ್ವರರ ತತ್ವಗಳನ್ನೇ ಶ್ರೀ ಅಮರನಾಥ ಶಾಸ್ತ್ರಿಗಳು ಪಾಮರಿಗೂ ಪಂಡಿತರಿಗೂ ತಿಳಿಯುವಂತೆ ತಿಳಿ ಭಾಷೆಯಲ್ಲಿ ತ್ರಿಪದಿ ರೂಪದಲ್ಲಿ ಈ ಗ್ರಂಥ ರಚಿಸಿದ್ದಾರೆ.

ಸಂಸಾರ ಸಾಗರ ದಾಟಲು ಗುರುಪಾದವೆಂಬ ನೌಕೆಯನ್ನು ಜೀವಾತ್ಮನು ಸಂಪಾದಿಸಬೇಕು ಎಂದು ಕವಿಗಳು ಎಲ್ಲರಿಗೂ ತಿಳಿಯುವಂತೆ ಬೋಧಿಸಿದ್ದಾರೆ. ಅಂಗನು ಲಿಂಗನಾಗಬೇಕಾದರೆ, ಜೀವನು ಶಿವನಾಗಬೇಕಾದರೆ, ಆತ್ಮನು ಪರಮಾತ್ಮನಾಗಬೇಕಾದರೆ ಈ ಗ್ರಂಥವು ಮಾನವನಿಗೆ ಪಾರಮಾರ್ಥದ ಪರಮ ಸೋಪಾನವಾಗಿದೆ. ದಶೇಂದ್ರಿಗಳ ಕಾಟ ಕಳೆಯಲು ದಶ ಪಥಗಳನ್ನು ಕವಿಗಳು ಈ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಇದೇ ರೀತಿ ಇದೇ ಕವಿಗಳಿಂದ ಸುಲಭ ಭಾಷಾ ಶೈಲಿಯಲ್ಲಿ ಇನ್ನೂ ಅನೇಕ ಕೃತಿಗಳು ಹೊರಬಂದು ಜನರ ಮನದ ಮಾಲಿನ್ಯ ತೊಳೆದು ಬೆಳಗಲೆಂದು ಶ್ರೀ ಘನಮಠೇಶನ ಪಾದದಲ್ಲಿ ಪ್ರಾರ್ಥಿಸುವೆ

ಇಂಥ ಮಹತ್ತರವಾದ ಗ್ರಂಥದ ಪ್ರಕಾಶನದ ಹೊಣೆ ಹೊತ್ತ ದಾನಶೂರರಾದ ಶ್ರೀ ಬಸವರಾಜಪ್ಪಗೌಡ್ರು ಅನ್ವರಿ ಎಂ. ಎಲ್. ಎ. ಲಿಂಗಸುಗೂರು ಮತ್ತು ಶಿವಕವಿ ಅಮರನಾಥ ಶಾಸ್ತ್ರಿಗಳ ಪರಮ ಶಿಷ್ಯರಾದ ಸದ್ಭಕ್ತ ವೀರನಗೌಡ್ರು ಮಾಲಿಪಾಟೀಲ ಮುಸ್ಲಿಕಾರ್ಲಕುಂಟ ಸಾ. ಮಸ್ಕಿ ಇವರಿಗೆ ಇದೇ ಪ್ರಕಾರ ಸದ್ಬುದ್ಧಿಯನ್ನು ಆ ಶಿವಯೋಗಿ ಕರುಣಿಸಲೆಂದು ಆಶೀರ್ವದಿಸುತ್ತೇವೆ.

ಇತಿ ಶುಭಂ

|| ಶ್ರೀ ಘನಮಠೇಶಾಯ ನಮಃ ||



ಶಿವಕವಿ ಅಮರನಾಥ ಶಾಸ್ತ್ರಿಗಳು ಗುರುವಿನಮಠ

ಸಂತೆಕೆಲ್ಲೂರ

ಜಿ. ರಾಯಚೂರ ] [ ತಾ. ಲಿಂಗಸುಗೂರ

# ಅ ರ್ಪ ಣೆ

ವೈರಾಗ್ಯ ನಿಧಿಯುಮನು। ವೀರತಪಸಿಯುಂ ತಾನು।
ಮಾರ ಹರಮಠದ। ಸೇವೆಯನು ಗೈಯುತ್ತ।
ಧಾರುಣಿಯು ಚರಿಸಿ ಘನಮಠ [೧]

ಅಂತ್ಯಕ್ಕೆ ಕೆಲವೂರ। ಸಂತಸದ್ಭಕ್ತರಾ।
ಆಂತರ್ಯಕೊಲಿದು। ನಿಂತ ಶಿವಯೋಗಿ ವರ।
ಶಾಂತ ಘನಮಠ [೨]

ಅವನಿಯೊಳು ಶಿವಯೋಗಿ। ವಚನಮಾಲಿಕೆಯಿದನು।
ತನಕದಿಂದರ್ಪಿಸುವೆ। ಶಿವಯೋಗಿ ಸ್ವಾಮಿಗಳ।
ದಿವ್ಯ ಚರಣಕ್ಕೆ ಘನಮಠ [೩]

ಗ್ರಂಥಕರ್ತ :
ಅ. ಶ. ಗುರುವಿನಮಠ

# ಲೇಖಕರ ಪ್ರಸ್ತಾವನೆ

ಶ್ರೀಮದ್ ವೈರಾಗ್ಯ ನಿಧಿ, ವೈರಾಗ್ಯ ಚಕ್ರವರ್ತಿಗಳೆಂದು ಕನ್ನಡ ನಾಡಿನಲ್ಲಿ ಪ್ರಸಿದ್ಧರಾಗಿ ಹೋದ ವಿಷಯ ಜನಜನಿತವಾಗಿದ್ದು ಶಿವಯೋಗಿಗಳು ಸ್ವತಃ ನಮ್ಮ ಗ್ರಾಮವಾದ ಸಂತೆಕೆಲ್ಲೂರಲ್ಲಿ ಲಿಂಗೈಕ್ಯರಾಗಿ ಶಾಲಿವಾಹನ ಶಕೆ ೧೮೦೧ ಸಿದ್ಧಾರ್ಥಿನಾಮ ಸಂವತ್ಸರದ ಪುಷ್ಯ ಶುದ್ಧ ೪ ತಾ|| ೨೨-೧೨-೭೯ ಕ್ಕೆ ಒಂದು ನೂರು ವರ್ಷಗಳಾದವು. ಶ್ರೀ ಶಿವಯೋಗಿಗಳ ಬಗ್ಗೆ ನಾಡಿನ ಕವಿಗಳು ಅನೇಕ ರೀತಿಯಿಂದ ಅಂದರೆ ಪುರಾಣ ಕೀರ್ತನ ನಾಟಕಗಳಿಂದ ಅವರ ಸೇವೆಯನ್ನು ಮಾಡಿದ್ದಾರೆ. ಅದೇ ಮಾರ್ಗವನ್ನನುಸರಿಸಿ ಪ್ರಸ್ತುತ ಗ್ರಂಥವನ್ನು ರಚಿಸಲಾಗಿದೆ. ನಮ್ಮಂಥವರು ಈಗಿನ ಕಾಲದಲ್ಲಿ ಗ್ರಂಥ ಮುದ್ರಣ ಮಾಡಿ ಹೊರ ತರುವದು ಬಹು ದುಸ್ತರವಾದುದಾಗಿತ್ತು. ಈ ಸಮಯದಲ್ಲಿ ನಮ್ಮ ಭಾಗದ M.L.A. ರವರಾದ ಶ್ರೀಮಾನ್ ಬಸವರಾಜಪ್ಪಗೌಡರು ಪೋಲೀಸಪಾಟೀಲ ಅನ್ವರಿ ಹಾಗೂ ನಮ್ಮ ಶಿಷ್ಯರಾದ ಶ್ರೀ ವೀರನಗೌಡರು ಮಾಲಿಪಾಟೀಲ ಮುಸ್ಲಿಕಾರಲಕುಂಟೆ (ಮಸ್ಕಿ) ಈ ಉಭಯತರು ಮುದ್ರಣಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ವಹಿಸಿಕೊಂಡರಲ್ಲದೆ ಈ ಗ್ರಂಥದ ಪ್ರಕಾಶನ ಹೊಣೆ ಹೊತ್ತುಕೊಂಡದ್ದು ನಮಗೆ ಅಪಾರ ಸಂತೋಷವನ್ನುಂಟು ಮಾಡಿದೆ. ಶ್ರೀ ಘನಮಠದಾರ್ಯರು ಉಭಯತರಿಗೂ ಪುತ್ರ ಪೌತ್ರಾದಿ ಸಕಲ ಸಂಪತ್ತನ್ನಿತ್ತು ಅನುಗ್ರಹಿಸಲೆಂದು ಶ್ರೀ ಶಿವಯೋಗಿಗಳವರಲ್ಲಿ ಅನನ್ಯ ಭಾವನೆಯಿಂದ ಪ್ರಾರ್ಥಿಸುತ್ತೇವೆ. ನಮ್ಮ ಈ ಚಿಕ್ಕ ಕೃತಿಯ ಮುನ್ನುಡಿಯನ್ನು ಬರೆಯಲು ಇಲ್ಲಿಯೇ ಶತಮಾನೋತ್ಸವ ಅಂಗವಾಗಿ ನಡೆದಿರುವ ಬಸವ ಪುರಾಣ ಪ್ರವಚನ ಕಾರ್ಯಕ್ಕಾಗಿ ಆಗಮಿಸಿದ ಅಥಣಿಯ ಶಟ್ಟರಮಠದ ಶ್ರೀ ಮ. ನಿ. ಪ್ರ. ಶಂಕರ ಮಹಾಸ್ವಾಮಿಗಳವರನ್ನು ಕೇಳಿಕೊಂಡಾಗ ಸಂತೋಷದಿಂದಲೇ ಒಪ್ಪಿ ಮುನ್ನುಡಿ ಬರೆದು ಆಶೀರ್ವದಿಸಿದ್ದಕ್ಕಾಗಿ ನಾವು ಅವರ ಪಾದಾರವಿಂದದಲ್ಲಿ ಅನಂತ ಪ್ರಣಾಮಗಳನ್ನರ್ಪಿಸುತ್ತೇವೆ. ಇದೇ ರೀತಿಯಲ್ಲಿ ಗ್ರಂಥವನ್ನು ಮುದ್ರಣ ಮಾಡುವದರ

ಜೊತೆಗೇನೇ ಚೊಕ್ಕಟವಾದ ಚಿಕ್ಕದೊಂದು ಅಭಿಪ್ರಾಯ ಬರೆದು ಕೊಟ್ಟ ಬಾಗಲಕೋಟೆ ಶಿವಶಕ್ತಿ ಪ್ರೆಸ್ಸಿನ ಒಡೆಯರ ಸುಪುತ್ರ ಚಿ॥ ಚನ್ನೇಶ B A. ಈತನು ಇನ್ನೂ ಹೆಚ್ಚಿನ ಘನ ಸಾಮರ್ಥ್ಯ ಹೊಂದಲೆಂದು ಆಶಿಸುತ್ತೇವೆ. ಇದೇ ಗ್ರಂಥದ ಕೊನೆಯಲ್ಲಿ ಶ್ರೀ ಶಿವಯೋಗಿಗಳ ಸುಪ್ರಭಾತ ಹಾಗೂ ಮಂಗಲ ಬರೆದು ಕೊಟ್ಟು ಗ್ರಂಥಕ್ಕೆ ಶೋಭೆ ತಂದು ಕೊಟ್ಟ ಚನ್ನಬಸವ ಕಲ್ಮಂಗಿ ಸಾ॥ ಜಮಾಪೂರ ಇವರಿಗೆ ನಮ್ಮ ಅನಂತ ಆಶೀವಾದಗಳು. ಸಮಯಕ್ಕೆ ಸರಿಯಾಗಿ ಅಂದರೆ ಶತಮಾನೋತ್ಸವ ಸಮಾರಂಭಕ್ಕೆ ಸರಿಯಾಗಿ ಗ್ರಂಥವನ್ನು ಮುದ್ರಣ ಮಾಡಿ ಕೊಟ್ಟ ಪ್ರೆಸ್ಸಿನ ಒಡೆಯರಾದ ವೇ॥ ವ್ಹಿ. ಎಮ್. ಗಾಂವಾಡಮಠ ಅವರಿಗೂ ಹಾಗೂ ಅವರ ಕಾರ್ಮಿಕ ವರ್ಗಕ್ಕೂ ನಾವು ತುಂಬಾ ಉಪಕೃತರಾಗಿದ್ದೇವೆ.

ಗ್ರಂಥಕರ್ತ :

ಅ. ಶ. ಗುರುಮಿನಮಠ

# — ನಲ್ನುಡಿ —

ಮಾನವನು ತನ್ನ ಜೀವನಕ್ಕಾಗಿ ಕಂಡುಹಿಡಿದ ಅನೇಕ ಮಾರ್ಗಗಳಲ್ಲಿ ಸಾಹಿತ್ಯವೂ ಒಂದು ಸಾಧನ ಅದರ ಮುಖಾಂತರ ಸಾಹಿತಿಯು ಅರ್ಥಾತ್ ಕವಿಯು ತನ್ನ ಕಾವ್ಯ ಪ್ರತಿಭೆಯ ಬೆಳಕಿನಿಂದ ಜಗದುದ್ಧಾರಕ್ಕಾಗಿ ಜನಿಸಿದ ಮಹಾನುಭಾವರ ಆದರ್ಶ ಜೀವನದ ಸಾರವನ್ನು ಗದ್ಯ ರೂಪದಲ್ಲಿಯೊ ಪದ್ಯ ರೂಪದಲ್ಲಿಯೋ ಅಥವಾ ಇನ್ನಾವ ರೂಪದಲ್ಲಿಯೊ ರಚಿಸಿ ಮಾನವ ಕೋಟಿಗೆ ಮಹದುಪಕಾರ ಮಾಡಿದ್ದಾರೆ, ಮಾಡುತ್ತಲಿದ್ದಾರೆ. ಸಾಹಿತ್ಯದ ಸಾರವನ್ನು ಅರಿಯುವಲ್ಲಿ ಎರಡು ಮಾರ್ಗಗಳಿವೆ. ಒಂದು ಜೀವನೋಪಾಯ ಎರಡನೆಯದು ಜೀವನಪಾವನ ಈ ಎರಡು ಮಾರ್ಗಗಳು ಒಂದಕ್ಕೊಂದು ಪೂರಕವಾಗಿವೆ. ಪ್ರಪಂಚ ಮತ್ತು ಪಾರಮಾರ್ಥ ಎರಡೂ ಮಾರ್ಗವಿಡಿದು ಅಂತಿಮ ಘಟ್ಟಕ್ಕೆ ಹೋಗುವದೇ ನಿಜವಾದ ಶಿವಯೋಗಿಗಳ ಮಾರ್ಗ. ಅದರಂತೆ ಸರ್ವಜ್ಞನ ತ್ರಿಪದಿ ಸೋಮೇಶ್ವರನ ಚಂಪೂ ಕಾವ್ಯ ನಿಜಲಿಂಗ ಶತಕದಂತಹ ಷಟ್ಪದಿಗಳು, ರತ್ನಾಕರ ವರ್ಣಿಯ ಚೂಡಾರತ್ನ ಕಾವ್ಯ ಇತ್ಯಾದಿ ಕೃತಿಗಳು ಮೇಲಿನ ಅಭಿಪ್ರಾಯವನ್ನೇ ಹೋಲುತ್ತವೆ. ಎರಡೂ ಮಾರ್ಗವನ್ನನುಸರಿಸಿ ಶ್ರೀ ವೈರಾಗ್ಯ ಚಕ್ರವರ್ತಿ ಘನಮಠೇಶರ ಅಂಕಿತ ದಿಂದ ಪಂಡಿತ ಪಾಮರರೆಲ್ಲರಿಗೂ ತಿಳಿಯುವಂತೆ ತ್ರಿಪದಿ ರೂಪದಲ್ಲಿ ಸರ್ವ ಧರ್ಮ ಸಮನ್ವಯವನ್ನೊಳಗೊಂಡ ವಚನ ರಚಿಸಿ ಭಕ್ತಕೋಟಿಯ ಕೈಗಿತ್ತಿ ದ್ದಾರೆ. ಗ್ರಂಥಕರ್ತರಿಂದ ಈ ಮೊದಲು ಚರಿತ್ರೆ ರೂಪವಾಗಿಯೂ ಭಜನಾ ವಳಿ ರೂಪವಾಗಿಯೂ ಪುರಾಣ ರೂಪವಾಗಿಯೂ ಅನೇಕ ಗ್ರಂಥ ರಚನೆ ಯಾಗಿ ಭಕ್ತರ ಕೈಸೇರಿವೆಯೆಂದು ಬೇರೆ ಹೇಳಬೇಕಾಗಿಲ್ಲ. ಪ್ರಸ್ತುತ ಗ್ರಂಥ ವಾದ ಘನಮಠೇಶ ವಚನವು ಮುದ್ರಣವಾಗಿ ಕನ್ನಡಿಗರ ಕೈಸೇರಿದ್ದೊಂದು ಮಹಾ ಭಾಗ್ಯವೆಂದು ಹರ್ಷಿಸುತ್ತೇನೆ.

ನಾಸ್ತಿಕಭಾವವೇ ಅತಿಯಾದ ಸಮಯದಲ್ಲಿ ಆಸ್ತಿಕ ಭಾವನೆಯಿಂದ ಮತ್ತು ಶ್ರೀ ಘನಮಠೇಶರ ಮೇಲಿನ ಅಪಾರ ಭಕ್ತಿಯಿಂದ ಗ್ರಂಥವನ್ನು

ಬೆಳಕಿಗೆ ತಂದ ಶ್ರೀಮಾನ್ ಬಸವರಾಜಪ್ಪಗೌಡರು ಎಮ್. ಎಲ್. ಎ. (ಲಿಂಗಸುಗೂರ) ಅನ್ವರಿ ಇವರಿಗೂ ಹಾಗೂ ಶ್ರೀಮಾನ್ ವೀರನಗೌಡರು ಮಾಲಿಪಾಟೀಲ ಮುಸ್ಲಿಕಾರ್ಲಕುಂಟೆ ( ಮಸ್ಕಿ ) ಟಿ. ಪಿ. ಸಿ. ಚೇರಮನ್ ಅವರಿಗೂ ನನ್ನ ವಂದನೆಗಳನ್ನರ್ಪಿಸಿ, ಗ್ರಂಥಕರ್ತರ ಅಡಿದಾವರೆಗಳಲ್ಲಿ ನನ್ನ ಪ್ರಣಾಮಗಳನ್ನು ಸಲ್ಲಿಸಿ ನನ್ನ ನಲ್ಮೆಯ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೯–೧೨–೭೯ ಚನ್ನಬಸವ ಕಲ್ಮಂಗಿ, ಜಮಾಪೂರ

ಶ್ರೀ ಶಿವಶಕ್ತಿ ಪ್ರೆಸ್ ಬಾಗಲಕೋಟೆ ತಾ. ಲಿಂಸೂಗೂರ

# .... ಅಭಿಪ್ರಾಯ ....

ಅಮರನಾಥ ಶಾಸ್ತ್ರಿಗಳವರು ತಾವು ಬರೆದಿರುವ ಶ್ರೀ ಘನಮಠೇಶ ವಚನಕ್ಕೆ ಅಭಿಪ್ರಾಯ ಬರೆಯಬೇಕೆಂದು ಕೇಳಿದಾಗ, ಹಿರಿಯರೂ ವಿದ್ವಾಂಸರೂ ಆದ ಶಾಸ್ತ್ರಿಗಳವರ ಈ ಗ್ರಂಥಕ್ಕೆ ಕಿರಿಯನಾದ ನಾನು ಅದೆಂತು ಬರೆಯಬಲ್ಲೆನೆಂದು ತಬ್ಬಿಬ್ಬಾದೆ. ಆದಾಗ್ಯೂ ಹಿರಿಯರ ಕೇಳಿಕೆಗೆ ಆಗದು ಎಂಬ ಅಗೌರವದ ನುಡಿಯನ್ನು ನುಡಿಯಲಾರದೆ ಆಗಲೆಂದು ಒಪ್ಪಿ ಕೊಂಡಿದ್ದೇನೆ. ಶ್ರೀ ಘನಮಠೇಶರನ್ನು ಪ್ರಾರ್ಥಿಸಿ ಆ ಶಿವಯೋಗಿಯ ಪ್ರೇರಣೆಯಂತೆ ಅ ಮ ರ ನಾ ಥ ಶಾ ಸ್ತ್ರಿ ಎಂಬ ಸಪ್ತಾಕ್ಷರ ಆದಿಯಲ್ಲಿಟ್ಟುಕೊಂಡು ಅಭಿಪ್ರಾಯ ಬರೆಯಲು ಪ್ರಾರಂಭಿಸಿದ್ದೇನೆ.

ಮನುಷ್ಯ ಹುಟ್ಟುತ್ತಾನೆ, ಸಾಯುತ್ತಾನೆ. ಈ ಸಂಸಾರ ಸಾಗರ ದಾಟಲು ಇಲ್ಲಿಯ ವಚನಗಳು ಪಾರಮಾರ್ಥದ ಪರಮ ಸೋಪಾನವಾಗಿವೆ.

ರನ್ನ ರಾಘವಾಂಕ ಹರಿಹರ ಮುಂತಾದ ಕವಿಗಳು ಅನೇಕ ಕೃತಿಗಳನ್ನು ರಚಿಸಿದ್ದಾರೆ ಅವೆಲ್ಲ ಪಂಡಿತರಿಗೆ ಮಾತ್ರ ಮೀಸಲಾಗಿದ್ದು ಇಲ್ಲಿಯ ವಚನಗಳು ಸಾಮಾನ್ಯನ ಹೃದಯಕ್ಕೂ ಮುಟ್ಟುವಂತಿವೆ.

ನಾಡ ನುಡಿಯಲ್ಲಿಯೇ ರಚಿತವಾದ ಈ ಗ್ರಂಥ ದಶಮ ಪಥಗಳಲ್ಲಿ ಸಹಸ್ರದ ಮೇಲೊಂದು ಮುಖಗಳಿಂದ ಹೊರಹೊಮ್ಮಿವೆ.

ಥಳಕು ಬೆಳಕಿನ ಈಗಿನ ಕಾಲಕ್ಕೆ ಈ ಗ್ರಂಥದ ಅವಶ್ಯಕತೆ ಬಹಳವಿದೆ.

ಶಾಸ್ತ್ರ ಪುರಾಣಗಳಂತೆ ಈ ವಚನಗಳು ಮುಕ್ತಿಮಾರ್ಗ ತೋರುತ್ತವೆ.

ಸ್ತ್ರೀ ಪುರುಷರಾದಿಯಾಗಿ ಈ ಗ್ರಂಥ ಕೊಂಡೋದಿರಲ್ಲಿ ಗ್ರಂಥಕರ್ತರಿಗೆ ಹೆಚ್ಚಿನ ಪುರಸ್ಕಾರ ಸಿಕ್ಕು, ಅವರಿಂದ ಇನ್ನು ಹಲವಾರು ಗ್ರಂಥಗಳು ಹೊರ ಬರುವಂತೆ 'ಶ್ರೀ ಶಿವಶಕ್ತಿಯರು' ಆಯುರಾರೋಗ್ಯ ಭಾಗ್ಯಾದಿಗಳನ್ನೀಯಲೆಂದು ಆ ಜಗನ್ನಿಯಾಮಕರಾದ ಶಿವಶಕ್ತಿಯರನ್ನು ಪ್ರಾರ್ಥಿಸಿ ಈ ಕಿರಿಯನ ಚಿಕ್ಕದೊಂದು ಅಭಿಪ್ರಾಯ ಮುಗಿಸುತ್ತೇನೆ

ಚನ್ನೇಶ ಗಾರವಾಡಮಠ B. A.
ಶ್ರೀ ಶಿವಶಕ್ತಿ ಪ್ರೆಸ್, ಬಾಗಲಕೋಟ.

ಶ್ರೀ ವೀರವಿರಾಗಿ ಘನಮಠೇಶ ವಚನ (ತ್ರಿಪದಿ) ಮತ್ತು
ವೈರಾಗ್ಯ ಚಕ್ರವರ್ತಿ ಘನಮಠೇಶ (ಗದ್ಯ)
ಇವೆರಡು ಗ್ರಂಥಗಳ ಮುದ್ರಣಕ್ಕಾಗಿ

## ಸಹಾಯ ಸಲ್ಲಿಸಿದ ಮಹನಿಯರು

| ರೂ. ಪೈ. | |
|---|---|
| ೧೦೧=೦೦ | ಶ್ರೀ ಬಸವರಾಜಪ್ಪನವರು ಅಂಕಲಗಿ ಶಾಖಾನಿರಂಪಾದಿಮಠ ಮು॥ ತಲಿಕಟ್ಟು |
| ೨೫=೦೦ | ವೇ। ಸಂಗಯ್ಯನವರು ಹಿರೇಮಠ ನಂದಾಪೂರ (ಸಿದ್ದಾಪೂರ) |
| ೫೦=೦೦ | ವೇ॥ ಬಸಲಿಂಗಯ್ಯನವರು ಹಿರೇಮಠ ಮುಳ್ಳೂರ |
| ೭೫=೦೦ | ನಾಗಣ್ಣನವರು ಕಾಂಗನೂರ ಮುಳ್ಳೂರ |
| ೫೦=೦೦ | ಶ್ರೀ ಚಂದ್ರಪ್ಪನವರು ಸಾಹು. ಕೆಸರಟ್ಟಿ ಕೆ. ಹೊಸಳ್ಳಿ |
| ೫೦=೦೦ | ಶ್ರೀ ವಿರುಪಾಕ್ಷಗೌಡರು ಪೋ. ಪಾಟೀಲ ಮಲಟ |
| ೧೦೧=೦೦ | ಶ್ರೀ ಲಿಂಗಣ್ಣನವರು ಸಾಹು. ಕನಕಗಿರಿ ಸಾ॥ ಮಳ್ಳಿ |
| ೫೧=೦೦ | ಕುರಕುಂದಿ ಬಸಾಪೂರ ಹನಮಂತ |
| ೫೧=೦೦ | ಶ್ರೀ ಎಮ್. ವ್ಹಿ. ಮುದ್ದಯ್ಯ ಟ್ಯಾಕ್ಸ ಪ್ರ್ಯಾಕ್ಟೀಸನರ |
| ೧೦೧=೦೦ | ,, ಶಿದ್ಧನಗೌಡ್ರ ವಿ. ಮಾ. ಪಾಟೀಲ ಹಿರೇಯರದಿಹಾಳ |

ಇದಲ್ಲದೆ ನಮ್ಮ ಮನೆತನದ ಮೂಲ ಶಿಷ್ಯರುಗಳು ತಮ್ಮ ತಮ್ಮ ಶಕ್ತ್ಯಾನುಸಾರ ಸಹಾಯ ಸಲ್ಲಿಸಿದ್ದಾರೆ. ಇವರಿಗೆಲ್ಲ ಶ್ರೀ ಘನಮಠ ಶಿವಯೋಗಿಯು ಆಯುರಾರೋಗ್ಯ ಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ-

ತಾ॥ ೨೨-೧೨-೭೯ —ಗ್ರಂಥಕರ್ತರು

# .... ಅನುಕ್ರಮಣಿಕೆ ....

ವಿಷಯ                                                        ಪುಟ

## ಪ್ರಥಮ ಪಥ



## ದ್ವಿತಿಯ ಪಥ



## ತೃತೀಯ ಪಥ



## ಚತುರ್ಥ ಪಥ



## ಪಂಚಮ ಪಥ

## ಷಷ್ಠಮ ಪಥ



## ಸಪ್ತಮ ಪಥ




## ಅಷ್ಟಮ ಪಥ



## ನವಮ ಪಥ



## ದಶಮ ಪಥ



ಶ್ರೀ ಗುರು ವೈರಾಗ್ಯ ಚಕ್ರವರ್ತಿ
ಘನಮಠದ

**ಶ್ರೀ ನಾಗಭೂಷಣ
ಶಿವಯೋಗಿಗಳು**

ಸಂತೆಕೆಲೂರು



ಶ್ರೀ ಮ. ನಿ. ಪ್ರ.

**ಶ್ರೀ ಶಿವಯೋಗಿ
ಮಹಾಸ್ವಾಮಿಗಳು**

ಘನಮಠೇಶಾಶ್ರಮ
ಸಂತೆಕೆಲೂರು

॥ ಶ್ರೀ ಗುರು ಘನಮಠೇಶಾಯ ನಮಃ ॥

ಶ್ರೀ ಮದ್ವೈರಾಗ್ಯ ನಿಧಿ, ವೈರಾಗ್ಯ ಚಕ್ರವರ್ತಿ, ವೀರ ವಿರಾಗಿ ಇತ್ಯಾದಿ ಪುಣ್ಯವಾಚಕ ಶಬ್ದಗಳಿಂದ ಕರ್ನಾಟಕದ ನಾನಾ ದಿಶೆಗಳಲ್ಲಿ ಪ್ರಖ್ಯಾತರಾದ ಶ್ರೀ ನಾಗಭೂಷಣ ಘನಮಠ ಶಿವ ಯೋಗಿಗಳ ತ್ರಿಪದಿಗಳನ್ನು ಸರ್ವಜ್ಞಮೂರ್ತಿಯ ತ್ರಿಪದಿಗಳಂತೆ ಘನಮಠ ಶಿವಯೋಗಿಗಳ ಅಂಕಿತದಿಂದಲೇ ರಚಿಸಲಾಗಿದೆ.

# ಘನಮಠ ಶಿವಯೋಗಿಗಳ ಶರಣಾರ್ಥಿಯ

## — ಪದ್ಯಗಳು —

[ ಭಾಮಿನಿ ಷಟ್ಪದಿ ]

ಹರನನುಜ್ಞೆಯ ಪೊತ್ತು ತನ್ನಯ ।
ಶಿರದಿರಿಸಿ ಗಣವರನ ಚಿಕ್ಕಳೆ ।
ಧರೆಯೊಳ್ ಆಂಧ್ರ ಪ್ರದೇಶದಾರುರಿನ ಮಹೇಶ್ವರರ ॥
ಶರಣ ದಂಪತಿಗಳಿಗೆ ಶಿಶುವಾ ।
ಗಿರುವ ಶ್ರೀ ಗುರು ಕೃಪೆಯ ಪಡೆದಿಹ ।
ತರುಳ ಶ್ರೀ ಗುರು ನಾಗಭೂಷಣ ಯೋಗಿಶರಣಾರ್ಥಿ ॥೧॥

ಕಾಯದುರ್ಗುಣಗಳನು ಶ್ರೀ ಗುರು ।
ರಾಯ ಘನಮಠ ಚರವರರು ಸದು ।
ಪಾಯದಿಂ ದೀಕ್ಷಾತ್ರಯದಿ. ಮಲತ್ರಯಗಳಳಿಯಲ್ಕೆ ॥
ಮಾಯೆಯನು ಮುರುದಿಕ್ಕಿ ವಿರತಿಯ ।
ಆಯತವ ತಾನಂದು ಪೂರ್ವಾ ।
ಚಾರ್ಯ ಪಥದಲಿ ಮೆರದ ಘನಮಠಯೋಗಿ ಶರಣಾರ್ಥಿ ॥೨॥

ಧೀರ ವಿರತ ವಿರಾಗ ಮಾರ್ಗ ವಿ |
ಚಾರ ಶಿವಮತ – ಶ್ರೇಷ್ಠ ತತ್ವದ |
ಸಾರವನು ಧಾರುಣಿಗೆ ಭೋದಿಸಲವನು ಊರುರ್ಗೆ ||
ಚಾರುತರ ಬಸವಾದಿ ಪ್ರಮಥ ಪು |
ರಾರಿಯಾನ್ವಯ ಷಟಸ್ಥಲವನು |
ದ್ಧರಿಸಿದ ಗುರು ಘನಮಠೇಶ್ವರ ಯೋಗಿ ಶರಣಾರ್ಥಿ ೩||

ಕಂತುವನೇ ಕಡೆಗಣಿಸಿ ಮಾನಸ |
ದಂತರಂಗದಿ ಕಂತು ಹರಮತ |
ಚಿಂತೆಯಿಂದವಚರಿಸುತ್ತಲಿ ಕರುನಾಡ ಪ್ರಾಂತದಲಿ ||
ಅಂತಕಾರಿಯ ಭಕ್ತನಿಕರನಿ |
ರಂತರದಿ ಹರತತ್ವ ಭೋದಿಸು |
ತಂತ್ಯಸಂತೆಕೆಲೂರ ಘನಮಠಯೋಗಿ ಶರಣಾರ್ಥಿ ||೪||

ಕಾಲಕಾಮರ ಕಾಟಕಳಿದು ವಿ |
ಶಾಲ ಕನ್ನಡನಾಡಿನೊಳು ಶಿವ |
ಲೀಲೆಗಳ ತೋರುತ್ತ ಬಸವ ಪುರಾತನರ ವಚನ ||
ಜಾಲವನು ಪಸರಿಸುತ – ಕರುಣಾ |
ಶಾಲಿ ವೀರ ವಿರಾಗಿ ಮಹಿಮಾ |
ಶಾಲಿ ಘನಮಠ ಯೋಗಿ ಚರಣಕೆ ಶರಣು ಶರಣಾರ್ಥಿ ||೫||

# ಶ್ರೀ ಗುರುಘನಮಠೇಶ ವಚನ

## ಪ್ರಥಮ ಪಥ

### – ಗುರುದೇವತಾದಿಗಳ ಧ್ಯಾನ –

ಗುರುವೇ ಮದ್ಗುರು ಹರನು। ಹರನು ಮುದ್ಗುರು ದೈವ ।
ನರನೆಲ್ಲಕಾರ್ಯ ಮಂಗಲಕೆ–ಧರೆಯೊಳಗೆ ।
ಹರನೆ ಗುರುವಾದ– ಘನಮಠ ॥೧॥

ಹರನೇ ಗುರುರೂಪದಿಂ । ಧರೆಗಿಳಿದು ಬಂದಿಹನು ।
ಅರಿಯಲ್ಕೆ ನರಗೆ ಹರತತ್ವ ಆದಿಯೊಳು ।
ಗುರುಧ್ಯಾನ ಮುಖ್ಯ– ಘನಮಠ ॥೨॥

ಜಗದೊಳಗೆ ಮೊದಲಿಂದ । ನಗರೋರಧಿಕವೆಂದು ।
ಪೊಗಳುವವೆಲ್ಲ । ಶೃತಿ ಶಾಸ್ತ್ರ ಪೌರಾಣ ।
ಸೊಗಸು ಗುರುಧ್ಯಾನ– ಘನಮಠ ॥೩॥

ಅಜಹರಿ ಸುರರೆಲ್ಲ । ಭಜಿಸಲ್ಕೆ ಗುರುಧ್ಯಾನ ।
ತ್ರಿಜಗ ಪೂಜಿತರು । ಮಾನವನೇ ಬಿಡದಿರೈ ।
ನಿಜದಿ ಗುರುಧ್ಯಾನ– ಘನಮಠ ॥೪॥

ಧ್ಯಾನಕ್ಕೆ ಗುರು ಮೊದಲು । ಮಾನಕ್ಕೆ ವಸ್ತ್ರಗಳು ।
ಮಾನಿನಿಗೆ ಮುಖ್ಯ । ಗುಣ ತತಿಯು ಮಾನವಗೆ ।
ಧ್ಯಾನ ಗುರು ಮುಖ್ಯ– ಘನಮಠ ॥೫॥

ಪಾಪಿ ಮಾನವ ಹೃದಯ ।ತಾಪವನು ಕಳಿಯಲ್ಕೆ ।
ಆ ಪರಬ್ರಹ್ಮಗುರು ಮೂರ್ತಿಧ್ಯಾನವನು ।
ನೀ ಪಠಿಸು ನಿತ್ಯ– ಘನಮಠ ॥೬॥

ಘೋರ ಸಂಸಾರದಾ ಪಾರ ಸಾಗರದಿಂದ ।
ಪಾರುಗಾಣಲ್ಕೆ ಮಾನವಗೆ ಗುರುವರನ ।
ಚಾರುಪದ ನೌಕೆ— ಘನಮಠ ||೭||

ಗುರುನಿಂದೆ ಮಾಡಲ್ಕೆ । ಹರಮುನಿವ ಮಾನವಗೆ ।
ದೊರಕದದು ಮುಕ್ತಿ ಭವದುಟ್ಟು ಸಾವುಗಳು ।
ಪರಿಹಾರವು ಇಲ್ಲ— ಘನಮಠ ||೮||

ಹರಿಯುಜರ ನಿಂದೆಯು ಘ । ಹರಧ್ಯಾನದಿಂ ನಾಶ ।
ಹರನಿದುರುಗೈದ । ದುಷ್ಕೃತಿಯು ಗುರುಕಳೆವ ।
ಗುರುದ್ರೋಹ ಬಿಡದು— ಘನಮಠ ||೯||

ತಂದೆ ತಾಯ್ಗುರು ನರಗೆ । ಬಂಧು ಬಳಗವು ಎಲ್ಲ ।
ಸಂದೇಹವಳಿದು ಭವದುರಿಯು ದಾಟಲ್ಕೆ ।
ಇಂದು ಶಿಲೆ ಗುರುವು— ಘನಮಠ ||೧೦||

ಪರಮ ಪಾವನ ಗುರುವೇ । ಉರುಭಕ್ತಿಜ್ಞಾನಕ್ರಿಯೆ ।
ಕರುಣಿಸೆನಗೀಗ ನರಜನ್ಮ ಸಫಲತೆಯ ।
ಸ್ಥಿರಮಾಡು ಗುರುವೇ । ಘನಮಠ ||೧೧||

ಅನುಮಾನವಳಿದೆನ್ನ । ತನು ಮನವು ಧನ ನಿಮ್ಮ ।
ದೆನಿಸಿಕೊಂಡೀಗ । ಮನದ ಚಪಲತೆಯುಳಿದು ।
ಮನುಜನೆನಿಸಯ್ಯ— ಘನಮಠ ||೧೨||

ಯೋನಿಮುಖಜನನವನು । ಮಾಣಿಸುವ ಕೃಪೆಮಾಡು ।
ಸ್ವಾನುಭವಿಯೆನಿಪ ಸುಖದೋರುತವಧ್ಯಾನ ।
ಮಾನಸದಿ ನಿಲಿಸೋ । ಘನಮಠ ||೧೩||

ಶಿವಗುರುತತ್ವಧ್ಯಾನ । ಭಾವದೊಳು ಸ್ಥಿರವಾಡು ।
ಆವರಿಸಿಬಂದ ಭವಜಾಲ ದೂರ್ವಾಡು ।
ಭಾವಶುದ್ಧಾತ್ಮ- ಘನಮಠ ॥೧೪॥

ತ್ರಿಗುಣ ವಿರಹಿತ ಗುರುವು । ಜಗಕೆತಾನುಪಕಾರಿ ।
ಅಗಣಿತ ಘನಾಶ ಮಾಡುವದು ಗುರುಮಹಿಮೆ ।
ಪೊಗಲಳಳವಲ್ಲ- ಘನಮಠ ॥೧೫॥

ಮೂಢ ಮನುಜನೆ ನೀನು । ಮಾಡಿದಡೆ ಗುರುಧ್ಯಾನ ।
ಮಾಡುವದುದುರಿತ ದುಷ್ಕೃತಿಯ ವಿಶ್ವದೊಳು ।
ಪ್ರೌಢನೆಂದನಿಸೊ- ಘನಮಠ ॥೧೬॥

ಕೋಪತಾಪಗಳೆಂಬ । ಪಾಪರಾಶಿಯನಳಿದು ।
ಶ್ರೀ ಪದದ ಮಹಿಮೆ ಗುರುವರನಭಜಿಸಿ ಚಿದ್ ।
ರೂಪನಾಗುವೆಯಾ- ಘನಮಠ ॥೧೭॥

ತೋರಿಕೆಡುತಿರುವದೀ । ಘೋರತರ ಸಂಸಾರ ।
ಪಾರುಗಾಣಲ್ಕೆ ಗುರುವರನ ಸೇವೆಯನು ।
ಮೀರದಿರು ಮನುಜ- ಘನಮಠ ॥೧೮॥

## ★ ಗುರು ಮಹಿಮೆ ★

ಆಶೆ ಮೂರನು ಮೀರಿ । ಹೇಸಿ ಗುಣವಳಿದು ನಿ ।
ರಾಶೆಯಿಂಧ್ಯಾನ ಮಾಡಲ್ಕೆ ಗುರುವರನು ।
ಪೋಷಿಸುವ ಸತ್ಯ-ಘನಮಠ ॥೧೯॥

ಮಡದಿ ಮಕ್ಕಳ ಮೇಳ। ದೊಡಗೂಡಿ ಮುದದಿಂದ ।
ಕೊಂಡುಕೊಳುವ ಸಮಯ ನಡೆವಾಗ ನುಡಿವಾಗ
ನುಡಿಯೊ ಗುರುನಾಮ। ಘನಮಠ ॥೨೦॥

ಸತಿಸುತರು ಮತಿ ಘನವು। ಶತಕೋಟಿ ಧನವಿರಲು।
ಸ್ಥಿತಿವಂತ ನೆನಸಿ ಬಾಳಿನೊಳು ಗುರುಧ್ಯಾನ।
ಚ್ಯುತಿ ಇರಲು ವ್ಯರ್ಥ – ಘನಮಠ ॥೨೧॥

ಗುರುವಿಲ್ಲದಾ ವಿಧ್ಯೆ। ಬರಡೆಮ್ಮೆಯಾ ಹಯನ।
ಅರಿವಿಲ್ಲದಾತ್ಮ ಎನಿಸಿದ್ದರೂ ಜಗದಿ।
ನರಜನ್ಮ ವ್ಯರ್ಥ– ಘನಮಠ ॥೨೨॥

ತನ್ನ ತಾನರಿಯಲ್ಕೆ। ಮುನ್ನ ಗುರು ಬೋಧೆಯನು
ಚನ್ನಾಗಿ ಪಡೆದು ಮಾನವನು ವಿಶ್ವದೊಳು।
ಮುನ್ನಡೆಯಬೇಕು– ಘನಮಠ ॥೨೩॥

ಗುರುಕೃಪಾ ಹೀನರಿಗೆ। ಪರಿತಾಪ ಬಿಡಪೆಂದು।
ಹರನೆ ಗುರುರೂಪ ಮಾನವರ ಸುಖದುಃಖ।
ಗುರುಕೃಪೆಯೊಳುಂಟು– ಘನಮಠ ॥೨೪॥

## ★ ಗಣೇಶ ವಚನ ★

ಕರಿವದನ ಚರಣವನು। ಹರುಷದಿಂ ನಮಿಸುತ್ತ।
ಸ್ಥಿರವಾಗಲೆಂದೀ ತ್ರಿಪದಿಗಳ ರಚಿಸುವೆನು।
ಹರತನಯಾ– ಘನಮಠ ॥೨೫॥

ಮೂಷಕವಾಹನನೆ। ಪೋಷಿಸೆನ್ನಯ ಕೃತಿಯ।
ಭಾಷೆ ಕನ್ನಡದ ನುಡಿಯೊಳಗೆ ತ್ರಿಪದಿಗಳ।
ನಾ ಸರವಗೊಳಿಪೆ– ಘನಮಠ ॥೨೬॥

ಲಂಬೋದರಾ ನಸನೆ। ಶಂಭುಸುತ ಚರಣಗಳ।
ನಂಬಿ ರಚಿಸಿರುವ ತ್ರಿಪದಿಗಳ ಜಗದಲ್ಲಿ।
ಸಂಭ್ರಮದಿ ಇರಿಸೊ– ಘನಮಠ ॥೨೭॥

ಗಣವರನೆ ಗಣಪತಿಯ| ತ್ರಿಣಯ ಪ್ರೇಮದ ಸುತನೆ|
ಎಣಿಸ ಬೇಡಯ್ಯ ಎನ್ನ ಅಪರಾಧನು|
ಮಣಿವೆ ತವಪಾದಕೆ- ಘನಮಠ ||೨೮||

ಅಂಗಜಾರಿಯ ಸುತನ| ಮಂಗಲದಕಾರ್ಯದೊಳು|
ಹಿಂಗದನವರತ ಪೂಜಿಸಲು ಮಾನವನು|
ತುಂಗಪದ ಪಡೆವ- ಘನಮಠ ||೨೯||

ಮಂಗಲಕೆ ಮೂಲಶಿವೆ| ಯಂಗ ಜಾತನು ಜಗದೆ
ಅಂಗವಾಗಿರುವ ಹದಿನಾಲ್ಕು ವಿದ್ಯೆಗಳ|
ಸಂಘಕ್ಕೆ ಒಡೆಯ- ಘನಮಠ ||೩೦||

ಗಣಪತಯ ಗುಣಮಣಿಯ| ತ್ರಿಣಯ ಸುತ ಜಗನಿನ್ನ|
ನೆನೆಸುವದು ನಿತ್ಯ ಮಂಗಲವವೊದಲಲ್ಲಿ|
ಗಣಶ್ರೇಷ್ಠ ಪೊರೆಯೊ- ಘನಮಠ ||೩೧||

ಲಂಬೋದರಾನನನೆ| ಅಂಬಿಕಾ ಸುತನೆಜಗ|
ನಂಬಿ ಭಜಿಸುವದು ತವನಾಮ ಭಕ್ತಿಯೊಳು|
ಶಂಭುಸುತ ಪೊರೆಯೊ- ಘನಮಠ ||೩೨||

## ★ ಶಿವಮಹಿಮೆ ★

ಶ್ರೀ ಮಹಾದೇವತವ ನಾಮ ಭಜಿಸಲ್ಕೆ ಮನ|
ತಾಮಸವು ನಾಶವೆಂದರಿದು ಮನು ಮುನಿ|
ಸ್ತೋಮ ಭಜಿಸುವದು- ಘನಮಠ ||೩೩||

ಭಕ್ತರಾಧೀನತವ| ನಿತ್ಯವಾಸವು ಸುಜನ|
ಚಿತ್ತದೊಳ್ ನೆಲಿಸಿ ಜಗವ ಪಾಲಿಸುವ ಶಿವ|
ಶಕ್ತಿಸಮೇತ- ಘನಮಠ ||೩೪||

ನಂದಿವಾಹನ ಶಿವನೆ। ಕಂದನಾದೆನ್ನ ಭವ।
ದಂದುಗವ ಹರಿಸಿ ಕಾಪಾಡು ಕರುಣದಲಿ।
ಇಂದು ಶೇಖರನೆ- ಘನಮಠ ॥೩೫॥

ದಶಕಂಠ ರಾವಣನ। ಅಸಮ ಭಕ್ತಿಗೆ ಮೆಚ್ಚಿ।
ವಶವಾದಿ ಲಿಂಗರೂಪದೊಳು ಪಶುಪತಿಯು।
ಅಸಮಾಕ್ಷ ಶಂಭೋ- ಘನಮಠ ॥೩೬॥

ಕರಚರಣದಿಂದೆನ್ನ। ಶರೀರೇಂದ್ರಿಯಾದಿಗಳ।
ಗುರುತರಾದೆನ್ನ ಭವಮೂಲವನು ಹರಿದು।
ಚರಣಕರ್ಪಿಸುವೆ- ಘನಮಠ ॥೩೭॥

ಮೋಕ್ಷದಾಯಕ ಪ್ರಮಥ। ಪಕ್ಷಸುರಗಣ ಸೇವ್ಯ।
ತ್ರ್ಯಕ್ಷ ದರ್ಪದದಕ್ಷ ವೈರಿಪಿತಮದನಾರಿ
ರಕ್ಷಿಸೈಜಗವ- ಘನಮಠ ॥೩೮॥

ಅಂಗಜಾರಿಯ ಶಿರದಿ। ತಿಂಗಳನಸೂಡಿವನೆ।
ಮಂಗಲ ಪ್ರಭೆಯ ಭಸಿತಾಂಗ ಶಿವಸರ್ವ।
ಮಾಂಗಳೆಯ ಪ್ರಾಣ- ಘನಮಠ ॥೩೯॥

ಶರಣ ಜನ ಹೃದಯ ಮಂ। ದಿರವಾಸ ಸುರನಮಿತ।
ಕರುಣಾಳು ಶಂಭೋ ಚಿರಜೀವಿಯೆನಿಸಿವನು।
ತರುಳ ಮಾರ್ಕಂಡೇಯ- ಘನಮಠ ॥೪೦॥

ಸೋಮಶೇಖರನೆಂಬ। ನಾಮ ತ್ರೈ ಭುವನಕ್ಕೆ।
ಸ್ವಾಮಿ ನೀನಯ್ಯ ತಾರಕನೆ ಮಾರಕನೆ।
ಕಾಮ ಸಂಹರನೆ- ಘನಮಠ ॥೪೧॥

ಅಗಜೆಯರಸನೆ ನಿನ್ನ। ಅಗಣಿತದ ಮಹಿಮೆಗಳ।
ಪೊಗಳಲವಲ್ಲ। ನಿಗಮ ಗೋಚರ ನಿತ್ಯ।
ಸುಗುಣಾತ್ಮ ಶಂಭೋ- ಘನಮಠ ॥೪೨॥

ಧ್ಯಾನ ಮಾಡಲಿಬೇಡ। ಹೀನದೇವರ್ಕಳನು।
ಮಾನವಗೆ ಮುಖ್ಯ ಮಹದೇವನೊಬ್ಬ ಜಗ।
ಸ್ಥಾಣು ಅವಿನಾಶಿ- ಘನಮಠ ॥೪೩॥

ಸಾವಿರಕೆ ಮಿಗಿಲಾದ। ದೇವರ್ಕಳಿಂದೇನು।
ಭಾವಜಾರಿಯನೊಮ್ಮೆ। ಬಾವದಿಂ ಭಜಿಸಲ್ಕೆ।
ಸಾವು ದೂರಹುದು- ಘನಮಠ ॥೪೪॥

ಹೊತ್ತು ಗೊತ್ತಿನದಲ್ಲ। ನಿತ್ಯನೂ ನೀನಲ್ಲ।
ಚಿತ್ತಜಾರಿಯನು ಭಜಿಸುತ್ತ ನಿತ್ಯದೊಳು।
ಮೃತ್ಯುಜಯನಾಗೋ- ಘನಮಠ ॥೪೫॥

ಗಂಗೆಗೌರಿಯ ಸ್ನೆಹ। ಅಂಗದೊಳ್ ಸ್ಥಿರವಾಗಿ।
ಮಂಗಲಕೆ ನಿತ್ಯ ಮಂಗಲನು ಮಹದೇವ।
ಸಂಗವೇ ಶ್ರೇಷ್ಠ- ಘನಮಠ ॥೪೬॥

ಹರಗಿರಿಜೆದ್ವಯರ ಶುಭ। ಕರವೆನಿಪನಾಮವನು।
ಸ್ಮರಿಸಿದೊಡೆ ನರನ। ಬಂದನವು ಬಯಲಾಗಿ।
ಚಿರಜೀವಿಯಾಗ್ವ- ಘನಮಠ ॥೪೭॥

ಬಾಲ ಶಶಿಧರ ಶಿವನೆ। ಪಾಲನೇತ್ರ ಪುರಾರಿ।
ಪಾಲಿಸೈ ಜಗವ ಹರ ಭಕ್ತ ಹೃದಯವೇ।
ಆಲಯವು ನಿನಗೆ- ಘನಮಠ ॥೪೮॥

ನಂದಿವಾಹನದೇವ। ವೃಂದ ವಂದಿತ ಶರಣ।
ಸಂದೇಹದೂರ ಸನಕಾದಿ ಯೋಗಿನುತ।
ಮಂದರವಾಸ  ಘನಮಠ ||೨೯||

ಗೌರೀಶ ಸುಜನಭವ। ದೂರ ಭುವನೋದ್ಧಾರ।
ಮಾರ ಮರ್ಧನ ಭೂರಿ ಸುರಗಣಾರ್ಜಿತ ಪಾದ।
ತೋರುದಯ ಶಂಭೋ-  ಘನಮಠ ||೩೦||

ಮನ ಮುನಿ ಜನ ಮನೋ। ವನಜ ಮರಾಳ ಪಾ।
ವನನಾಮ ವಿಶ್ವ ವ್ಯಾಪಕ ಸ್ಥಾಣುನರರುದ್ರ।
ಘನಮಹಿಮ ಶಂಭೋ-  ಘನಮಠ ||೩೧||

ನಂದ ನಂದನ ಮಿತ್ರ। ಸಿಂಧೂರ ಮೃಗರಾಜ।
ಬೃಂದಾರಕ ಗಣವಂದ್ಯ ಶ್ರೀಪತಿ ಸಖನೆ।
ವಂದಿಪೆನು ನಿತ್ಯ-  ಘನಮಠ ||೩೨||

ಶರಣ ಜನಶರೀರವು। ಶರಿಧವೆಂದೆಂಬ ಶೃತಿ।
ಇರುವದೆಂದರಿದೂ ಚರಣ ಸೇವಿಪೆ ನಿನ್ನ।
ಕರುಣ ನೀಡೋರೊ-  ಘನಮಠ ||೩೩||

ಹರನೆ ನೀ ಧರೆಯೊಳಗೆ। ಗುರು ಚರರ ರೂಪದೊಳು।
ಚರಿಸ್ಯಾಡುತಿರುವೀ ನೀ ನಿಲ್ಲದಾತಾಣ।
ಧರಣಿಯೊಳಗಿಲ್ಲ-  ಘನಮಠ ||೩೪||

ಅಣುರಣಿಯನಾಗಿ ನೀ। ಹೊಣೆಯಾಗಿ ವಿಶ್ವಕ್ಕೆ।
ದಣಿಯಾಗಿ ವಿಶ್ವಂಭರ ವಿಶ್ವದೊಲ್ಲಭನೆ।
ಸಾಣು ನಿಜನಾಮ-  ಘನಮಠ ||೩೫||

### ★ ಶಾಂಭವಿ ವಚನ ★

ಅಂಬ ಜಗದಂಬ ಹೇ। ರಂಭ ಶುಂಭಾರಿ ಗುಹ।
ಗಂಬಾಖಿಲಾ ವಿಶ್ವಪತಿ ಶಂಭು ವಾಮಾಂಗ।
ದಿಂಬುತವ ಪೀಠ- ಘನಮಠ ||೫೬||

ಕಾಳಿ ಶಾಂಭವೀ ದುರ್ಗೆ। ಮೌಳಿಶಶಿಯರ್ಧಾಂಗಿ।
ಪಾಲಿಸೌ ಜಗವೆಲ್ಲ ಜೀವಕೋಟಿಗೆ ಮಾತೃ।
ಮೂಲವಾಗಿರುವೀ- ಘನಮಠ ||೫೭||

ಗಿರಿಜೆ ಗಿರ್ವಾಣಿನುತೆ। ಹರನರ್ಧವಾಮಾಂಗ।
ವಿರುವ ಧರೆ ಮಾತೆ ಚರಣ ಕಿಂಕರನನ್ನ।
ಕರುಣಿ ಕಾಪಾಡೌ- ಘನಮಠ ||೫೮||

ಪರ್ವತಾತ್ಮಜೆ ಲೋಕ। ಕೊರ್ವಳೇ ತಾಯಾಗಿ।
ಸರ್ವಕಾಲದೊಳು ರಕ್ಷಿಸಿಟಿ ನಿನಗೆ ಸಮ।
ರಿರ್ವರಾರ್ಜಗದಿ- ಘನಮಠ ||೫೯||

ಗುಹಗಣಪರಿಗೆ ತಾಯಿ। ಇಹಪರಕೆ ಕಾರಣಳು।
ಮಹಮಾಯೆ ನಿನ್ನ ಲೀಲಾ ವಿನೋದದಲಿ।
ಅಹರಾತ್ರಿ ವಿಶ್ವ- ಘನಮಠ ||೬೦||

### ★ ಷಣ್ಮುಖ ವಚನ ★

ಮಾರಕಾಸ್ತ್ರವಧರಿಸಿ। ತಾರಕನ ಸಂಹರಿಸಿ।
ಸಾರ ಪಟುಸ್ಥಳದ ಮೂರ್ತಿ ಷಣ್ಮುಖಸ್ವಾಮಿ।
ತೋರುತವ ಕರುಣೆ- ಘನಮಠ ||೬೧||

ಶಿವನ ಸುತ ನಿನಗಾಗಿ। ನವಿಲು ವಾಹನನಾಗಿ।
ಭವ ಮೂಲ ಜಡರವಳಿದ ಕಾರ್ತಿಕ ಸ್ವಾಮಿ।
ತವಕೃಪೆಯ ಬೇಡ್ವೆ- ಘನಮಠ ||೬೨||

## ★ ವೀರಭದ್ರ ವಚನ ★

ದಕ್ಷಧ್ವರಕೆ ಶಿವಾ। ಪೆಕ್ಷೆಯಿಂ ನಡೆತಂದು।
ಶಿಕ್ಷಿಸಿದ ಶಿವನಿಂದಕರ ವೀರಭದ್ರಶಿವ।
ಪಕ್ಷದಕ್ಷಾರಿ- ಘನಮಠ ||೬೩||

ಹರನಿಂದಕರ ವೈರಿ। ವರಕಾಳಿ ಪತಿದೈವ।
ಧರೆಗಿಳಿದು ಬಂದ ಬಲಭದ್ರ ಶಿವಕುವರ॥
ಸರಿಯಾರು ಜಗದಿ- ಘನಮಠ ||೬೪||

## ★ ನಂದೀಶ ವಚನ ★

ಹರನಂತರಾತ್ಮನಾ ವರಧರ್ಮಕರಿಗೊಂಡು।
ಧರೆಯನುದ್ಧರಿಸಲಿಳೆಗಿಳಿದ ನಂದೀಶ।
ವರಧರ್ಮ ಮೂರ್ತಿ- ಘನಮಠ ||೬೫||

ಅದಿಂದು ಮುಂದೆ ಬಿಡವೆಂದೆಂದಿಗೂ ಶಿವನ।
ನಂದಿವಾಹನನೇ ಮೂಜಗವ ರಕ್ಷಿಸುವ।
ತಂದೆ ವೃಷಬೇಶ- ಘನಮಠ ||೬೬||

ನಂದಿನಾರದ ಬೃಂಗಿ। ವೃಂದ ಸುರಮುನಿಗಣರು।
ಇಂದು ಧರನಾಜ್ಞೆ ಶಿರದಿರಿಸಿ ವಿಶ್ವವಿದ।
ನೆಂದಿಗೂ ಬಿಡರು- ಘನಮಠ ||೬೭||

## ★ ತ್ರಿಮೂರ್ತಿಗಳ ವಚನ ★

ಇಂದಿರಾ ವರನು ಗೋ। ವಿಂದ ಗರುಡಧ್ವಜನು।
ಸುಂದರವ ಸೃಷ್ಟಿಕರ್ತ ವಿಧಿಶಿವತ್ರಯರ।
ಹೊಂದಿಕೆಯು ವಿಶ್ವ- ಘನಮಠ ||೬೮||

ಕಮಲ ನಾಭನ ಪುತ್ರ। ಕಮಲೋದ್ಭವನ ಕುವರ।
ಸುಮನ ಸಾಧ್ಯರು ವಿಶ್ವದುಪಕಾರಕಾಗಿ ತನು।
ಶ್ರಮಿಸಿದರು ಸತ್ಯ- ಘನಮಠ ||೬೯||

ಇಂದ್ರ ಮೊದಲಾದವರ। ವೃಂದವದು ಶಿವನಾಜ್ಞೆ।
ಯಿಂದಶ್ರುವಿಸುವದು ಮರ್ತ್ಯರಾ ಧರ್ಮನಡೆ।
ಯೊಂದೆಕಾರಣವು- ಘನಮಠ ॥೨೦॥

## ★ ಶ್ರೀ ಜಗದ್ಗುರು ಪಂಚಾಚಾರ್ಯರ ವಚನ ★

ಪರಶಿವಾನನದುದಿಸಿ। ಧರೆಯ ಪಾವನಗೊಳಿಸಿ।
ಹರಮತವನವನಿಯೊಳು ಸ್ಥಾಪಿಸಿ ಪಂಚಗುರು।
ಚರಣಕ್ಕೆ ನಮನ- ಘನಮಠ ॥೨೧॥

ಕೊಲ್ಲಿಪಾಕಿಯ ಲಿಂಗ। ದಲ್ಲಿ ಪುಟ್ಟುತ ವಿಶ್ವ।
ದಲ್ಲಿ ಮೆರೆದಿರುವ ಗುರು ರೇವಣಾರ್ಯನೆ।
ಎಲ್ಲರಿಗೆ ಗುರುವು- ಘನಮಠ ॥೨೨॥

ವೀರ ಶ್ರೀ ಶಿವಮತದ। ವಾರಿಧಿವಿಧುವೆ ಭವ।
ದೂರನೇ ವೀರಸಿಂಹಾಸನದ ಅಧಿಪತಿಯೇ।
ತೋರುನೀ ಕರುಣ- ಘನಮಠ ॥೨೩॥

ಅರಿದೇಳನೋರ್ವರು। ಸರಿಯೆದೇಳನೂರು।
ವರುಷ ಸಂಚರಿಸಿ ಜಗದಗುರು ತಾನಾಗಿ।
ಹರಮತದಮೂಲ- ಘನಮಠ ॥೨೪॥

ಶಿವನ ಚಿದ್ರೂಪವದು। ಭುವಿಯೊಳಗೆ ರೇವಣ।
ಅವಿನಾಶ ಕೀರ್ತಿ ಜಗದೊಳಗೆ ಶಿವಮತವು।
ಅವಿರತ ಸ್ಥಿರವು- ಘನಮಠ ॥೨೫॥

ಧರೆಯೊಳಗೆ ಹರಮತವ ಸ್ಥಿರವ ಮಾಡಿದ ಗುರುವು।
ಗುರುವೇ ರೇವಣಸಿದ್ಧ ಪೊರೆಯೊ ನಿರಂತರದ।
ಚರರೂಪಗುರುವೆ- ಘನಮಠ ॥೨೬॥

ಮೆರೆವುದಾ ಉಜ್ಜಯನಿ। ವರ ಜಗದ್ಗುರು ಪೀಠ।
ಮರುಳ ಸಿದ್ಧೇಶ ಗುರುಕರುಣ ಸಂಜಾತ।
ಗುರು ಸಿದ್ಧಲಿಂಗ- ಘನಮಠ ||೭೭||

ಗವಿಯ ಬುಕ್ಕಾಂಬುಧಿಯೊ। ಳವಿರತಂ ತಪಗೈದ।
ಭವರೋಗ ವೈದ್ಯ ಶ್ರೀ ಸಿದ್ಧಲಿಂಗನನು।
ಅವಿರತಂ ಭಜಿಪೆ- ಘನಮಠ ||೭೮||

ಕೇದಾರ ಗುರು ಪೀಠ। ಕಾಧಾರ ಹಿಮಗಿರಿಯು।
ಸಾಧಾರ ಮೂರ್ತಿ ಗುರುವು ಏಕೋರಾಮ।
ನಾಧಾರನೆನಗೆ- ಘನಮಠ ||೭೯||

ಮೆರೆವ ವಾರಾಣಸಿಯೊಳಿರುವ ವಿಶ್ವೇಶನಿಂ।
ಧರೆಗಿಳಿದು ಬಂದ। ಗುರುವು ವಿಶ್ವಾರಾಧ್ಯ।
ಪೊರೆಯುಲನವರತ- ಘನಮಠ ||೮೦||

ಧರೆಯೊಳಿಹ ಚರಗಣಕೆ। ಧೊರೆಯು ತಾನಾಗಿ ಗುರು।
ವರನು ಕಾಶಿಯೊಳು ಗುರು ಪೀಠ ಸ್ಥಾಪಿದ।
ಗರು ವಿಶ್ವರಾಧ್ಯ- ಘನಮಠ ||೮೧||

ಗುರು ಪಂಡಿತರಾಧ್ಯ। ಶಿರಿಗಿರಿಯ ಮಲ್ಲಯ್ಯ।
ವರಲಿಂಗದಿಂದ ಅವತರಿಸಿ ಧರೆಯೊಳಗೆ।
ಹರಮತದ ಗುರುವು- ಘನಮಠ ||೮೨||

ಮಲ್ಲಿಕಾರ್ಜನ ಲಿಂಗ। ದಲ್ಲಿ ಪುಟ್ಟುತ ವಿಶ್ವ।
ವೆಲ್ಲಕ್ಕೆ ಗುರುವಾದ ಪಂಡಿತಾರ್ಯನೆ ಎನ್ನ।
ವಲ್ಲಭನು ಅವನು- ಘನಮಠ ||೮೩||

ನಿತ್ಯ ನಿರುಪಮ ನಿಗಮ। ಅರ್ಥದಿಂ ತಿಳಿಯೆ ಸಂ।
ಸ್ತುತ್ಯ ಕೋವಿದನೆ ಶುಭ ಗಾತ್ರಗುರುವರನ।
ನಿತ್ಯಶಿವ ಮತಕೆ- ಘನಮಠ ||೮೪||

ಶಿವನೈದು ಮುಖದಿಂದ| ಭುವನದೊಳವತರಿಸಿ|
ಶಿವಮತವ ವಿಶ್ವದೊಳು ಸ್ಥಾಪಿಸಿದರೈವರಂ|
ಅವರಿತಂ ಭಜಿಪೆ- ಘನಮಠ ||೮೫||

ಜಗಕೆಲ್ಲ ಜಗದಗುರು| ನಿಗಮಾಗಮದಿ ವಂದ್ಯ|
ಪೊಗಳುವವೆಲ್ಲಾ ಶೃತಿಶಾಸ್ತ್ರ ಪೌರಾಣ|
ನಗುರೋರಧಿಕವು- ಘನಮಠ ||೮೬||

ಪಂಚಪೀಠಾಧಿಪರ| ಅಂಕಿತದಿ ಕಲಶೈದು|
ಸಂಚಿತವಗೊಳಿಸಿ ಗೈಯ್ವ ಮಂಗಲಕಾರ್ಯ|
ಮುಂಚಿತವು ಜಗದಿ- ಘನಮಠ ||೮೭||

ಹರಭಕ್ತರೆಲ್ಲರಾ| ಪರಮ ಮಂಗಲ ಕಾರ್ಯ|
ಗುರುಗಳೈವರರ ಕಲಶ ಸ್ಥಾಪನೆ ಮಾಡಿ|
ನಿರುಮಿಸುವದಮುನಿ- ಘನಮಠ ||೮೮||

ಭಾರತಾದ್ಯಂತದೊಳು| ವೀರಶೈವರು ತಮ್ಮ|
ಕಾರ್ಯದಾದಿಯೊಳು ಗುರುಗಳೈವರಪೂಜೆ|
ನಿರುತ ಮಾಡುವರು- ಘನಮಠ ||೮೯||

ದಶಕರ್ಮ ದಾದಿಯೊಳು| ಶಶಿಧರನ ಭಕ್ತಗಣ|
ಪಶುಪತಿಯು ರೂಪ ಪಂಚಗುರುಗಳಪೂಜೆ|
ನಶಿಸದೆಂದೆಂದೂ- ಘನಮಠ ||೯೦||

ಪ್ರತಿಯೊಂದು ಗ್ರಾಮದೊಳು| ಶಶಿಕಂಠ ಶಿವಮತದ|
ವ್ರತವ ಪಾಲಿಸಲೈದು ವೃತ್ತಿಯಾಚಾರ್ಯರನು|
ಮಿತಿಯ ಗೊಳಿಸಿದರು- ಘನಮಠ ||೯೧||

ಹಿರಿಯಮಠ ಮಠಪತ್ತಿ ವರ ಗಣಚಾರಿ ಸ್ಥಾ|
ವರಸ್ಥಲಿಕರೆಂಬ ವೃತ್ತಿಯಾ ಚರಿಪರನು|
ಸ್ಥಿತಗೊಳಿಸಿ ಪ್ರಥಮ- ಘನಮಠ ||೧೨||

ಧರೆಯೊಳ್ಳರಮಠಕೆಂದು| ಕೊರತೆಯಾಗದತೆರದಿ|
ಸ್ಥಿರವ ಮಾಡಿದರು ಜಗದ ಗುರುಗಳು ಶ್ರೇಷ್ಠ|
ಹರಮಠದ ಮೇಲ್ಮೆ- ಘನಮಠ ||೧೩||

ಅಂದಿಂದು ಮುಂದೆ ಎಂದೆಂದಿಗೂ ಬಿಡದಂತೆ|
ಇಂದುಧರ ಮತವು ವಿಶ್ವದೊಳು ಜನ ಮನಕೆ|
ವಂದ್ಯವಾಗಿಹುದು- ಘನಮಠ ||೧೪

ವಂದನೆಯು ಶಿವಮತಕೆ| ತಂದೆ ಘನಮಠ ಕರುಣೆ|
ಯಿಂದ ಒಂದನೆಯ ಪಥ ಪೂರ್ಣವಾಗಿಹುದು|
ಇಂದಿನದು ಮುಂದೆ- ಘನಮಠ ||೧೫||

— ೧೫ ನೇ ವಚನಕ್ಕೆ ಪ್ರಥಮ ಪಥ ಮಂಗಲಂ —

# — ದ್ವಿತೀಯ ಪಥ —

## ★ ಅಷ್ಟಾವರಣ-ಪಂಚಾಚಾರ್ಯರ ವಚನಗಳು ★

ಶಿವನಿರವ ನರಿಯಲ್ಕೆ। ಅವನಿಯೊಳರಿತವರು।
ಶಿವನಿಷ್ಟವಾದಾ ಅಷ್ಟ ಆಭರಣಗಳು।
ಅವನಿಗರುಹಿದರು- ಘನಮಠ ॥೧॥

ತನುಶುದ್ಧವಾಗಲ್ಕೆ। ಮನವಚಲವಾಗಲ್ಕೆ।
ಘನವೆನಿಪ ಅಷ್ಟಾವರಣ ಮಾನವ ಮನದಿ।
ದಿನವರಿಯಬೇಕು- ಘನಮಠ ॥೨॥

### ಗುರುಮಹಿಮೆ ವಚನ

ಹರನೆ ತಾ ಧರೆಯೊಳಗೆ। ಗುರುವಾಗಿ ಚರಿಸುತಹ।
ನರಭಾವ ಬೇಡ ಗುರುವಿನೊಳು ನರನೀನು।
ಅರಿಯಾ ಹರನೆಂದೂ- ಘನಮಠ ॥೩॥

ಏಕವೈವನುಗುರು ಪಿನಾಕಿ ಮೊದಲಾದ ಸುರ।
ಲೋಕದ ದೇವರ್ಕಳೆಲ್ಲರಿಗೆ ಮೂಲಗುರು।
ಲೋಕಕ್ಕೆ ಬೇಕು- ಘನಮಠ ॥೪॥

### ಲಿಂಗದ ವಚನ

ಅಂಗಗುಣ ವಳಿಯಲ್ಕೆ। ಲಿಂಗದೇಹದಿಬೇಕು।
ಲಿಂಗವನು ಕೊಡುವೆ। ಗರುಬೇಕು ಮಾನವಗೆ।
ಜಂಗಮನು ಬೇಕು- ಘನಮಠ ॥೫॥

ಲಿಂಗದೊಳು ಜಂಗಮವು। ಜಂಗಮದಿ ಜಗವೆಲ್ಲ।
ಅಂಗದೊಳರಿದು ತಿಳಿಯಲ್ಕೆ ಮಾನವನ।
ಅಂಗವೇ ಲಿಂಗ- ಘನಮಠ ॥೬॥

ಅಂಗಲಿಂಗದ ಸಂಗ। ಹಿಂಗದಂತಿರಬೇಕು।
ಅಂಗದೊಳಿರುವ। ಮಂಗ ಗುಣವಳಿಯಲ್ಕೆ
ತುಂಗನರನಹನು- ಘನಮಠ ॥೭॥

ಲಿಂಗವಾ ನೆಲೆಕಲೆಯು! ಅಂಗದೊಳರಿಯಲ್ಕೆ।
ಸಂಗನಾಗಿಹನು ಶಿವಲಿಂಗ ಮಧ್ಯದೋಳು।
ಲಿಂಗವೇ ವಿಶ್ವ- ಘನಮಠ ॥೮॥

## ಜಂಗಮ ವಚನ

ಚರರೂಪದಿಂ ಹರನು ಧರೆಗಿಳಿದು ತಾ ಬಂದು।
ಚರಿಸುತಿಹ ನರರ। ದುರಿತವನು ಕಳೆಯಲ್ಕೆ
ಚರಮುಖ್ಯನರಗೆ- ಘನಮಠ ॥೯॥

ಚರತೃಪ್ತಿಯಾಗಲ್ಕೆ। ಹರತೃಪ್ತನಾಗುವನು
ನರಗೈಯ್ವ ಚರರ ದಾಸೋಹವದು ಸತ್ಯ।
ಹರಗೆ ಸಲ್ಲುವದು- ಘನಮಠ ॥೧೦॥

ಅವನಿಯೊಳ್ ಚರಿಪಚರ। ಶಿವನಿಗಿಂತಲೂ ಶ್ರೇಷ್ಠ
ಭವದೂರನಾದ ಜಂಗಮನು ವಿಶ್ವಕ್ಕೆ।
ಶಿವನವನೇ ಸತ್ಯ- ಘನಮಠ ॥೧೧॥

ಜಂಗಮನು ಜಗದೊಳಗೆ। ಅಂಗಜಾರಿಯರೂಪ।
ಹಿಂಗದಂತಿಹನು ಜಗದ ಜೀವಿಗಳೊಳಗೆ।
ಜಂಗಮನು ಸ್ಥಿರವು- ಘನಮಠ ॥೧೨॥

ಜಂಗಮನ ಮುಖತೃಪ್ತಿ। ಲಿಂಗಕ್ಕೆ ಸಲ್ಲುವದು।
ಲಿಂಗ ಜಂಗಮದಿ ಭೇದವದ ತರವಲ್ಲ।
ಜಂಗಮನೆ ಶಿವನು- ಘನಮಠ ॥೧೩॥

## ಪಾದೋದಕ ವಚನ

ಹರಿವ ನದಿ ನೀರಿನಿಂ। ಧರೆಯು ಮಲಿನವು ನಾಶ।
ಗುರುಚರಣ ಸಲಿಲವನು ಸ್ವೀಕರಿಸೆ ಮಾನವನ।
ಶರೀರ ಪಾವಿತ್ರ್ಯ- ಘನಮಠ ||೧೪||

ಗುರು ಲಿಂಗ ಜಂಗಮದ। ಶರೀರ ಪಾದೋದಕವು।
ನರನಂತರಂಗದಿರುವ ಮಲ ವಳಿಯಲ್ಕೆ।
ಪರಮ ಸಾಧನವು- ಘನಮಠ ||೧೫||

ಒಡೆಯ ಗುರುದೇವ ಚರ। ಣಡಿಯಥೋಳೋದಕವು।
ಮಡಿಯ ಮಾಡುವದು ಮಾನವನ ಭವರೋಗ।
ತೊಡೆಯುವದು ಸತ್ಯ- ಘನಮಠ ||೧೬||

ಹರನ ಮಸ್ತಕದಿಳಿದ। ಸುರದೇವ ಗಂಗೆ ಗಿಂ।
ಗುರು ಶಿಷ್ಯ ಸಮ್ಮಿಲನದಿಂ ಬಂದ ಚರಣಜಲ।
ಧರೆಯೊಳದು ಶ್ರೇಷ್ಠ- ಘನಮಠ ||೧೭||

ಎಲ್ಲ ತೀರ್ಥದಿ ಶ್ರೇಷ್ಠ। ಬಲ್ಲಗುರುಚರಲಿಂಗ।
ಸಲ್ಲಲಿತವಾದ ದಶ ವಿಧದ ಪಾದುದಕ।
ಮೆಲ್ಲಲಿಕೆ ಶುದ್ಧ- ಘನಮಠ ||೧೮||

## ಪ್ರಸಾದ ವಚನ

ಅನ್ನದೊಳು ಮೂದೆರದ। ಭಿನ್ನ ರಜತಮಸತ್ವ।
ವೆನ್ನುವದನರಿದು ಮಾನವನು ಸಾತ್ವಿಕದ।
ಅನ್ನ ಕೊಳೆ ಲೇಸು- ಘನಮಠ ||೧೯||

ಅವನಿಯೊಳಗನ್ನವದು। ಜೀವನಾಧಾರವಮದು।
ಶಿವನೀಯ್ವ ಶ್ರೇಷ್ಠ ದಿವ್ಯ ಪ್ರಸಾದವದು।
ಪ್ರವಿಮಲವು ಜಗಕೆ- ಘನಮಠ ||೨೦||

ಈಶಪ್ರಸಾದವದು। ಪೋಷಿಪುದು ವಿಶ್ವವನು।
ಈಶ ಸಮರಾದ ಗುರು ಚರರ ಶೇಷವದು।
ಸಾಳಿಪುದು ಅಘವ- ಘನಮಠ ॥೨೧॥

ಬುದ್ಧಿಯುತ ಮಾನವನು। ಶುದ್ಧ ಪ್ರಸಾದವನು।
ಶುದ್ಧ ಮನದಿಂದ ಗ್ರಹಿಸಲ್ಕೆ ವಿಶ್ವದೊಳು।
ಬದ್ಧ ಶಿವಶರಣ- ಘನಮಠ ॥೨೨॥

ಶರಿರದಿರುವ್ವನ್ನೊಂದು। ನರನಿಂದ್ರಿಯಾದಿಗಳು।
ಗುರುಚರರ ಏಕಾದಶ ಪ್ರಸಾದವು ಜಗದಿ।
ಪರಿಪೂತವಹುದ್ಕು- ಘನಮಠ ॥೨೩॥

ಚರನ್ನಸ್ತ ಸೋಂಕಿದಾ। ಪರುಷ ಪುಸಾದವದು।
ನರನಿಂದ್ರಿಯಗಳ ದುರಿತ ದೋಷವನಳಿದು।
ಸ್ಥಿರ ಮುಕ್ತಿ ಲಭ್ಯ- ಘನಮಠ ॥೨೪॥

## ವಿಭೂತಿ ವಚನ

ಧರೆಯೊಳ್ಗರ ಭಕ್ತರಾ। ಶಿರಿಸಂಪದಕೆ ಮೂಲ।
ಹರಭಕ್ತರೆಲ್ಲರಾ ಕಾರ್ಯದೊಳು ಮಂಗಲ।
ಕರವೆನಿಪ ಭಸ್ಮ- ಘನಮಠ ॥೨೫॥

ಕಾಡಬೆರಣಿಯ ಸುಟ್ಟು। ಮಾಡಿರುವ ಭಸ್ಮವದು।
ದೂಡುವದು ದುರಿತ ಕೋಟಿ ಮಾನವ ಮುಕ್ತಿ।
ಗೀಡು ಮಾಡುವದು- ಘನಮಠ ॥೨೬॥

ಅರಿದರಿಯದಿದ್ದರೂ। ಧರಿಸಬೇಕೀ ಭಸ್ಮ।
ಅರಿದು ತಾ ಧರಿಸೆ। ಹರಪದವಿಯರಿಯದಿರೇ।
ದುರಿತವದು ನಾಶ- ಘನಮಠ ॥೨೭॥

ಅಮಳ ಭಸ್ಮವನಿದನು। ಕ್ರಮದಿಂದ ಧರಿಸಲ್ಕೆ।
ಸುಮನಸರಸ ಮನು ಮಾನವನು ಮರ್ತ್ಯದಲಿ।
ಅಮಿತ ಸುಖಿಯೆನಿಹನು- ಘನಮಠ ॥೨೮॥

ಭುವನ ಪಾವನ ಭಸ್ಮ। ಶಿವ ಪಥವ ತೋರುವದು।
ಅವನಿಯೊಳಗೆಲ್ಲ ಮಾನವರ ಮಲಿನವನು।
ಸವರಿಪುದು ಸತ್ಯ- ಘನಮಠ ॥೨೯॥

ಭಸ್ಮ ಧರಿಸಿದ ಮುಖವು। ವಿಶ್ವಕ್ಕೆ ಶಿವ ಮತದ।
ಶಾಶ್ವತವ ತೋರಿ ಇಹಪರಕೆ ಕಾರಣವು।
ಭಿಸ್ಮಿತವದು ಶಿರಿಯು- ಘನಮಠ ॥೩೦॥

ವಿಧಿಯ ಬರವಳುಕಿಸುತ। ವಿದುಧರನ ಕೈಲಾಸ।
ಸದರಿಗೊಯ್ಯುವದು ಶರಣ ಸಮುದಾಯಕ್ಕೆ।
ವದಗಿವುದು ಮುಕ್ತಿ- ಘನಮಠ ॥೩೧॥

## ರುದ್ರಾಕ್ಷಿ ವಚನ

ರುದ್ರನಕ್ಷಿಯಬಿಂದು। ಭದ್ರವಾಗುತೆ ಜಗದಿ।
ರುದ್ರಾಕ್ಷಿಯಾಗಿ ಮಾನವನ ಭವಮೂಲ।
ಛಿದ್ರ ಮಾಡುವದು- ಘನಮಠ ॥೩೨॥

ಧರಿಸಲ್ಕೆ ದೇಹದೊಳು। ಹರನಕ್ಷಿಮಾಲೆಯನು।
ಪರಿಪೂತನಾಗಿ ಮಾನವನು ಇಹದಿಂದ।
ಪರವ ಸಾಧಿಪನು- ಘನಮಠ ॥೩೩॥

ಮಣಿರತ್ನ ಮಾಲಿಕೆಯು। ಗಣನೆಯಲ್ಲವು ಇದಕೆ।
ತ್ರಿಣಯನಕ್ಷಿಯನು ಧರಿಸಲ್ಕೆ ದುರ್ಗುಣಿಯು।
ಗುಣವಂತನಹನು- ಘನಮಠ ॥೩೪॥

ಆಪತ್ತಿನೊಳು ಧರಿಸೆ। ತಾಪವನು ಕಳೆಯುವದು।
ಶ್ರೀ ಪತಿಯ ಸಖನ ಕರುಣ ಪಡೆಯುವವನರನು।
ಪಾಪ ಧೂರಹನು- ಘನಮಠ ॥೩೫॥

ಅಂತಕನಭಯದೂರ। ಚಿಂತೆಯದು ಪರಿಹಾರ।
ಬ್ರಾಂತಿದೂರಹನು ರುದ್ರಾಕ್ಷಿ ಧರಿಸೆ ನಿ।
ಶ್ಚಿಂತನವನಿತ್ಯ- ಘನಮಠ ॥೩೬॥

## ಮಂತ್ರ ವಚನ

ಭವ ಮೂಲವಳಿಯಲ್ಕೆ। ಶಿವಮಂತ್ರವದು ಮುಖ್ಯ
ಅವನಿಯೊಳಗೆಲ್ಲ ಧರ್ಮ ಶಾಸ್ತ್ರದಸಾರ।
ಶಿವ ಮಂತ್ರಶ್ರೇಷ್ಠ- ಘನಮಠ ॥೩೭॥

ಮನ ಶುದ್ಧಿಯಾಗಲ್ಕೆ। ಮನು ಮುಖ್ಯಮಾನವನು।
ಮನದಿಂದ ಮಂತ್ರ ಪಠಿಸಲ್ಕೆ ನಿತ್ಯದೊಳು
ಘನತೆ ತಾ ಪಡೆವ- ಘನಮಠ ॥೩೮॥

ಹಿಂದಿನಜ ಹರಿ ಸುರರು। ಸುಂದರದ ಶಿವಮಂತ್ರ।
ಒಂದೆ ಮನದಿಂದ ಪಠಿಸಲ್ಕೆ ವಿಶ್ವದೊಳು।
ಇಂದಿಗೂ ಸ್ಥಿರರು- ಘನಮಠ ॥೩೯॥

ಸಾನಂದ ಮುನಿಯೊಮ್ಮೆ। ಆನಂದದಲಿ ನುಡಿಯೆ।
ಭಾನುಸುತ ಲೋಕ ಬರಿದಾಗಿ ಪಾಪಿಗಳು।
ಸ್ಥಾಣು ಪದಪೊಂದಿ- ಘನಮಠ ॥೪೦॥

ಅರಿವರಿಯುವಲೆ ಮಂತ್ರ। ನರ ನಿತ್ಯ ನುಡಿಯಲ್ಕೆ।
ಕರಣೇಂದ್ರಿಯಾದಿತನು ಶುದ್ಧ ಮನಶುದ್ಧ।
ಹರನೆ ತಾ ನಹನು- ಘನಮಠ ॥೪೧॥

ಗುರುಲಿಂಗ ಜಂಗಮರ| ಪರಮ ಪಾವನ ಸೇವೆ|
ಶರೀರವಿರುವನಕ ತೊರೆಯನೆಂಬಭಿಮಾನ|
ವಿರುವವನೆ ಭೃತ್ಯ- ಘನಮಠ ||೪೧||

ಕಿರಿಯರಾರಿಲ್ಲ ಜಗ| ದ್ಧಿರಿಯರೆಲ್ಲರು ಎನಗೆ|
ಮರೆಯದೆಂದೆಂದೂ| ಹರಮತಾಚರಣೆ ಮನ|
ದಿರುವವನೆ ಭೃತ್ಯ- ಘನಮಠ ||೪೨||

## ನಿಯತಾಚಾರ ವಚನ

ಪಿಡಿದ ನೇಮವನು ತಾ| ದೃಢ ಭಕ್ತಿಯಿಂ ಬಿಡದೆ|
ನಡೆಯಿಸುವೆನೆಂಬ ನೇಮವಿರಲವ ಜಗದಿ|
ಮೃಡಭಕ್ತಿನೇಮಿ- ಘನಮಠ ||೪೪||

ಅಸುವಳಿದ ಪರ್ಯಂತ| ಪಶುಪತಿಯ ಪ್ರೇಮದೊಳು|
ವಶನಾಗಿ ವಿಶ್ವ ವಿಷಯಾಶೆ ಮಾಡದವ|
ಶಶಿಧರನ ಭಕ್ತ- ಘನಮಠ ||೪೫||

ನಡೆ ನುಡಿಯು ಒಂದಾಗಿ| ಮೃಡಭಕ್ತಿ ದೃಢವಾಗಿ|
ಜಡತನವ ತನ್ನ ವಡಲಿನಿಂದಳಿಯಲವ|
ಪೊಡವಿಯೊಳು ಭಕ್ತ- ಘನಮಠ ||೪೬||

## ಸದಾಚಾರ ವಚನ

ಸರ್ವರೊಳು ಸಮತೆಯದು ಗರ್ವರಹಿತನು ಹೃದಯ|
ಪೂರ್ವಿಯೊಳು ಪರರಿಗಹಿತವನೆ ಬಯಸದಿಹ|
ನೋರ್ವನೆ ಶರಣ- ಘನಮಠ ||೪೭||

ಪರತೃಪ್ತಿಯೆ ತನಗೆ| ಹರುಷವೆಂದರಿಯುತಿಹ|
ಹರನಷ್ಟವರಣ ಚರತೃಪ್ತಿಯೊಳು ಸದಾ|
ಇರುವ ಸದಾಚಾರಿ- ಘನಮಠ ||೪೮||

ಸತಿಸುತರ ಸೇವೆಯು| ಗತಿಯುಂದು ಜೀವನವ|
ನತಿಗಳೆಯುತೆಂದ ಶಿತಿಗರಲ ಸೇವೆಯನು|
ಮೃತಿ ಬರಲು ಬಿಡನು– ಘನಮಠ ||೪೯||

ಶಿವಮತಾಚರಣೆಯೊಳು| ಅವಿರತಂ ಶ್ರಮಿಸುತಿಹ|
ಶಿವಕಾರ್ಯ ಸೇವಾ ಭಂಗಬರೆ ತನ್ನಸುವ|
ಶಿವಗೆನುವ ಶರಣ– ಘನಮಠ ||೫೦||

## ಲಿಂಗಾಚಾರ ವಚನ

ಅಂಗಲಿಂಗದ ಸ್ನೇಹ| ಹಿಂಗದಂತಿರುತಿರಲು|
ಅಂಗದಿಂ ಲಿಂಗವಗಲಲ್ಕೆ ಜೀವನದ|
ಸಂಗದುರ್ಶರಣ– ಘನಮಠ ||೫೧||

ಜೀವನದ ವ್ಯಾಪಾರ| ಭಾವಜಾರಿಯದೆಂದು|
ಭಾವದೊಳ ಬಗೆವ ಭಾವ| ಶುದ್ಧಾತ್ಮನವ|
ದೇವ ನಿಜ ಶರಣ– ಘನಮಠ ||೫೨||

## ಷಟಸ್ಥಲದ ವಚನ (ಭಕ್ತಸ್ಥಲ)

ಅರಸ ನಾಗರ ಮನೆಯು| ಶಿರಿಭೋಗ ಸಂಪದದಿ|
ಮೆರೆಯುವದಕಿಂತ| ಗುರುಲಿಂಗ ಚರಸೇವೆ|
ಚಿರಸುಖವು ನರೆಗೆ– ಘನಮಠ ||೫೩||

ಹಿರಿಯತನದಧಿಕಾರ| ನರಕ ಸಾಧನೆಯಕ್ಕು|
ಕರಿಯಾಗಿ ಕಬ್ಬು ಮೇಯುವದರಿಂ ಮೇಲು|
ಇರಿವೆಯಾ ಜನ್ಮ– ಘನಮಠ ||೫೪||

## ಮಹೇಶಸ್ಥಲ ವಚನ

ನರನಿಂದ್ರಿಯಂಗಳೊಳು| ಶಿರವಧಿಕವಿರ್ಪಂತೆ|
ಧರೆಯು ಜೀವಂಗಳಲಿ ಮಹೇಶಸ್ಥಲ ಜಗದಿ|
ಸ್ಥಿರ ಮುಕ್ತಿ ಸ್ಥಾನ– ಘನಮಠ ||೫೫||

ಕರವಿಡಿದು ಎಳಿಯಲ್ಕೆ ಶರೀರ ತಾ ಬರ್ಪಂತೆ|
ಹರತತ್ವವೆಲ್ಲಾ ಸ್ಥಿರಗೊಂಡ ಕಾಯುವದು|
ಚರಸ್ಥಲವೇ ಮೇಲು– ಘನಮಠ ||೫೬||

## ಪ್ರಸಾದಿಯ ಸ್ಥಲ

ಹಸುತೃಷೆಯ ಅರುವಿಲ್ಲ| ಪೊಸದ್ದಳೆಯುಭೇದಿಲ್ಲ|
ಪಶುಪತಿಯು ಭಾವದಿಹ ಪರಿಶುದ್ಧ ಪ್ರಸಾದಿ|
ವಸುಧಿಯೊಳ್ ಶ್ರೇಷ್ಠ– ಘನಮಠ ||೫೭||

ಅಂಗದಿಚ್ಛೆಯನಳಿದು| ಲಿಂಗಯ್ಯನೋಳ್ಬೆರೆದು|
ಸಂಗಯ್ಯನಂತೆ ಸುಖದುಃಖದಿಂ ದೂರ|
ತುಂಗಪ್ರಸಾದಿ– ಘನಮಠ ||೫೮||

## ಪ್ರಾಣಲಿಂಗಿ ಸ್ಥಲ

ಜೀವನಾನಿಂತೆಂಬ| ಭಾವನೆಯು ಬರಿದಾಗಿ|
ಭಾವ ಪರಿಪೂರ್ಣ ಲಿಂಗಭಾವದೊಳಿರುವ|
ಜೀವಾಂಗಲಿಂಗ– ಘನಮಠ ||೫೯||

ಜಡದೇಹ ವಾಸನೆಯು| ಧೃಡ ಭಾವದಿಂದಳಿದು|
ಮೃಡರೂಪ ಲಿಂಗ ಭಾವನೆಯು ವಡಲೊಳಗೆ|
ಧೃಡವಾಗೆ ಲಿಂಗ– ಘನಮಠ ||೬೦||

ಲಿಂಗವೇ ಪ್ರಾಣಾಗಿ| ಪ್ರಾಣವೇ ಲಿಂಗಾಗಿ|
ಅಂಗಲಿಂಗಗಳ ಸಂಗವದು ಸಮರಸವೆ|
ಅದು ಪ್ರಾಣಲಿಂಗ– ಘನಮಠ ||೬೧||

## ಶರಣ ಸ್ಥಲ

ಸರ್ವರನು ಕಾಣಲ್ಕೆ| ಗರ್ವರಹಿತನು ತಾನು|
ಶರ್ವನಿಹ ಸರ್ವ ಜೀವರೊಳು ಸ್ಥಿರಭಾವ|
ದಿರ್ವನೇ ಶರಣ– ಘನಮಠ ||೬೨||

ನೆಲ್ಲಿನಾ ತೆನೆಯಂತೆ। ಎಲ್ಲರೊಳು ಬಾಗುತ್ತ।
ವಲ್ಲಭನು ಶಿವನು ವಿಶ್ವಕೆಲ್ಲಕೆ ಒಬ್ಬ।
ಸೊಲ್ಲು ಸ್ಥಿರ ಶರಣ– ಘನಮಠ ॥೬೩॥

## ಐಕ್ಯ ಸ್ಥಲ

ಪೂಜೋಪಚಾರಗಳ। ಗೋಜುಗುಂಜರಹರಿದು।
ಸಹಜ ಸ್ಥಿತಿಯೊಳಗೆ ಜಗವೆಲ್ಲ ಚರಿಸುವನೆ।
ನೈಜ ಶಿವಯೋಗಿ– ಘನಮಠ ॥೬೪॥

ಅಶನ ವಶನಗಳರಿವು। ಪೋ ಭೂಷಣಗಳರಿವು।
ನಸಸಿರುವ ತನ್ನ ದೇಹದೊಳು ಶಿವಯೋಗಿ।
ವಶನಲ್ಲ ಜಗಕೆ– ಘನಮಠ ॥೬೫॥

ಅಂತಕನ ಭಯವಿಲ್ಲ। ಚಿಂತೆಯದು ಮೊದಲಿಲ್ಲ।
ಭ್ರಾಂತಿಯಿಂ ದೂರ ಚರಿಸುತಿಯ ಶಿವಯೋಗಿ।
ಅಂತಕನ ವೈರಿ– ಘನಮಠ ॥೬೬॥

ಕರಿಯ ನೇರಿದ ಯೋಗಿ। ನರರ ಹಂಗಿಗನಲ್ಲ।
ಧರೆಯ ಮಾನವಠ ಅರುವಿಲ್ಲ ತನ್ನಾತ್ಮ।
ದರುವಿನೊಳಗಿರುವ– ಘನಮಠ ॥೬೭॥

ಲೋಕದೊಳು ಚರಿಸುತ್ತ। ಬೇಕುಬೆಡೆಂಬೆರಡು।
ನೂಕಿರುವ ನುಡಿಯ ಲೋಕದ ಜನಕೆಲ್ಲ।
ಸಾಕಾರಮೂರ್ತಿ– ಘನಮಠ ॥೬೮॥

ಕುಲಛಲದ ಜಂಜಡದ। ಮಲಿನತೆಯ ತಾನಳಿದು।
ಸುಳಿಯುವನು। ವಿಶ್ವ ಪಾವನವಗೊಳಿಸುತ್ತ।
ಮಲಹರನರೂಪ– ಘನಮಠ ॥೬೯॥

—— ಇತಿ ಷಟ್ಸ್ಥಲಗಳು ಮಂಗಲ ——

## ★ ಶಿವಸರ್ವೋತ್ತಮತ್ವ ವಚನ ★

ಹಲವಾರು ದೇವರೊಳು। ಚಲುವ ದೇವರ ನಮ್ಮ।
ನಿರವನರಿಯಲ್ಕೆ। ಶಿವನೊಬ್ಬ ವಿಶ್ವದೊಳು।
ಗೆಲವು ತಾ ಕೊಡುವ- ಘನವಮತ ॥೨೦॥

ಶಿವಶಕ್ತಿಯರ ಮೇಳ। ಭುವನದ ಸ್ಥಿತಿಲಯಕೆ।
ಅವರಂತರಾತ್ಮ ಪ್ರೇರಣೆಯೇ ಭುವನಕ್ಕೆ।
ಅವಿರತವು ಮುಖ್ಯ- ಘನವಮತ ॥೨೧॥

ಶಿವನಿಂದಕರ ಕೇಡು। ಅವನಿಯೊಳ್ ಗ್ರಾಹ್ಯಕರ
ಶಿವನಿಂದಯಾಡಿ ದಕ್ಷನಜ ಶಿರ ಹೊತ್ತು।
ಭುವನಕ್ಕೆತೋರ್ವ- ಘನವಮತ ॥೨೨॥

ಹತ್ತು ಅವತಾರದೊಳು। ದೈತ್ಯಾರಿ ಶ್ರೀಕೃಷ್ಣ।
ಚಿತ್ತಜಾರಿಯನು ಭಜಿಸಲ್ಕೆ ವಿಶ್ವದೊಳು।
ಸತ್ಯತೆಯ ಪಡೆದ- ಘನವಮತ ॥೨೩॥

ಹರಿ ತನ್ನ ನೇತ್ರವನು। ಹರನ ಪಾದಕೆ ಇತ್ತು।
ದೊರೆಕಿಸಿದ ಚಕ್ರದೈತ್ಯಾರಿ ನಾಮವನು।
ಹರನಿಂದ ಪಡೆದ- ಘನವಮತ ॥೨೪॥

ನೀಲಕಂಠನಿಗಿಂತ। ಮೇಲೆಂದು ವಾಣಿಪತಿ।
ಕಾಲಾರಿಯಿಂದ ತಲೆಯೊಂದು ಕಳಕೊಂಡು।
ನಾಲ್ಕಾನನಾದ- ಘನವಮತ ॥೨೫॥

ಅಜನಹಂಕಾರದೊಳು। ಭಜಿಸದಿರೆ ಶಿವನಾಮ।
ನಿಜ ಪೂಜೆಯಿಂದ ದೂರಾದ ವಿಶ್ವದೊಳು।
ಅಜ ಪೂಜೆ ವರ್ಜ್ಯ- ಘನವಮತ ॥೨೬॥

ಶಿವನಿಲ್ಲದ ವಸ್ತು। ಭುವನದೊಳಗಿಲ್ಲೆಂದು।
ಅವನಿಗಾಗಮವು ಸಾರುವದು ಶಿವನೊಬ್ಬ।
ಭುವನಕಧಿದೈವ- ಘನಮಠ ||೭೭||

ಮಾತೆ ಪಾರ್ವತಿ ಜಗದ ತಾತ ಪರಶಿವರುಭಯ।
ಪೂತಸಮ್ಮಿಲನ ವಿಶ್ವ ವಿಸ್ತಾರವಿದು।
ಯಾತರಿಂದಾಯ್ತು- ಘನಮಠ ||೭೮||

ಹರನಿಚ್ಛೆಯಿಂ ವಿಶ್ವ। ಚರಿಸ್ಯಾಡುವದುಸತ್ಯ।
ಹರನೊಲುಮೆ ಇಲ್ಲದಿರೆ ವಿಶ್ವದೊಳು ಮಾನವನು।
ಪರಿಯಂತು ಕಾಣ್ವ- ಘನಮಠ ||೭೯||

## ಹರಿಹರಸಮತೆ ವಚನ

ಹರಿಹರರ ಸಮತೆಯೊಳು। ಹಿರಿಕಿರಿಯು ಕಾಣ್ವನರ।
ಮರುಳುವನು ಧರೆಗೆ ಕ್ರಿಮಿಕೀಟ ಜನ್ಮದೊಳು।
ನರಳುವನು ಸತ್ಯ- ಘನಮಠ ||೮೦||

ಶಂಭು ಶ್ಯಾಮ್ಯಾಂಗರೊಳು। ನಂಬಿಕೆಯು ಮಂದಿರಲಿ।
ಇಂಬುಗೊಡಬೇಡಾ ಭೇದ ಭಾವಕೆ ಮನುಜ।
ಸಾಂಭನೊಲಿಯುವನು- ಘನಮಠ ||೮೧||

ಹರಿಹರರು ಬೇರೆಂಬ। ಕಿರಿಯ ಭಾವನೆಬೇಡಾ।
ಸರಳತನ ವಿರಲಿ ನರ ನಿನ್ನ ಹೃದಯದೊಳು।
ಹರಿಯ ಸಖ ಹರನು- ಘನಮಠ ||೮೨||

ಹರಿಶಕ್ತಿಯೇ ಗಿರಿಜೆ। ಹರನ ಅರ್ಧಾಂಗಿನಿಯು।
ಪರಕಿಸಲು ಬೇಡಾ। ಹರಿಹರ ತತ್ವದೊಳು।
ನರಭಾವ ಬೇಡಾ- ಘನಮಠ ||೮೩||

ಯಾವದೇವರೋಳೇನು। ಭಾವಪರಿಶುದ್ಧವಿರೆ।
ದೇವ ಶಿವನೊಲಿವ ಭಾವಶುದ್ಧಿಯೊಳುಂಟು।
ಜೀವಿಯೇ ದೇವ- ಘನಮಠ ||೮೪||

ಅಂಗಜಾ ಪಿತಹರಿಯು। ಅಂಗಜಾರಿಯು ಹರನು।
ಹಿಂಗದಂತುಭಯುರೊಂದುಗೂಡುತೆ ಜಗದ।
ಅಂಗವಾಗಿಹರು- ಘನಮಠ ||೮೫||

## ★ ದ್ವಾದಶ ಜ್ಯೋತಿರ್ಲಿಂಗ ವಚನಗಳು ★

### ಸೌರಾಷ್ಟ್ರಸೋಮ ನಾಥಲಿಂಗ

ಕಾಮ ಸಂಹರ ನೀನು। ಸೋಮನಾಕ್ಷಯಕಳೆದು।
ಪ್ರೇಮದಿಂ ಸೌರಾಷ್ಟ್ರ ದೇಶದೊಳು ನೆಲೆಗೊಂಡ।
ಸೋಮೇಶಲಿಂಗ- ಘನಮಠ ||೮೬||

### ಶ್ರೀಶೈಲಮಲ್ಲಿಕಾರ್ಜುನ ಲಿಂಗ

ಮಗನ ಮೋಹಕೆ ಶಿವನು। ಅಗಜಯುಳನೊಳಗೊಂಡು।
ಸೊಗಸು ಶ್ರೀಶೈಲಗಿರಿಯಲ್ಲಿ ಝಗಝಗಿಪ।
ಮಿಗೆ ಮಲ್ಲಿಕಾರ್ಜುನ- ಘನಮಠ ||೮೭||

### ಉಜ್ಜಯನಿ ಮಹಾಕಾಲಲಿಂಗ

ಧರ್ಮದೂಷಕನಾದ। ಕರ್ಮಿಯನು ಸದೆಬಡಿದು।
ನಿರ್ಮಲಉಜ್ಜಯಿನಿಯೊಳು ನೆಲಸಿದ ಮಹಾಕಾಲ।
ನೋರ್ಮಯಲಿಂಗ- ಘನಮಠ ||೮೮||

### ಓಂಕಾರ ವಿಮಲೇಶ್ವರ ಲಿಂಗ

ಹಂಕಾರಿ ವಿಧ್ಯೆನ। ಬಿಂಕದಾ ಮೂಲಳಿದು।
ಒಂಕಾರ ಕ್ಷೇತ್ರದೊಳು। ನೆಲಿಸಿದಾ ವಿಮಲೇಶ।
ನೋಕಾರ ಲಿಂಗ- ಘನಮಠ ||೮೯||

### ಪರಳಿಯಲ್ಲಿ ವೈಜನಾಥ ಲಿಂಗ

ಅಸುರ ದಶಕಠನ। ಅಸಮ ಭಕ್ತಿಗೆ ವಲಿದು।
ವಸುಧಿಯೊಳಗಧಿಕ ಪರಳಿಯೊಳು ನೆಲಿಸಿದ।
ಯಶವೈದ್ಯನಾಥ– ಘನಮಠ ||೯೦||

### ಢಾಕಿನಿಯಲಿ ಬೀಮಶಂಕರ ಲಿಂಗ

ಪ್ರೇಮದಿಂ ದಕ್ಷಿಣನ। ನೇಮಕ್ಕೆ ನೀನೊಲಿದು।
ಭೀಮಾದಿ ದೈತ್ಯರನು ದಹಿಸಿ ಢಾಕಿನಿ ಕ್ಷೇತ್ರ।
ಭೀಮಶಂಕರಲಿಂಗ– ಘನಮಠ ||೯೧||

### ಶೇತುಬಂಧನ ರಾಮೇಶ್ವರ ಲಿಂಗ

ಸೀತೆಯನು ಕಳಕೊಂಡು। ಶೇತುಬಂಧನ ಗೈದು।
ಧಾತ್ರಿಪಾಲಕ ರಾಮಚಂದ್ರ। ನಿರ್ಮಿತ ಲಿಂಗ।
ಪೂತರಾಮೇಶ– ಘನಮಠ ||೯೨||

### ದಾರುಕಾವನ ನಾಗೇಶಲಿಂಗ

ದಾರುಕಾವನದಿರುವ। ವೀರತಪಸಿಗಳನತಿ।
ಕ್ರೂರ ಕೊಲೆಗೈದ ಅಸುರರಾಂತಕ ಶಿವನೆ।
ನಾಗೇಶಲಿಂಗ– ಘನಮಠ ||೯೩||

### ಕಾಶೀಕ್ಷೇತ್ರ ವಿಶ್ವನಾಥ ಲಿಂಗ

ವಿಶ್ವದಾ ಜೀವಿಗಳ। ದುಸ್ತರದ ಅಘ ಕಳೆದು।
ಶಾಶ್ವತದ ಮುಕ್ತಿ ಪದವೀವ ಕಾಶಿಯು।
ವಿಶ್ವೇಶಲಿಂಗ– ಘನಮಠ ||೯೪||

### ಗೌತಮಿೂ ತಟದಲ್ಲಿ ತ್ರ್ಯಂಬಕ ಲಿಂಗ

ಈಶಧ್ಯಾನದಿ ನಿರತ। ಲೇಸಾದ ಗೌತಮನ।
ವಾಸದಿಂದ್ದೆಸರಾದ ಗೌತಮಿಯು ತ್ರ್ಯಂಬಕ।
ಈಶನೆ ಲಿಂಗ– ಘನಮಠ ||೯೫||

### ಹಿಮಾಲಯ ಕೇದಾರ ಲಿಂಗ

ಧರಣಿಯೊಳತ್ಯಧಿಕ। ಪರಮ ಪುಣ್ಯಕ್ಷೇತ್ರ।
ವರವಿತ್ತು ಹರಗೆ ಕರುಣಿಸಿದ ಮುಕ್ತಿಪದ
ಹರನೆ ಕೇದಾರ– ಘನಮಠ ॥೯೬॥

### ಶಿವಾಲಯ ಘೃಷ್ಣೇಶ ಲಿಂಗ

ಪ್ರತಿನಿತ್ಯ ನೂರೊಂದು। ಕೃತಿಲಿಂಗ ಪೂಜಿಸಿದ।
ವೃತ ಘೃಷ್ಣೆಗೊಲಿದು। ಸುತನಿತ್ತು ನೆಲೆಸಿದ।
ಕ್ಷಿತಿವಂದ್ಯ ಘೃಷ್ಣೇಸ– ಘನಮಠ ॥೯೭॥

ಧಾತ್ರಿಯೊಳಗನ್ನೆರಡು। ಜೋತಿರ್ಲಿಂಗವ ನಿತ್ಯ।
ಪ್ರೀತಿಯಿಂದೋದಿ ಕೇಳ್ದರ್ಗೆ ಮುಕ್ತಿಪದ।
ಖ್ಯಾತವಿದು ಸತ್ಯ– ಘನಮಠ ॥೯೮॥

ಜೋತಿರ್ಲಿಂಗದ ಧ್ಯಾನ। ಪ್ರೀತಿಯಿಂ ಪಠಿಸಲ್ಕೆ।
ಸಾತಿಶಯವಕ್ಕು ಸಂಸಾರದಿಹಪರಕೆ।
ಪಾತ್ರ ತಾನಕ್ಕು– ಘನಮಠ ॥೯೯॥

ಗುರು ಅನ್ನದಾನಿಯು। ಕರುಣಶಾಪಡೆದಿಹನು।
ಅರಿಯದಜ್ಞಾನಿ ಶರಣ ನಾಮುಕನವನ।
ಸ್ಥಿರವು ಕನಸಾವಿ– ಘನಮಠ ॥೧೦೦॥

ಏಕಮೂರ್ತಿಯು ಶಿವನು। ಲೋಕ ಕಲ್ಯಾಣಕ್ಕೆ।
ಸಾಕಾರ ರೂಪಲಿಂಗವಾಗಿರುವ ಭೂ।
ಲೋಕ ಪ್ರಸಿದ್ಧ– ಘನಮಠ ॥೧೦೧॥

ವಂದನೆಯು ಶಿವಮಠಕೆ। ತಂದೆ ಘನಮಠಕರುಣೆ।
ಯಿಂದ ಎರಡನೆಯ ಪಥಪೂರ್ಣವಾಗಿಹುದು।
ಮುಂದೆರಡು ಮೂರು– ಘನಮಠ ॥೧೦೨॥

— ೧೦೨ ನೇ ವಚನಕ್ಕೆ ದ್ವಿತೀಯ ಪಥ ಮಂಗಲಂ —

# — ತೃತೀಯ ಪಥ —

## ★ ಶಿವಯೋಗಿ ಶಿವಶರಣ ಶಿವಶರಣೆಯರ ವಚನಗಳು ★

### ಅಲ್ಲಮ ಪ್ರಭುದೇವರ ವಚನ

ಕಲ್ಯಾಣ ನಗರದೊಳು। ಬಲ್ಲಿದನು ತಾನಾಗಿ।-
ಸಲ್ಲಲಿತ ಶೂನ್ಯ ಪೀಠಕ್ಕೆ ಒಡೆಯನವ।
ನಲ್ಲಮನ ಭಜಿಪೆ- ಘನಮಠ ॥ ॥

ನಿತ್ಯ ನಿರವಯನುಸುವಿ। ರಕ್ತನವ ಕಲ್ಯಾಣ।
ಭಕ್ತರಿಗೆ ಬೇಡಿದುದ ನಿತ್ತನವ ವಿಶ್ವಕ್ಕೆ।
ಸ್ತುತ್ಯನಲ್ಲಮನು- ಘನಮಠ ॥೨॥

ಮಾರಮರ್ಧನಶಂಭು। ವೀರ ವಿರತಿಯ ಘನವ।
ತೋರಿಸಲು ಭುವಿಗೆ ಸಾರಿಬಂದಿಹ ದಿವ್ಯ।
ವೀರನಲ್ಲಮನು- ಘನಮಠ ॥೩॥

### ಬಸವೇಶ್ವರ ವಚನ

ಬಸವ ಲಿಂಗಾಯ ನಮೋ। ಅಸಮ ಶಿವರೂಪ ನಮೋ।
ಪಶುಪತಿಯರೂಪ ವಸುಧಿಗಿಳಿದಸಮಾಕ್ಷ।
ಶಶಿಧರನೇ ಬಸವ- ಘನಮಠ ॥೪॥

ಬಸವ ಮಂಗಲನಾಮ। ರಸನೆಗಮೃತಪಾನ।
ವಸುಧಿಯೊಳಗೆಲ್ಲ ಶಿವ ಭಕ್ತರಿಗೆ ಪ್ರೇಮ।
ನೊಸಲಾಕ್ಷ ಬಸವ। ಘನಮಠ ॥೫॥

ಬಸವ ಗುರುಲಿಂಗರೂ। ಪಸಮ ಜಂಗಮರೂಪ।
ಎಸೆವ ಶಿವಮತದ। ದುಂದುಭಿಯ ಮೊಳಗಿಸಿದ।
ನಸಮಾಕ್ಷ ಬಸವ- ಘನಮಠ ॥೬॥

ಲೋಕ ಪಾವನ ಬಸವ। ಶೋಕ ದೂರನು ಬಸವ।
ನೀ ಕರುಣಿಸಯ್ಯ ಭಜಕ ಮನದಿಷ್ಟ ಪಿ।
ನಾಕಿಯವತಾರಿ- ಘನಮಠ ||೭||

ನಿತ್ಯ ಮುನ್ನೂರರವತ್ತು ಸುಪವಾಡಗಳ।
ಎತ್ತಿ ಮಾಡುತ್ತಂದು ಮೆರೆದ ಶಿವಭಕ್ತ ವರ।
ತೊತ್ತು ನಾನಯ್ಯ- ಘನಮಠ ||೮||

ಅಂದು ದುರ್ಮದ ಜೈನ। ವೃಂದವಳಿದಿಹ ಶೌರ್ಯ।
ಇಂದು ತೋರಯ್ಯ ಧರೆಗಿಳಿದು ನೀ ಬಾರೋ।
ತಂದೆ ಗುರುಬಸವ- ಘನಮಠ ||೯||

ಆಶೆ ಪಾಶಗಳಿಂದ। ದೋಷ ದ್ವೇಷಗಳಿಂದ।
ಕ್ಲೇಶ ಪಂಚಕದಿ ನಾ ಬೆಂದೆ ಗುರುಬಸವ।
ಪೋಷಿಸೈ ತಂದೆ- ಘನಮಠ ||೧೦||

ಹಿಂದೆ ನಾನಾಯೋನಿ। ಯಿಂದ ಬಂದಿರುವೆನ್ನ।
ಭಂದನವ ಬಿಡಿಸಿ ದಂದುಗವ ಹರಿಸಯ್ಯ।
ತಂದೆ ಗುರುಬಸವ- ಘನಮಠ ||೧೧||

ಜ್ಞಾನವಿಲ್ಲದೆ ವಿಷಯ। ಕಾನನದಿ ಬಿದ್ದಿರುವೆ।
ನೂನವಿಲ್ಲದಿಹ ಪಥದೋರೊ ಗುರುಬಸವ।
ಮಾನನಿಧಿ ನೀನು- ಘನಮಠ ||೧೨||

ಕ್ರೂರ ವಿಷಯಾದಿ ಸಂ। ಸಾರವನು ಕಳೆದು ಭವ।
ದೂರ ನೆನಿಸಯ್ಯ ಬಸವ ದಂಡೇಶ ತವ।
ಚಾರು ಪದ ನಮಿಪೆ- ಘನಮಠ ||೧೩||

ನಾರಿ ಬೀಳುವ ಸಮಯ। ಹಾರೈಸೆ ತವನಾಮ।
ಜಾರುತ್ತಲಿರುವ ಭಾಂಡವನು ರಕ್ಷಿಸಿದ।
ಪಾರ ನೀ ಕರುಣಿ– ಘನಮಠ ||೧೪||

ಆಡಿದ ನುಡಿಯಂತೆ। ಮಾಡಿ ತೋರಿದ ಮಹಿಮೆ।
ನಾಡ ನುಡಿಯ ಪ್ರಭೆಯು ಬೆಳಗಿಸಿದ ವಿಶ್ವದೊಳು।
ಜೋಡಿ ನಿನಗಾರು– ಘನಮಠ ||೧೫||

ಕಿರಿದೆಂಬ ಭಾವದಲಿ। ಹಿರಿಯ ಶಂಕರನಾದಿ।
ಹಿರಿಯ ಕಿರಿದೆಂಬ ಭೇದ ಭಾವವನಳಿದು।
ಮೆರೆದಂಥ ಪ್ರಭುವೆ– ಘನಮಠ ||೧೬||

ನಿತ್ಯ ನಿರ್ಮಳ ರೂಪ। ಭಕ್ತರೊಳು ಶ್ರೇಷ್ಠ ನೀ।
ಕರ್ತೃ ನೀನಾದಿ ಮೃತ್ಯುಜಯನವತಾರಿ।
ಮುಕ್ತಿ ನೀದೋರೊ– ಘನಮಠ ||೧೭||

ಚಿಂತೆ ಏತಕೆ ಮನುಜ। ಭ್ರಾಂತಿಯನು ನೀ ತೊರೆದು।
ಸ್ವಾಂತದೊಳು ಕಲ್ಯಾಣ ಬಸವನಂ ನೆನೆದು ನಿ।
ಶ್ಚಿಂತ ನೀನಾಗು– ಘನಮಠ ||೧೮||

ಅಸಮಾಕ್ಷ ನವತಾರಿ। ವಸಧಿಯೊಳಗ್ಯಾರಿಲ್ಲ।
ಬಸವೇಶ ನಮ್ಮ ಕುಲದೈವವೆಂದರಿದು।
ಅಸಮ ಪದ ಪಡಿಯೋ– ಘನಮಠ ||೧೯||

ಬೇಗ ಬಸವನ ನಾಮ। ರಾಗದಿಂ ನುಡಿಸಲ್ಕೆ।
ಆಗಲಣಿಮಾದಿ ಸಿದ್ಧಿಗಳು ದೊರಕುವವು।
ನೀಗುವದು ಭವವು– ಘನಮಠ ||೨೦||

ಶಿವನ ಭಕ್ತಿಯನು ಈ। ಭುವನದೊಳು ಮೆರೆಯಿಸಿದ।
ಅವತಾರಿ ನಮ್ಮ ಬಸವನಂ ಭಜಿಸಲ್ಕೆ।
ಸವನಿಪುದು ಸುಖವು– ಘನಮಠ ॥೨೧॥

ಸಿದ್ಧಿ ವಿದ್ಯೆಗಳೆಲ್ಲ। ಸಾಧ್ಯವಾಗ್ವವು ಮನುಜ।
ಬದ್ಧನಾಗಿಹನು ಗುರುಬಸವ ಶಿವಮತವ।
ನುದ್ಧರಿಸಬಲ್ಲ– ಘನಮಠ ॥೨೨॥

ನಂದಿಯುಂಗರ ತೆಗೆದು। ವಂದಿಸಲು ಹರಿಪೀಠ।
ನಿಂದುರಿಯಲಾಗ ಬಿಜ್ಜಳನ ಪಾಲಿಸಿದ।
ತಂದೆ ಬಸವೇಶ– ಘನಮಠ ॥೨೩॥

ನೀರಗಟ್ಟೆಯ ಮಾಡಿ। ವೀರಶೈವದ ಘನವ।
ಧಾರುಣೇಶ್ವರಗೆ ತೋರಿಸಿದ ಶಿವ ಮಹಿಮೆ।
ಶೂರ ಬಸವೇಶ– ಘನಮಠ ॥೨೪॥

ಬಸವ ಬಸವೆಂಬ ನುಡಿ। ವಸಧಿಯೊಳಗೆಲ್ಲ ಜನ।
ರಸನೆಯಿಂಗುಡಿಯುವರು ಕೊಡುಕೊಳುವ ಸಮಯದೊಳು।
ಶಶಿಧರನೆ ಬಸವ– ಘನಮಠ ॥೨೫॥

## ಚನ್ನಬಸವ ವಚನ

ಷಟಸ್ಥಲದ ಸಾರವನು। ದಿಟ ಭಕ್ತಿಯಿಂ ಕೇಳ್ದ!
ವಟು ಸಿದ್ಧರಾಮುಂಗರುಹಿದಾ ಶರಣ ಗಣ।
ಪಟು ಚನ್ನಬಸವ– ಘನಮಠ ॥೨೬॥

ಚನ್ನಬಸವನ ನಾಮ। ನನ್ನಿಯಿಂ ಪಠಿಸಲ್ಕೆ।
ಸೊನ್ನಲಾಪೂರದ ಸಿದ್ಧರಾಮನು ಮುಕ್ತಿ।
ಸನ್ನಿಹಿತನಾದ– ಘನಮಠ ॥೨೭॥

ಅಕ್ಕ ನಾಗಮ್ಮನಿಗೆ| ಅಕ್ಕರದ ಮಗನಾಗಿ|
ಚೊಕ್ಕ ಶ್ರೀ ಚನ್ನಬಸವನವತಾರವದು|
ಮಿಕ್ಕಿದ ಪ್ರಭೆಯು- ಘನಮಠ ||೨೮||

ಮಾರಹರ ಪರಶಿವ ಕು| ಮಾರ ಷಣ್ಮುಖ ತಾನು|
ಸಾರ ಷಟಸ್ಥಲವ ಧಾರುಣಿಗೆ ಅರುಹಲ್ಕೆ|
ವೀರನವತಾರ- ಘನಮಠ ||೨೯||

ಚನ್ನಬಸವಗೆ ಶರಣು| ಮಾನ್ಯ ಮಹಿಮೆಗೆ ಶರಣು|
ಉನ್ನತೋನ್ನತ ಪದವಿ ಮೆರೆದ ಷಟಸ್ಥಲ ಮೂರ್ತಿ|
ಮನ್ಮನದಿ ಸ್ಮರಿಪೆ- ಘನಮಠ ||೩೦||

## ಸಿದ್ಧರಾಮೇಶ್ವರ ವಚನ

ಸಿದ್ಧರಾಮಯ್ಯ ಪ್ರ| ಸಿದ್ಧ ನೆನಿಸಿದ ಯೋಗಿ|
ಮುದ್ದನಗೌಡನ ಮೋಹದ ಸುಕುಮಾರ|
ಗೆದ್ದನವ ಭವನ- ಘನಮಠ ||೩೧||

ಸುಗ್ಗಲದೇವಿಯ| ಹಿಗ್ಗಿನ ಮಗನಾಗಿ|
ಬಗ್ಗ ಬಡಿದಿರುವ ಅರಿವರ್ಗವಾರನು|
ಸಗ್ಗ ಪಡೆದ ಸಮ- ಘನಮಠ ||೩೨||

ಅಲ್ಲಮನ ಮಾರ್ಮಿಕದ| ಚಲ್ವಬೋಧೆಯ ಪೊಂದಿ|
ಎಲ್ಲ ಕರ್ಮಂಗಳನು ಅತಿಗಳೆದು ಪರಶಿವ|
ನಲ್ಲಿ ಬೆರೆತಿರುವ- ಘನಮಠ ||೩೩||

ಚನ್ನಬಸವನ ಸುಪ್ರ| ಸನ್ನ ಬೋಧೆಯ ಪಡೆದು|
ಎನ್ನತೋನ್ನತ ಪದವಿಯ ಪಡೆದ ಶಿವಯೋಗಿ|
ಚೆನ್ನ ಸಿದ್ಧರಾಮ- ಘನಮಠ ||೩೪||

ಈಶ ಸೊನ್ನಲಪೂರದ| ದೀಶನೆ ಸುಗಣ ಗಣ|
ಕೋಶ ಶ್ರೀ.ಸಿದ್ಧರಾಮನೆನ್ನಯ ಹೃದಯ|
ವಾಸಿಪ ಪ್ರಭುವೆ- ಘನಮಠ ||೩೫||

## ಅಕ್ಕಮಹಾದೇವಿ ವಚನ

ಚಿಕ್ಕಂದಿನೊಳು ಹೃದಯ| ಚೊಕ್ಕಟವ ತಾ ಮಾಡಿ|
ಮುಕ್ಕಣ್ಣ ನೊಲಿಮೆ ಪಡೆದಳಾ ಶಿವಶರಣೆ|
ಅಕ್ಕಮಹಾದೇವಿ- ಘನಮಠ ||೩೬||

ಉಡುತಡಿಯ ತೊರೆಯುತ್ತ| ನಡೆದು ಕಲ್ಯಾಣಕ್ಕೆ|
ಒಡೆಯನಲ್ಲಮನ ದರ್ಶನದಿ ಶ್ರೀ ಗಿರಿಯ|
ಮೃಡಪದವಿ ಪೊಂದಿ- ಘನಮಠ ||೩೭||

ಬಸವೇಶನಾದೇಶ| ಪಸರಿಸಲು ನಾಡೆಲ್ಲ|
ದಿಶೆ ದಿಶೆಯ ಶರಣರಾಗಮಿಸಿ ಕಲ್ಯಾಣ|
ದುಸುರಿದರು ವಚನ- ಘನಮಠ ||೩೮||

ಮಡಿವಾಳ ಮಾಚಯ್ಯ| ಮೃಡ ಶರಣ ಮಾರಯ್ಯ
ಹಡಪದಪ್ಪಣ್ಣ ಮೊದಲಾದ ಶರಣ ಗಣ|
ನುಡಿ ಶಾಸ್ತ್ರ ರಚನೆ- ಘನಮಠ ||೩೯||

ಕಲ್ಯಾಣ ನಗರದೊಳು| ಎಲ್ಲ ಶರಣರು ಸೇರಿ|
ಸೊಲ್ಲು ಸೊಲ್ಲಿಂಗೆ ನುಡಿದ ನುಡಿ ವಿಶ್ವದೊಳು|
ಬಲ್ಲವರ ಶಾಸ್ತ್ರ- ಘನಮಠ ||೪೦||

ಶರಣರಾ ನುಡಿ ಗಡಣ| ಧರಣಿಗದು ಹಿರಿಶಾಸ್ತ್ರ|
ಹರಮತದ ಶ್ರೇಷ್ಠ ವೇದಾಗಮದ ಸಾರ|
ಶರಣರಾ ವಚನ- ಘನಮಠ ||೪೧||

ಬಸವನಾ ದಯದಿಂದ। ವಸುಧಿಯೊಳಗ್ಗ ರಮಾತವು।
ದಿಶೆ ದಿಶೆಯ ಬೆಳಗುವದು ರವಿಶಶಿಯ ಪ್ರಭೆಯಂತೆ।
ವಸಧಿಯೊಳು ಸ್ಥಿರವು- ಘನಮಠ ॥೪೨॥

## ಎಡೆಯೂರು ತೋಂಟದ ಸಿದ್ಧಲಿಂಗ ವಚನ

ಗುರು ತೊಂಟದಾರ್ಯ ನೀ। ಹರಮತದ ವೃದ್ಧಿಯನು।
ಧರೆಯೊಳಗೆ ಸ್ಥಿರ ಮಾಡಿ ಮೆರೆದ ನಿರಂಜನನೆ।
ಗುರು ಸಿದ್ಧಲಿಂಗ- ಘನಮಠ ॥೪೩॥

ಸಿದ್ಧಲಿಂಗನು ತಪದೊ। ಳಿದ್ದ ಸ್ಥಾನವು ಜಗ ಪ್ರ।
ಸಿದ್ಧ ವೆನಿಸಿರುವ ಸಿದ್ಧಗಂಗಾಕ್ಷೇತ್ರ।
ಶುಧ್ಧ ಶಿವತಾಣ- ಘನಮಠ ॥೪೪॥

ಆರಾರು ಅರಿಯದಿಹ। ಮೀರಿದ ಷಟಸ್ಥಲದ।
ಸಾರಾಮೃತವನು ಧಾರಿಣಿಗೆ ಅರುಹಿದ।
ವೀರಯತಿ ವಿರತ- ಘನಮಠ ॥೪೫॥

## ಗುಡಗುಂಟಿ ಅಮರೇಶ್ವರ ವಚನ

ಯರಡೋಣಿ ಗ್ರಾಮದಾ। ಹರಶರಣ ನಾದಯ್ಯ।
ಶರಣನಾ ಸತಿ ಮಾಳಗುಂಡೆಯರ ಮಗನಾದ।
ತರುಳನಮರೇಶ- ಘನಮಠ ॥೪೬॥

ಈಶನೇ ಅಮರೇಶ ರೂಪದಿಂದಿಳೆಗಿಳಿದು।
ಹಾಸಿನಾ ಮಲೆಯ ಕೊಳ್ಳದೊಳು ನೆಲೆಸಿದ।
ಈಶನಮರೇಶ- ಘನಮಠ ॥೪೭॥

ಗಜದಂಡ ಸ್ವಾಮಿಗಳ। ನಿಜ ಬೋಧೆಯನು ಪೊಂದಿ।
ತ್ರಿಜಗದ್ದೈಸರಾದ ಹುಬ್ಬಳ್ಳಿಯೊಳು ವಾಸ।
ನಿಜ ಸಿದ್ಧಾರೂಢ- ಘನಮಠ ॥೪೮॥

## ಕೂಡಲ ಸಂಗಮ ಕ್ಷೇತ್ರ ವಚನ

ಮಾನವನ ತನುವಿನಾ। ಮ್ಲಾನತೆಯ ಕಳೆಯುತ್ತ।
ನೂನವಾಗದಲೆ ನದಿದ್ವಯದ ಸಂಗಮವು।
ತಾಣ ಬಲುಸೊಗಸು- ಘನಮಠ ॥೪೯॥

ಮಲಪಹಾರಿಣಿ ಕೃಷ್ಣೆ। ಚಲುವ ಜೋಡಣೆಯಿಂದ।
ಮಲಹರನೆ ಲಿಂಗರೂಪ ಸಂಗಮ ಕ್ಷೇತ್ರ।
ಬಲುರಮ್ಯ ಜಗದಿ- ಘನಮಠ ॥೫೦॥

ನದಿಗಳೆರಡು ಕೂಡಿ। ಮುದದಿ ಹರಿಯುವ ತಾಣ।
ಮದನಾರಿ ಲಿಂಗರೂಪ ಸಂಗಮ ಕ್ಷೇತ್ರ।
ಒದಗಿ ಶುಭನಾಮ- ಘನಮಠ ॥೫೧॥

ಸಂಗಮ ಕ್ಷೇತ್ರವದು। ಮಂಗಲಾತ್ಮಕವಾಗಿ।
ತುಂಗ ಕರುನಾಡ ಜನಮನಕೆ ದೈವಾಗಿ।
ಕಂಗೊಳಿಸುತಿಹದು- ಘನಮಠ ॥೫೨॥

## ತಂಗಡಗಿ ನೀಲಮ್ಮನ ವಚನ

ಬಸವೇಶನಾ ಮಡದಿ। ಅಸಮ ಶಿವಶರಣೆ ತಾ।
ಮಸವಳಿದ ಗುಣಶೀಲೆ। ದಾಸೋಹ ಸಂಪನ್ನೆ।
ಶರಣೆ ನೀಲಮ್ಮ- ಘನಮಠ ॥೫೩॥

ತಂಗಡಗಿ ಗ್ರಾಮವದು। ಮಂಗಲವು ನದಿತೀರ॥
ತಂಗಿದಳು ತಂಗಿ ನೀಲಮ್ಮ ಶಿವಶರಣೆ।
ಮಂಗಲಾತ್ಮಕಳು- ಘನಮಠ ॥೫೪॥

ಪತಿಯು ವಿರಹದಿ ನೊಂದು। ಖತಿಯಿಂದ ಕೃಷ್ಣೆಯಾ।
ತಟದಲ್ಲಿ ನಿಂದು ತನ್ನಾತ್ಮ ಲಿಂಗದೊಳು।
ಘಟವಲಯಗೊಳಿಸಿ- ಘನಮಠ ॥೫೫॥

ಅಂಗೈಯ್ಯ ಲಿಂಗದೊಳು। ಅಂಗವನು ಲಯಗೊಳಿಸಿ।
ಲಿಂಗದೋಳ್ ದೃಷ್ಟಿ ಬೆರೆಯಲ್ಕೆ ನೀಲಮ್ಮ
ಲಿಂಗೈಕ್ಯಳಲ್ಲಿ- ಘನಮಠ ||೫೬||

ತಂಗಿಯಡಗಿದ ತಾಣ। ತಂಗಡಗಿ ಇಂತೆಂಬ।
ಮಂಗಲದ ನಾಮ ವಿಶ್ವದೋಳ್ ಹೆಸರಾದ।
ತಂಗಡಗಿ ಗ್ರಾಮ- ಘನಮಠ ||೫೭||

**ಕೊಡೆಕಲ್ಲ ಬಸವೇಶ ವಚನ**

ಕಲ್ಲನೆಂಬುವ ಭಕ್ತ। ನೊಳ್ಳೆ ದೃಡ ಭಕ್ತಿ ಯಿ।
ಎಲ್ಲ ಕಾಲದೋಳ್ ಬಸವಂಗೆ ಛತ್ರಿಯನು।
ಬಲ್ಲಿದನು ಪಿಡಿದ- ಘನಮಠ ||೫೮||

ಅಂದಿನಿಂದಾಗ್ರಾಮ। ಸುಂದರದ ಕೊಡೆಕಲ್ಲು।
ಎಂದಿಗೂ ಸ್ಥಿರವು ಬಸವಕಲ್ಲರ ಸ್ಮರಣೆ।
ಅಂದವದು ಜಗದಿ- ಘನಮಠ ||೫೯||

**ಕಲ್ಬುರ್ಗಿ ಶರಣ ಬಸವನ ವಚನ**

ಚಲುವ ಕಲುಬುರ್ಗಿಯೊಳು। ನೆಲೆಯಾಗಿ ನಿಂದು ಶಿವ।
ಕುಲ ಸಾರ್ವಭೌಮ ಶರಣಬಸವನ ಸ್ತವನ।
ಹಲವು ವಿಧ ಪಾಡ್ವೆ- ಘನಮಠ ||೬೦||

ಕುಳ್ಳು ಸಾವಿರ ಕೊಂಡು। ಒಳ್ಳೆ ಮಕ್ಕಳ ನಿತ್ತೆ।
ಜೊಳ್ಳು ಮಾತಲ್ಲ ಜಗದೊಳಗೆ ಕಲುಬುರಿಗಿ।
ಒಳ್ಳೆ ಸುಕ್ಷೇತ್ರ- ಘನಮಠ ||೬೧||

**ಅಂಕಲಿಂಗಿ ಅಡವಿ ಸ್ವಾಮಿ ಶಾಖಾಮಠ**
**ತಲೆಕಟ್ಟ್ ನಿರುಪಾದಿ ಮಠದ ವಿಸ್ತಾರ ವಚನ**

ಎಳನೂರೆಪ್ಪತ್ತುಕಾಲ ಕರ್ನಾಟಕದಿ।
ಬಾಳಿದನು ಅಂಕಲಿಗಿ ಅಡವಿಸ್ವಾಮಿಯು ಜಗದ।
ಬಾಳಾಕ್ಷ ಸಮನು- ಘನಮಠ ||೬೨||

ತಲೆಕಟ್ಟಿನಾ ಮಠದಿ। ನೆಲೆಸಿರುವ ನಿರುಪಾಧಿ।
ನಿಲಯ ಅಂಕಲಗಿ ಮಠದ ಮೂಲಪುರುಷನು ಇವನೊ।
ಇಳೆಗಿಳಿದು ಬಂದ- ಘನಮಠ ||೬೩||

ತಲೆಕಟ್ಟಿನಾ ಮಠವು। ಇಳೆಯೊಳದು ಹೆಸರಾಗಿ।
ಚಲುವ ಸೊಗರೇಶಸ್ವಾಮಿ ಮಠದುನ್ನತಿಯು।
ಹಲವು ವಿಧಗೈದ- ಘನಮಠ ||೬೪||

ಸುಗುರೇಶನಾ ತನಯು। ಅಗಜಾದಿಪತಿಯಂತೆ।
ಸೊಗಸು ಪಕೀರೇಶ ನಾಮ ಸಜ್ಜನ ಪ್ರೇಮ
ಜಗಮಾನ್ಯ ವಂದ್ಯ- ಘನಮಠ ||೬೫||

ಪಕೀರೇಶನಾ ಪತ್ನಿ। ಅಕಲಂಕ ಪತಿವ್ರತೆಯು।
ನಿಖಿಲ ನಾಡೆಲ್ಲ ಹೆಸರಾಂತ ಸಿದ್ದಮ್ಮ
ಸುಖರವೆನಿಸಿದಳು ಘನಮಠ ||೬೬||

ಹೇಮ ನಾಮದ ಸ್ವಾಮಿ। ಪ್ರೇಮಿ ಕರುನಾಡಿನೊಳು।
ಶ್ರೀ ಮಹಾದೇವನೊಲು ಮೆರೆದ ಮಹಿಮಾಶಾಲ।
ಕಾಮಜಿತಸ್ವಾಮಿ- ಘನಮಠ ||೬೭||

ಸತಿಪತಿಗಳುಭಯರು। ರತಿ ಮನ್ಮಥರ ತೆರದಿ।
ಅತಿ ಚೆಲುವೆ ವೀರಭದ್ರಸ್ವಾಮಿ ಗಂಗಮ್ಮ।
ಕ್ಷಿತಿಯೊಳಗೆ ಮಿಗಿಲು- ಘನಮಠ ||೬೮||

ಸತಿಪತಿಗಳುಭಯರಿಗೆ। ಅತಿ ಪ್ರೇಮದಾ ಕುವರಿ।
ಜಿತಕಾಮ ಪಾರ್ವತಿ ನಾಮಕರುನಾಡಿನೊಳು।
ಅತಿಪ್ರೇಮ ಜಗದಿ- ಘನಮಠ ||೬೯||

ಪಶುಪತಿಯ ಅವತಾರಿ। ಬಸವರಾಜಸ್ವಾಮಿ।
ವಸುಧಿಯೊಳಗೆಲ್ಲ ಜನಮನಕೆ ಪ್ರೇಮದಾ।
ಶಶಿಬಿಂಬ ಮೂರ್ತಿ- ಘನಮಠ ॥೭೦॥

ಕರುನಾಡಿನೊಳು ಸುಂ। ದರವಾಗಿ ಮೆರೆಯುವದು।
ಪರಮ ನಿರುಪಾದಿ ತಲೆಕಟ್ಟಿನಾ ಮಠವು।
ಸ್ಥಿರವು ಧರೆಯೊಳಗೆ- ಘನಮಠ ॥೭೧॥

## ಎಕ್ಕರನಾಳ ಸಂತೆಕೆಲವೂರು ಗುರುಪೀಠದ ವಚನ

ಕೆಲವೂರ ಗ್ರಾಮದೊಳು। ನೆಲೆಸಿರುವ ಗುರುವಂಶ।
ಹಲವು ಗ್ರಾಮದೊಳು ಗುರುಪೀಠದಧಿಕಾರ।
ಸ್ಥಲಗಳಿರುತಿಹವು- ಘನಮಠ ॥೭೨॥

ಮೂಲ ಎಕ್ಕರನಾಳು। ಗುರುಪೀಠದ ಶಾಖೆ।
ಯೋಳು ಜನಿಸಿ ಸಂತೆಕೆಲವೂರ್ಹಳ್ಳಿ ಗ್ರಾಮದೊಳು।
ಆಲಯಗಳಿಹವು- ಘನಮಠ ॥೭೩॥

ಮುಸಲಕಾರಲಕುಂಟಿ। ಜಸವಂತ ಗುರುಗಳೊಳು।
ಯಶವ ಪಡೆದಿರುವ ಅಮರ ಕವಿಗಳ ಕೀರ್ತಿ।
ಪಸರಿಸಿದುದು ಜಗದಿ- ಘನಮಠ ॥೭೪॥

ಘನಮಠೇಶರ ಧ್ಯಾನ। ಮನಸಿನಿಂ ಮಾಡುತ್ತ।
ತನು ಶುದ್ಧವಾಗಿ ಘನಮಠೇಶನ ಚರಿತೆ।
ಯನು ಪೂರ್ಣಮಾಡಿ- ಘನಮಠ ॥೭೫॥

ಗುರು ಬಸವಲಿಂಗ ನೀರಲ್ಕೆರಿಯ ತುಂಬದಾ।
ಗುರು ಶಿದ್ಧ ಶಿವಯೋಗಿ ಕುಷ್ಟಗಿಯ ಹಿರೇಮಠದ।
ಶರಣೆ ರುದ್ರಮ್ಮ- ಘನಮಠ ॥೭೬॥

ಉರುತರ ಪುರಾಣ ರಚಿಸಿ। ಬಳಗಾನೂರು।
ಮರಿಸ್ವಾಮಿ ಜೆಡೆಸಿದ್ಧಯೋಗಿ ಎಮ್ಮಿಗನೂರ।
ಗುರುಮಹಂತ ಕೃಪೆಯು- ಘನಮಠ ॥೭೭॥

ಶಿವಯೋಗಿಗಳ ಸೇವೆ। ಅವಿರತವು ಮಾಡುತ್ತ।
ಶಿವಯೋಗಿ ಘನಮಠೇಶರ ಕೃಪೆಯು ಪಡೆದು ತಾ।
ಭವನಾಶಗೈದ- ಘನಮಠ ॥೭೮॥

ಮಾನವನು ಮರವಿನೊಳು। ತಾನು ಮಾಡಿದ ಪಾಪ।
ಜ್ಞಾನದಿಂದರಿದು ಶಿವಯೋಗಿಗಳ ಸೇವೆ।
ಮಾನಸದಿಗೆಯ್ಯೋ- ಘನಮಠ ॥೭೯॥

ಸಂದೇಹವಿಲ್ಲದಲೆ। ಇಂದುಧರ ಕೃಪೆಯಾಗಿ।
ಹೊಂದುವನು ಮುಕ್ತಿ ಪದವಿದಕೆ ಸಂದೇಹ।
ವೆಂದಿಗೂ ಬೇಡಾ- ಘನಮಠ ॥೮೦॥

ಮಾಡಿ ಘನಮಠ ಸೇವೆ। ದೂಡಿ ದುಷ್ಕೃತಿಯಲ್ಲ।
ನಾಡಿನೊಳಗ್ಹೆಸರು ಪಡೆದ ಮಹಿಮಗೆ ಜಗದಿ।
ಜೋಡಿ ಯಾರಿಲ್ಲ- ಘನಮಠ ॥೮೧॥

ಸಂತಿಕೆಲವೂರ ಭಕ್ತ। ರಂತರಂಗವನರಿದು।
ನಿಂತನಿವನಿಲ್ಲೆ ನಿರುತ ಘನಮಠಯೋಗಿ।
ಸಂತತವು ಕಾಯ್ವ- ಘನಮಠ ॥೮೨॥

ಎಲ್ಲ ಮತದವರಿಲ್ಲಿ। ಬಲ್ಲಿದನು ಘನಮಠಗೆ।
ಸಲ್ಲಿಸುತ್ತಿಹರು ತಮ್ಮ ಮಾನಸ ಭಕ್ತಿ
ಎಲ್ಲ ಕಾಲದಲಿ- ಘನಮಠ ॥೮೩॥

ಮತಮತಾಂತರದ್ಯಾವ। ಮತ್ಸರವು ಮೊದಲಿಲ್ಲ
ಸತತ ಶಿವಯೋಗಿ ಕೃಪೆಯಿಂದ ಸರ್ವರೂ।
ಅತಿ ಹರುಷದಿಹರು- ಘನಮಠ ||೮೪||

ನೆರೆಯೊಳುಳಿಹ ಹಳ್ಳಿ। ಕಾರಲಕುಂಟೆ ಸಂಪದ।
ಕರಗ್ರಾಮ ಭಕ್ತರ ಅಂಕಸದೊಡ್ಡಿ ಸರ್ವರೂ।
ಅರಿತು ಸೇವಿಸರು- ಘನಮಠ ||೮೫||

ಕುಣಿಯ ಕೆಲವೂರ ಗ್ರಾಮ ಅನತಿ ಪಾರ್ಶ್ವದೊಳಿರುವ।
ಘನಮಹಿಮ ಬಸವೇಶ ನಂದಿರೂಪದಿ ತಾನು।
ಅನುಗಾಲವಿರುವ- ಘನಮಠ ||೮೬||

## ಕುಣಿಕೆಲವೂರ ಬಸವೇಶ ವಚನ

ಗುರುವಿನಾಮಠದವರು। ಪರಮ ಗುರು ಮನೆದೈವ।
ಹರುಷದಿಂದವರು ಚಿರಕಾಲಸೇವಿಷರು।
ಹರಧರ್ಮರೂಪ- ಘನಮಠ ||೮೭||

ವರುವರುಷ ಗ್ರಾಮದಾ। ಹರಭಕ್ತರೆಲ್ಲರೂ।
ಪರಮ ಹರುಷದೊಳು ಶಿವರಾತ್ರಿ ಸಮಯದೊಳು।
ಮೆರೆಯಿಸುವರವರು- ಘನಮಠ ||೮೮||

ಅಸಮ ಮಹಿಮಾ ಶಾಲಿ। ಬಸವೇಶ ಜಾತ್ರೆಯನು।
ಪಶುಪತಿಯ ಭಕ್ತರೆಲ್ಲರು ಕೂಡಿ ಮಾಡುವರು।
ಬಸವ ಕುಲದೈವ- ಘನಮಠ ||೮೯||

ಏಳೆಂಟು ಶತಮಾನ। ಕಾಲದಿಂ ಕೆಲವೂರ।
ಮೂಲ ಗುರುಪೀಠ ಬಾಳಿ ಬಂದುದು ಇಲ್ಲಿ।
ಬಾಳಾಕ್ಷ ಕರುಣೆ- ಘನಮಠ ||೯೦||

ವಿನಯ ವಿದ್ಯಾಶೀಲ। ಗುಣಯುತರು ಗುರುಗಳ।
ಮನೆತನದ ಗೌರವವ ಪಾಲಿಸುತ ಬಂದಿಹರು।
ಘನಮಹರ ಕರುಣೆ- ಘನಮಠ ॥೯೧॥

## ಶಹಾಪುರ ಚರಬಸವೇಶ ವಚನ

ಕಲಬುರಗಿ ಜಿಲ್ಲೆಯೊಳು। ಚೆಲುವ ಶಹಪೂರಿನೊಳು।
ನೆಲೆಸಿರುವನಲ್ಲಿ ಚರಬಸವ ತಾತನಾ।
ನಿಲಯ ಸುಂದರವು- ಘನಮಠ ॥೯೨॥

ಅನವಾರ ಗ್ರಾಮದೊಳು। ಜನನಿ ಜನಕರು ಅಲ್ಲಿ।
ಘನಪುಣ್ಯತಮರೂ ಶೀಲವಂತಮ್ಮನವ್ವೆ।
ಜನನ ತಾಯ್ತಂದೆ- ಘನಮಠ ॥೯೩॥

ಶಾಲಿವಾಹನ ಶಕೆಯ ಹೆದಿನೇಳನೂರರಾ।
ಮೇಲೆ ನಾಲ್ವತ್ನಾಲ್ಕು ಕಾಲದೊಳು ಕನ್ನಡದ।
ಇಳೆಯೊಳವತರಿಸಿ- ಘನಮಠ ॥೯೪॥

ಗುರುವು ಕಿಣಿಕೇರಿಯಾ। ಪರಮ ಚನವೀರಾರ್ಯರ್।
ಕರುಣೆಯನು ಪಡೆದು ಕರುನಾಡಿನೊಳು ಮಹಿಮೆ।
ಮೆರೆದ ಚರ ಬಸವ- ಘನಮಠ ॥೯೫॥

ಸೂಗಮ್ಮ ಸತಿಯೊಡನೆ। ರಾಗದಿಂ ಸಂಸಾರ।
ಭೋಗಿಸದ ಮಹಿಮ ಇಹ ಪರವ ಸಾಧಿಸಿದ।
ರಾಜಯೋಗದೊಳು- ಘನಮಠ ॥೯೬॥

ಅವಿರತವು ಜೀವನದಿ। ಜವಳಿ ಕಾಯಕಗೊಂಡು।
ಶಿವನಾಮ ಸ್ಮರಣೆಯೊಳು। ಭವಸಾಗರವ ದಾಟಿ।
ಶಿವಶರಣನಾದ- ಘನಮಠ ॥೯೭॥

ಗುರುಲಿಂಗ ಜಂಗಮರ। ಸ್ಥಿರ ಸೇವೆಯನು ಮಾಡಿ।
ಗುರುಬಸವನೆಂಬ ಮಗನೊಡನೆ ಚರತೃಪ್ತಿ।
ನಿರುತ ತಾ ಗೈದ– ಘನಮಠ ॥೯೮॥

ನಿತ್ಯಚರದಾಸೋಹ। ಭಕ್ತರಾತಿಥ್ಯದೊಳು।
ಸ್ತುತ್ಯವಾದಾ ಶಿವಪುರಾಣಗಳ ಘೋಷ ಮನ।
ಸೋಕ್ತ ತಾ ಗೈದ– ಘನಮಠ ॥೯೯॥

ಸಗರ ನಾಡಿನೊಳವನು। ಅಗಣಿತ ಮಹಿಮೆಗಳ।
ಬಗೆಗೊಳಿಸಿ ಮೆರೆದ ಚರಬಸವ ತಾತನು।
ಅಗಜೆಪತಿ ಶರಣ– ಘನಮಠ ॥೧೦೦॥

ಇಹಪರವ ಸಾಧಿಸಿದ ಮಹಮೂರ್ತಿ ಚರಬಸವ।
ಶಹಪುರಿವೆ ತನ್ನ ನಿಜವಾಸ ಭಕ್ತರಾ।
ಸಹಕಾರ ಪಡೆದ– ಘನಮಠ ॥೧೦೧॥

ವರುವರುಷ ಜಾತ್ರೆಯನು ಹರುಷದಿಂದಾಚರಿಪ।
ಕರುನಾಡ ಸಗರ ಸಹಪೂರ ಭಕ್ತರ।
ಶಿರಿಯ ಸೌಭಾಗ್ಯ– ಘನಮಠ ॥೧೦೨॥

— ೧೦೨ ನೇ ವಚನಕ್ಕೆ ತೃತೀಯ ಪಥ ಮಂಗಲಂ —

# — ಚತುರ್ಥ ಪಥ —

## ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳ ಜೀವನಸಾರ ಸಂಕ್ಷಿಪ್ತ ವಚನಗಳು

ನಾಗಭೂಷಣ ಶಿವಯೋಗಿ। ನೀಗಿ ಸಂಸಾರವನು।
ಸಾಗಿ ಕರುನಾಡಿನ ಭಕುತರಿಗೆ ಶಿವಮತವ।
ತ್ಯಾಗಿ ಬೋಧಿಸಿದ- ಘನಮಠ ॥೧॥

ಗುರು ಧ್ಯಾನವ ಮಾಡುತ್ತ। ಚರಿಸಿ ಕರುನಾಡೆಲ್ಲ।
ಹಗಿಭಕ್ತರೊಲಿಮೆಯಾಗಲಿಕ್ಕೆ ಕೆಲವೂರ।
ಸ್ಥಿರ ಮಾಡಿಕೊಂಡ- ಘನಮಠ ॥೨॥

ಅಂತಕಾರಿಯ ಭಕ್ತ। ರಂತರಂಗವನರಿದು।
ಸಂತೆಕೆಲವೂರ ಗ್ರಾಮದೊಳ ಸ್ಥಿರವಾಗಿ।
ನಿಂತ ಶಿವಯೋಗಿ- ಘನಮಠ ॥೩॥

ಹೇಯಮಯ ಸಂಸಾರ। ಕಾಯದಿಂ ಧಿಕ್ಕರಿಸಿ।
ಸ್ವಾಯತವ ಕೊಂಡು ಶಿವಭಾವ ಶಿವಯೋಗಿ।
ನ್ಯಾಯದಾ ಮೂರ್ತಿ- ಘನಮಠ ॥೪॥

ಜೀವ ಗುಣಗಳನಳಿದು। ಭಾವ ಶುದ್ಧತೆಯಿಂದ।
ದೇವ ಸಮನಾಗಿ ಜಗವ ತಾ ಚರಿಸಿದನು।
ಭಾವಜಾವೈರಿ- ಘನಮಠ ॥೫॥

## ಎಮ್ಮಿಗನೂರ ಜಡಿ ಶಿವಯೋಗಿ ವಚನ

ಹಸು ತೃಷೆಯು ತಾನಳಿದು। ಪಶುಪತಿಯು ಸಮನಾಗಿ।
ದಿಶೆಯು ಚರಿಸಿ ನೆಲಿಸಿ ಎಮ್ತಿಗನೂರ।
ನಸನು ಜಡಸಿದ್ಧ- ಘನಮಠ ॥೬॥

ಜಡಿಸಿದ್ಧ ಶಿವಯೋಗಿ। ಮೃಡಸಮನು ತಾನಾಗಿ।
ಪೊಡವಿಗ್ಬ ಸರಾಗಿ ಕಡೆಗೆ ಎಮ್ಮಿಗನೂರಿ।
ಗೊಡೆಯ ತಾನಾದ- ಘನಮಠ ॥೭॥

ಇಷ್ಟಲಿಂಗದ ನೆಲೆಯು। ಶ್ರೇಷ್ಠತೆಯ ತಾತೋರಿ।
ನಿಷ್ಠೆಯಿಂ ಬಂದ ಗುರು ಕುಮಾರೇಶನಿಗೆ।
ಧಿಟ್ಟ ಜಡಸಿದ್ದ- ಘನಮಠ ॥೮॥

ಅಂತಕಾರಿಯ ಭಕ್ತ ರಂತರಂಗವನರಿದು।
ನಿಂತನೆಮ್ಮಿಗನೂರ ಗ್ರಾಮದೊಳು ಸ್ಥಿರವಾಗಿ।
ಸಂತ ಜಡಿಸಿದ್ದ- ಘನಮಠ ॥೯॥

ಗುರು ಧ್ಯಾನ ಮಾಡುತ್ತ। ಚರಿಸಿ ಕರುನಾಡೆಲ್ಲ।
ಹರ ಭಕ್ತರಿರುವ ಗ್ರಾಮ ಎಮ್ಮಿಗನೂರ।
ಸ್ಥಿರ ಮಾಡಿಕೊಂಡ- ಘನಮಠ ॥೧೦॥

ಹರಿವ ಹಾವನು ಕೊಂಡು। ತರುಣಿ ಮಡಲೊಳಗಿಟ್ಟು
ಕರುಣಿಸಿದ ಶಿವಯೋಗಿ ಶಿರಿಯ ನಿರ್ಗತಿಕಳಿಗೆ।
ಹರನೆ ಜಡಿಸಿದ್ದ- ಘನಮಠ ॥೧೧॥

## ಶ್ರೀ ನೀರಲಕೇರಿ ಬಸವಲಿಂಗ ಶಿವಯೋಗಿ ವಚನ

ನೀರಲಕೇರಿ ಗ್ರಾಮ। ಸಾರಷಟಸ್ಥಲ ಜ್ಞಾನಿ।
ಮಾರಾರಿ ಕೃಪೆ ಪಡೆದ। ಘನ ಬಸವಲಿಂಗನಾ।
ಚಾರು ಪದ ನಮಿಪೆ- ಘನಮಠ ॥೧೨॥

ಶಕ್ತಿಯೋಪಾಸನೆಯ ನಿತ್ಯದೊಳು ತಾ ಮಾಡಿ।
ಭಕ್ತರಿಚ್ಛೆಯೊಳ ಐದ್ನಾಳಗ್ರಾಮದೊಳ।
ಮುಕ್ತಿ ಪದ ಪಡೆದ- ಘನಮಠ ||೧೩||

ಗಡಿಯು ನೀರಲ್ಕೆರಿಯು। ಒಡೆಯು ಪಂಚಾಕ್ಷರನ।
ಬಿಡದೆ ಭಜಿಸಿ ಗುರುಪಾದ ಗುರುಮುಟ್ಟಿ।
ದೃಢ ಬಸವಲಿಂಗ- ಘನಮಠ ||೧೪||

ಗುರುನಾಮದಂಕಿತದಿ। ಸರಳ ಪದಗಳ ರಚಿಸಿ।
ಮೆರೆದ ಗುರುವೀರ ಬಸವಲಿಂಗನ ಸ್ಥಿರವು।
ಮೆರವುವೈದ್ನಾಳು ಘನಮಠ ||೧೫||

ಕನಗಿರಿಯ ಗುರುವರನ। ಮನುಬೋಧಿಯಿಂ ಜಗದಿ।
ದಿನಕರ ಪ್ರಭೆಯಂತೆ ಬೆಳಗಿ ಕರ್ನಾಟಕದಿ।
ಘನಬಸವಲಿಂಗ- ಘನಮಠ ||೧೬||

## ಚೇಳ್ಗುರಿಕಿ ಯರ್ರಿತಾತನ ವಚನ

ಪಡೆದ ತಾಯ್ತಂದೆಗಳ ಜಠರಾಂಶ ಮೊದಲಲ್ಲಿ।
ಪೊಡವಿಯೋಳ್ ಚರಿಸಿ ಅಂತ್ಯಕ್ಕೆ ಚೇಳ್ಗುರಿಕಿ।
ಒಡಯರಿಸ್ವಾಮಿ- ಘನಮಠ ||೧೭||

ಹೇಯಮಯ ಸಂಸಾರ। ಮಾಯಯಿಂ ನಿರ್ಲಿಪ್ತ।
ಜೀಯ ಯರಿಸ್ವಾಮಿ ಜೀವನ ಸಮಾಧಿಯಿಂ।
ಕಾಯ ಪರಿಶುದ್ಧ- ಘನಮಠ ||೧೮||

ಗುರುವರನ ಶೋಧಿಸುತ। ತಿರುಗಿ ದೇಶಾಂತರವ।
ಮರುಗಿ ನಿನ್ನೆಡಗೆ ಬಂದ ತಿಕ್ಕಯ್ಯನನು।
ಗುರು ಚರಣ ಕಂಡ- ಘನಮಠ ||೧೯||

ಚಿತ್ತಜಾರಿಯ ಸಮನೆ। ನಿತ್ಯ ನಿನ್ನಯ ಧ್ಯಾನ।
ಗೊತ್ತುಗುರಿ ಇಲ್ಲದಲೆ ಶಿಕ್ಕಯ್ಯ ವಿಶ್ವದೊಳ್।
ಎತ್ತಲೋ ಪೋದ— ಘನಮಠ ॥೨೦॥

## ಬಳಗಾನೂರ ಮರಿಸ್ವಾಮಿ ವಚನ

ಚಲುವನವ ಧರೆಯೊಳಗೆ। ಬಳಗಾನೂರ್ಮರಿಸ್ವಾಮಿ।
ಇಳಿಯ ಪಾವನಗೊಳಿಸಿದನು ಹಳೆಕೋಟೆ।
ನಿಲಯ ಸುಕ್ಷೇತ್ರ— ಘನಮಠ ॥೨೧॥

ಶಕ್ತಿ ಶಾಂಭವಿಯೊಲಿಮೆ। ನಿತ್ಯ ತಾ ಪಡಕೊಂಡು।
ಕರ್ತೃ ತಾನಾಗಿ ಮೆರದನವ ಮರಿಸ್ವಾಮಿ।
ಕ್ಷೇತ್ರ ಹಳೆಕೋಟೆ— ಘನಮಠ ॥೨೨॥

ಉರುಗಾದ್ರಿ ಗುರುಪೀಠ ಉರುವಕೊಂಡಿಯ ಜಗದಿ।
ಗುರು ಕರಿಯ ವೃಷಭೇಂದ್ರ ವರದ ಶ್ರೀಮರಿಸ್ವಾಮಿ।
ಮೆರದ ವಿಶ್ವದೊಳ್— ಘನಮಠ ॥೨೩॥

ಕ್ಷಿರಪುರ ಗ್ರಾಮದೋಳು। ಮೇರುಮಠ ಮಹೇಶ।
ವೀರ ಸತಿಪತಿಗಳಿಗೆ ಕುವರ ನೀ ಮರಿಸ್ವಾಮಿ।
ಕಾರಣಿಕ ಪುರುಷ— ಘನಮಠ ॥೨೪॥

ಭಂದು ಶತ ಪುರದಿರುವ ಅಂದವಾದ ವಿರತ।
ಭಂದುರ ಮಠಾಧೀಶ। ಮರಿಸ್ವಾಮಿ ವಿಶ್ವಧಾ।
ತಂದೆ ನೀನಾಧಿ— ಘನಮಠ ॥೨೫॥

ಜಂಗಮ ಶ್ರೇಷ್ಠ ನೀ। ಲಿಂಗ ಪೂಜೆಯ ಒಲದಿ।
ಅಂಗ ಗುಣವಳಿದು ಮಂಗಲಾತ್ಮಕನೆನಿಸಿ।
ಕಂಗೊಳಿಸಿ ಮೆರದೀ— ಘನಮಠ ॥೨೬॥

## ಚಿತ್ರರಗಿ ವಿಜಯ ಮಾಹಂತೇಶ ವಚನ

ಚಿತ್ರರಗಿ ಪೀಠ ಸುವಿ। ರಕ್ತ ಮಹಿಮಾ ಶಾಲಿ।
ಸ್ತುತ್ತ್ಯ ಗುರು ವಿಜಯ ಮಹಾಂತ। ಶಿವಯೋಗಿ ಮನ।
ಸೋಕ್ತ ನಾ ಭಜಿಪೆ– ಘನಮಠ ॥ ೨೭॥

ಹಾನಗಲ್ಲ್ ಇಲಕಲ್ಲ ಜ್ಞಾನಿ ಶಿವಯೋಗಿಗಳು।
ನೂನವಾಗದಿಹ ಶಿವಯೋಗ ಮಂದಿರದ।
ತಾಣ ರಚಿಸಿದರು– ಘನಮಠ ॥ ೨೮॥

ಇಲಕಲ್ಲ ಸಂಸ್ಥಾನ। ಚಲುವ ಮಠವೊಳು ನಿತ್ಯ।
ನೆಲೆಸಿರುವ ಶ್ರೀ ನಿರಂಜನ ವಿಜಯ ಮಹಾಂತ।
ಚಲುವ ಸ್ವಾಮಿಗಳು– ಘನಮಠ ॥ ೨೯ ॥

ಗುರುಗಳ ಗದ್ದಿಗೆಯು। ಹಿರಿಯ ಹಳದ ತಟದಿ।
ಮೆರೆವುದಾ ಚಾರುತರ ಗೋಪುರದ ಹೊಂಗಳಸ।
ದರುಶನವು ಜಗಕೆ– ಘನಮಠ ॥ ೩೦॥

ಲಿಂಗದಾ ನೆಲೆಕಲೆಯು। ಅಂಗದೋಳ್ ತಾ ನರಿದು।
ಅಂಗದೊಳು ಲಿಂಗ। ಸಂಗೂಳಿಸಿ ಜಂಗಮನು।
ಲಿಂಗರೂಪಾದ– ಘನಮಠ ॥ ೩೧॥

## ಹಾನಗಲ್ಲ ಕುಮಾರ ಶಿವಯೋಗಿ ವಚನ

ವೀರ ವಿರತನು ಶಿವಾಚಾರ ಷಟಸ್ಥಲ ಜ್ಞಾನಿ।
ಮಾರಹರಮತವ ನಾಡಿನೊಳು ಬೆಳಗಿಸಿದ ಕು।
ಮಾರ ಶಿವಯೋಗಿ– ಘನಮಠ ॥ ೩೨॥

ಅಖಿಲ ಭಾರತದೊಳಗೆ। ಅಕಲಂಕ ಶಿವಮತದ।
ನಿಖಿಲ ತತ್ವವನು। ಸಾರಿದ ಮಹಾಸಭೆಯ।
ನಿಕರ ಸ್ಥಾಪಿಸಿದ– ಘನಮಠ ॥ ೩೩॥

ಜಂಗಮನ ಕೃಪೆಯಿಂದ। ಮಂಗಲಾತ್ಮಕ ವೆನಿಸಿ।
ಕಂಗೊಳಿಸುತಿಹುದು ಶಿವಯೋಗ ಮಂದಿರವು।
ಹಿಂಗದದು ಸ್ಥಿರವು- ಘನಮಠ ||೩೪||

ಜೆಡೆಸಿದ್ಧ ಶಿವಯೋಗಿ। ಎಡೆಗೆ ತಾಗಮಿಸುತ್ತ।
ಪಡದನವನಿಷ್ಠ ಲಿಂಗದಾ ನೆಲೆಕಲೆಯ।
ದೃಡ ಪ್ರೇಮದಿಂದ- ಘನಮಠ ||೩೫||

ಸಂಗೀತ ಶಾಸ್ತ್ರವನು। ಸಂಗೊಳಿಸಿ ಮಂದಿರದಿ।
ಕಂಗಳಿಲ್ಲದಿಹ ಜನ್ಮಾಂಧರಿಂಗೆ ಜ್ಞಾನ।
ಕಂಗಳಿಸುತ್ತವನು- ಘನಮಠ ||೩೬||

## ಧಾರವಾಡ ಮೃತ್ಯುಂಜಯ ವಚನ

ಧಾರವಾಡದಿ ಮೆರದ। ವೀರ ಮೃತ್ಯುಜಯನು।
ಕಾರಣಿಕ ಪುರುಷ ವೀರಶೈವೋನ್ನತೆಯ।
ಮೇರೆ ಮೀರಿಸಿದ- ಘನಮಠ ||೩೭||

ಕರುನಾಡಿನೊಳು ಚರಿಸಿ। ಗುರುಶ್ರೇಷ್ಠ ಹರಮಠದ।
ಹಿರಿಯ ತತ್ವವನು ಭೋಧಿಸಲು ಮೂರೂರ್ಗೆ।
ಚರರ ನೇಮಿಸಿದ- ಘನಮಠ ||೩೮||

ಶಿವತತ್ವ ತಿಳಿಯಲ್ಕೆ। ಶಿವಾನುಭವಸಂಸ್ಥೆ।
ಅವನಿಯೊಳಗವನು ಸ್ಥಾಪಿಸಿದ ಮೂರೂರ್ಗೆ।
ಶಿವರೂಪಿ ಚರನು- ಘನಮಠ ||೩೯||

ಜ್ಞಾನಿ ಮೃತ್ಯುಜಯನು। ದೀನದಲಿತರಿಂಗೆಲ್ಲ।
ಸ್ವಾನುಭವ ಭೋದೆ ಮಾಡಲ್ಕೆ ಶಾರದೆಯ।
ಸ್ಥಾನ ಮಠವಾಯ್ತು- ಘನಮಠ ||೪೦||

ಪರದೇಶದೊಳು ನಮ್ಮ। ಹರಮತದ ಸಂಸ್ಕೃತಿಯು
ಚಿರಕಾಲ ಬಾಳಿ ಬೆಳಗಲ್ಕೆ ಕರುನಾಡ।
ತರುಳರನು ಕಳಿಸಿ- ಘನಮಠ ॥೪೧॥

## ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ವಚನ

ಜಗದ ಗುರು ಹುಬ್ಬಳ್ಳಿ। ನಗರದೊಳು ಶಿವಮಠವ।
ಗಗನಕೇರಿಸಿದ ಗುರುವು ಗಂಗಾಧರನ ।
ಸೊಗಸಿನಿಂ ನಮಿಪೆ- ಘನಮಠ ॥೪೨॥

ಗುರುವು ಗಂಗಾಧರನ। ಪರದೇಶದೊಳು ನಮ್ಮ।
ಹರಮತದ ಹಿರಿಮೆ ಮೊಳಗಿಸಿದ ಜಗದ ಗುರುವು
ಸ್ಥಿರವು ಹುಬ್ಬಳ್ಳಿ- ಘನಮಠ ॥೪೩॥

ಗುರು ಕರುಣೆಯಿಂದೆಲ್ಲ। ತರತರದ ಕಾಲೇಜು।
ನಿರುಮಿಸಿದ ಮಹಿಮ ಜಗದ ಗುರು ತಾನಾದ।
ಚರ ಶ್ರೇಷ್ಠನವನು- ಘನಮಠ ॥೪೪॥

ವೀರಶೈವಾನ್ವಯದ। ಚಾರುತರ ತತ್ವವನು।
ದೂರದ ಪರಕೀಯ ನಾಡಿನೊಳು ಭೋದಿಸಿದ।
ಕಾರಣಿಕ ಪುರುಷ- ಘನಮಠ ॥೪೫॥

ಜ್ಞಾನ ವೀಧರನಾದ। ಮಾನ್ಯ ಮೂಲೋಕದೊಳು।
ಸ್ಥಾಣವೆ ಚರರೂಪದಿಂದಿಳೆಗೆ ಅವತರಿಸಿ।
ಜ್ಞಾನಿ ಜಗ ಗುರು- ಘನಮಠ ॥೪೬॥

## ಹಾಲಕೆರಿ ಅನ್ನದಾನಸ್ವಾಮಿ ವಚನ

ಅನ್ನದಾನಸ್ವಾಮಿ। ಕನ್ನಡದ ನಾಡಿನೊಳು।
ಮಾನ್ಯ ನಾಗಿಹನು ಹಾಲಕೆರೆಯೊಳಗಿರುವ।
ಶೂನ್ಯ ಪೀಠಸ್ಥ- ಘನಮಠ ॥೪೭॥

ಕನ್ನಡದ ನಾಡಿನೊಳು। ಅನ್ನದಾನೇಶ ಕೃಪೆ।
ಉನ್ನತೆಯ ಪೊಂದಿ ಮೆರೆವ ಕಾಲೇಜಿನ।
ಮುನ್ನಡೆಯು ಕಾಣೋ– ಘನಮಠ ||೪೮||

ಗಂಜಿಹಾಳ ಕನಸಾವಿ। ರಂಜಿಸುವ ಮಠದೊಡೆಯ।
ಕಂಜಾಕ್ಷ ಸಖನೇ ಜಂಗಮನ ರೂಪದಿಂ।
ನಂಜುಂಡ ಚರನು– ಘನಮಠ ||೪೯||

ಅನ್ನದಾನದ ಮಹಿಮೆ। ಕನ್ನಡದ ನಾಡಿನೊಳು।
ಉನ್ನತದ ಕಾಲೇಜು ಬಾಲಕರಿಗಗಣಿತ।
ಅನ್ನ ತಾನೀಯ್ವ–ಘನಮಠ. ||೫೦||

ಹತ್ತೆಂಟು ಗ್ರಾಮದೊಳು। ಚಿತ್ತದಿಂದಾಸೋಹ।
ನಿತ್ಯದಿಂ ನಡೆಸುತ್ತ ಚಿಕ್ಕಮಕ್ಕಳಿಗನ್ನ।
ತಪ್ಪದೆ ಕೊಡುವ– ಘನಮಠ ||೫೧||

## ಶ್ರೀ ಪಂಚಾಕ್ಷರಿ ಗವಾಯಿಗಳ ವಚನ

ಗುರುವು ಪಂಚಾಕ್ಷರಗೆ। ಹೊರನೇತ್ರ ವೊದಲಿಲ್ಲ।
ಚರಶ್ರೇಷ್ಠ ಗುರು ಕುಮಾರೇಶನ ಕೃಪೆ ಪಡೆದು।
ಧರಣಿಗೆ ಸರಾದ– ಘನಮಠ ||೫೨||

ಶಿವಯೋಗ ಮಂದಿರದಿ। ಶಿವಯೋಗಿ ಕರುಣೆಯಿಂ।
ದವನು ಗಾಯನ ವಿದ್ಯೆ ಪೂರ್ಣಗೊಳಿಸಿದ ಜಗದಿ।
ಅವನು ಹೆಸರಾದ– ಘನಮಠ ||೫೩||

ಹಮ್ಮು ಬಿಮ್ಮುಗಳಿಲ್ಲ। ಬ್ರಹ್ಮಚಾರಿಯು ತಾನು।
ನಿರ್ಮಲನು ಶಿವಯೋಗ ಮರ್ಮವನು ತಾನರಿತು।
ಬ್ರಹ್ಮತಾನಾದ– ಘನಮಠ ||೫೪||

ನಾದಬ್ರಹ್ಮನು ತಾನು। ಆದರದಿ ಅಂಧರಿಗೆ।
ಮೋದದಿಂ ಗಾನವಿದ್ಯೆ ಭೋದಿಸಿ ವಿಶ್ವ।
ಮೋದ ಘನಮೂರ್ತಿ- ಘನಮಠ ॥೫೫॥

ಸಂಗೀತ ಸಾಹಿತ್ಯದಿಂಗಿತವ ಪರಿಪೂರ್ಣ।
ಸಂಗೊಳಿಸಿದಾ ಪುಟ್ಟರಾಜನಿಗೆ ಮಂದಿರದಿ।
ಮಂಗಲ ಮೂರ್ತಿ- ಘನಮಠ ॥೫೬॥

## ಕೋಡಿಕೊಪ್ಪದ ಹುಚ್ಚೀರಪ್ಪ ವಚನ

ಕೋಡಿಕೊಪ್ಪದಿ ಜನಿಸಿ ನಾಡಿನೊಳ್ ಹೆಸರಾಗಿ।
ಮೂಢನೆನಿಸಿದನು ಮೆರೆದ ಹುಚ್ಚೀರಪ್ಪ।
ಗೀಡು ಯಾರಿಲ್ಲ- ಘನಮಠ ॥೫೭॥

ಹೌದಾದುದಲ್ಲೆನುತ। ಅಲ್ಲಾದುದ್ಹೌದೆನುತ।
ಅಲ್ಲ ಹೌದುಗಳ ಎಲ್ಲೆ ಮೀರಿದ ಮಹಿಮೆ।
ಬಲ್ಲ ಹುಚ್ಚೀರಪ್ಪ- ಘನಮಠ ॥೫೮॥

ಹಸು ತೃಷೆಯು ಅರುವಿಲ್ಲಾ। ವಿಷಯಾಸೆ ಮೊದಲಿಲ್ಲ।
ಪಶುಪತಿಯ ರೂಪದೊಳು ಚರಿಸಿ ಹುಚ್ಚೀರಪ್ಪ।
ವಸುಧಿಗೆಸರಾದ- ಘನಮಠ ॥೫೯॥

ಭವ ಮೂಲವಳಿದು ತಾ ಶಿವನಾಮ ನುಡಿಯುದಲೆ।
ಅವನಿಯೊಳಗೆಸರು ಪಡೆದ ಹುಚ್ಚೀರಪ್ಪ।
ಶಿವರೂಪಿಯವನು- ಘನಮಠ ॥೬೦॥

ಮನಸಿಜನ ಚೇಷ್ಟೆಯನು। ಮನದಿಂದ ದೂರ್ಮಾಡಿ।
ಘನತೆಯನು ಪಡೆದ ಚಿನುಮಯನು ವೀರಪ್ಪ।
ಜನಮನಕೆ ಹುಚ್ಚ- ಘನಮಠ ॥೬೧॥

## ಕೊಪ್ಪಳದ ಗವಿಸ್ವಾಮಿ ವಚನ

ಮುಪ್ಪುರಾಹರರೂಪಿ ಕೊಪ್ಪಳದ ಗವಿಸ್ವಾಮಿ।
ತಪ್ಪದಲೆ ಕಾಲೇಜು ನಡೆಯಿಸುವ ವಿಶ್ವಕ್ಕೆ।
ಒಪ್ಪಿಗೆಯು ಚರನು— ಘನಮಠ ॥೬೨॥

ಚಾರುತರ ಗವಿಮಠದಿ। ಭಾರಿ ದಾಸೋಹವನು।
ಕಾರಣಿಕನಾಗಿ ನಡೆಯಿಸುವ ಚರಶ್ರೇಷ್ಠ।
ವೀರನವ ವಿರತ— ಘನಮಠ ॥೬೩॥

ಲಿಂಗ ಪೂಜಾನಿಷ್ಠ। ಮಂಗಲಾತ್ಮಕ ಚರನು।
ಕಂಗೊಳಿಪ ಕರುನಾಡ ಸೀಮೆಯೊಳ್ ಕೊಪ್ಪಳದ।
ಜಂಗಮ ಶ್ರೇಷ್ಠ— ಘನಮಠ ॥೬೪॥

ಅಂತಕಾರಿಯ ರೂಪ। ಶಾಂತವೀರಸ್ವಾಮಿ।
ಪ್ರಾಂತ ಕನ್ನಡದ ಸೀಮೆ ಕೊಪ್ಪಳ ಮಠನೀತಾಂತ।
ಶೋಭಿಪನು— ಘನಮಠ ॥೬೫॥

ಭವರಹಿತ ಶಿವರೂಪಿ। ಶಿವಯೋಗಿಯಾಗಿ ತಾ।
ಅವಿತರವು ಮೆರೆವ। ಶಾಂತವೀರಸ್ವಾಮಿ।
ಗವಿಮಠಕೆ ಒಡೆಯ— ಘನಮಠ ॥೬೬॥

ಕಾಲಾರಿ ರೂಪ ಚರ ಸಾಲಾರೆಜಂಗನಾ ಮೂಲ
ಮಹರೋಗವಳಿದ ಮಹಿಮಾ ಪುರುಷ।
ಮೇಲೆನಿಪ ವಿರತ— ಘನಮಠ ॥೬೭॥

## ತಾಳಿಕೋಟಿ ಖಾಸ್ಗತೇಶ ವಚನ

ಈಶ ಜಂಗಮನಾಗಿ। ಖಾಸ್ಗತೇಶನ ನಿತ್ಯ।
ವಾಸ ಸುಂದರದ ತಾಳಿಕೋಟಿಯ ಬಿಡದೆ।
ಪೋಷಿಸುವ ಸ್ವಾಮಿ— ಘನಮಠ ॥೬೮॥

ಅಂತಕಾಂತಕ ತತ್ವ। ನಂತರಂಗದೊಳರಿದು।
ಭ್ರಾಂತಿಯಿಂ ದೂರ ಚರಿಸಿ ಮಂಗಲಪುರ ನಿ।
ಶ್ಚಿಂತ ನಿಜವಿರತ- ಘನಮಠ ॥೬೯॥

ಬಾಲ್ಯದೊಳಗಗಣಿತ। ಲೀಲೆಗಳ ತೋರುತ್ತ।
ಬಾಲ ರವಿಯಂತೆ ಶೋಭಿಸುವ ಘನಮಹಿಮ।
ಮೂಲ ಭವನಾಶ- ಘನಮಠ ॥೭೦॥

ಅಂಗದೊಳಗಮಲೈಕ್ಯ ಲಿಂಗವನು ಲಯಗೊಳಿಸಿ।
ಅಂಗ ಗುಣವಳಿದು ಲಿಂಗವೆ ತಾನಾದ।
ಜಂಗಮ ಶ್ರೇಷ್ಠ- ಘನಮಠ ॥೭೧॥

## ಅಥಣಿಯ ಮುರುಗೇಂದ್ರ ಸ್ವಾಮಿಯ ವಚನ

ಅಥಣಿ ಗ್ರಾಮ ದೊಳಿರುವ। ಪ್ರಥಿತ ಜಂಗಮ ಸತ್ಯ।
ಪಥ ಹಿಡಿದು ನಡೆದಾ ಮುರುಘೇಂದ್ರ ಚರವರನ।
ಸತತ ನಾ ಭಜಿಪೆ- ಘನಮಠ ॥೭೨॥

ಗಚ್ಚಿನಾ ಮಠದೊಡೆಯ। ನೆಚ್ಚಿನಾವ ಮೂರ್ತಿಚರ।
ನುಚ್ಚ ನಾಡಿಯೊಳು ಮೆರೆದ ಮಹಿಮಾಶಾಲಿ।
ಮೆಚ್ಚಿಗೆಯ ಸ್ವಾಮಿ- ಘನಮಠ ॥೭೩॥

ನಿತ್ಯ ನಿರವಯನು ಘನ ವೆತ್ತ ಮುರುಘೇಂದ್ರ ಗುರು।
ಪೋತ್ತಮನು ಕನ್ನಡದ ನಾಡಿನಾ ಜನಮನಕೆ।
ಸ್ತುತ್ಯನವ ನಿತ್ಯ- ಘನಮಠ ॥೭೪॥

ಕ್ರೂರ ಮೃಗ ವ್ಯಾಘ್ರ ವಿಷ। ಘೋರ ಸರ್ಪಾದಿಗಳು।
ಮಾರಮರ್ಧನ ರೂಪಿ ಜಂಗಮನ ಕರುಣೆಯಿಂ।
ದೂರುವವು ಕುಗುಣ- ಘನಮಠ ॥೭೫॥

ಹೊನ್ನೆಣ್ಣು ಮಣ್ಣುಗಳ| ಕಣ್ಣಿನಿಂ ನೋಡನವ|
ಚಿನ್ಮಯನು ಇಂದ್ರಿಯಂಗಳ ರುಚಿಯನಳಿದ|
ಮುಕ್ಕಣ್ಣ ರೂಪನವ- ಘನಮಠ ||೭೬||

## ಚಿತ್ರದುರ್ಗ ಜಗದ್ಗುರು ಮುರುಘರಾಜೇಂದ್ರ ವಚನ

ಮುರುಘರಾಜೇಂದ್ರ ಜಗ| ದ್ಗುರು ಚಿತ್ರಕಲ್ಲು ಸುಂ|
ದರ ಶೂನ್ಯ ಪೀಠದೊಳ್ ರಾಜಿಸುವ ಚರವರನ|
ನಿಡುತ ನಾ ಭಜಿಪೆ- ಘನಮಠ ||೭೭||

ಕರುನಾಡಿನೊಳು ಮೆರವ| ಹಿರಿಯ ಚಿತ್ರಕಲ್‌ದುರ್ಗ|
ಪೊರದಿರುವ ಸುಂದರದ ಸೂನ್ಯ ಸಿಂಹಾಸನದಿ|
ಚರವರನು ಮೆರೆವ- ಘನಮಠ ||೭೮||

ಮಲ್ಲಿಕಾರ್ಜುನ ವಿರತ| ರಲ್ಲಿ ಶೋಭಿಸುತಿಹರು|
ಎಲ್ಲ ಕನ್ನಡದ ನಾಡಗುರು ಪೀಠದೊಳು|
ಬಲ್ಲಿದರು ಅವರು- ಘನಮಠ ||೭೯||

ಈಶರೂಪೀ ಚರರ| ಪೋಷಣೆಯ ಕೃಪೆಯಿಂದ|
ಕಾಶಿ ಬೆಂಗ್ಳೂರ ಗ್ರಾಮದೊಳು ನಡೆವ ಅವಿ|
ನಾಶ ದಾಸೋಹ- ಘನಮಠ ||೮೦||

ಮೃಡರೂಪಿ ಚರರಿಂದ ನಡೆವ ದಾಸೋಹಂಗಳು|
ಬಡವ ಬಲ್ಲಿದರು ವಿದ್ಯಾರ್ಥಿಗಳಿಗನ್ನ|
ಕೊಡುತಿಹವು ನಿರತ- ಘನಮಠ ||೮೧||

## ಬಳ್ಳಾರಿ ಸಕ್ಕರೆ ಕರಡೆಪ್ಪನವರ ವಚನ

ಬಳ್ಳಾರಿ ಗ್ರಾಮದೊಳು| ಸಲ್ಲಲಿತ ಸಂಸ್ಕೃತವ|
ನೆಲ್ಲ ಜಂಗಮರ ಮಕ್ಕಳಿಗೆ ಬೋಧಿಸಿದ|
ನೊಳ್ಳೆ ಶಿವಶರಣ- ಘನಮಠ ||೮೨||

ಸಕ್ಕರಿ ಕರಡೆಪ್ಪ। ಮುಕ್ಕಣ್ಣನೊಲಿಮೆಯಲಿ।
ಮಕ್ಕಳಿಗೆ ಗಿರ್ವಾಣ ವಿಧ್ಯ ಭೋದಿಸಿ ಪಡೆದ।
ಶಕ್ಕ ಶಿವಪದವ– ಘನಮಠ ||೮೩||

ಗುರುಲಿಂಗ ಜಂಗಮರ। ನರಿದು ಸೇವಿಸಿ ಶರಣ।
ಹರ ಪದವಿ ಪಡೆದ ಸಕ್ಕರಿ ಕರಡೆಪ್ಪ।
ಧರೆಯೊಳಿಸರಾದ– ಘನಮಠ ||೮೪||

ಪಿಡಿದ ನೇಮುವನೆಂದು। ಬಿಡದಂತೆ ನಡೆಸಿ।
ಭವ ತೊಡರಿಗಂಜದೆಲೆ ಕಡೆತನಕ ನಡೆಯಿಸುತ।
ಪಡೆದ ಶಿವಪಥವ– ಘನಮಠ ||೮೫||

ಮನಸಿಜಾರಿಯ ನೆನಹು। ಕನಸು ಮನಸುಗಳಲ್ಲಿ।
ದಿನ ನಿತ್ಯ ಕಾರ್ಯದೊಳ್। ಸ್ಥಿರವಾಗಲಾ ನರನು।
ಘನ ಶರಣ ಜಗದಿ– ಘನಮಠ ||೮೬||

ಮಡದಿಯಾ ಶಾಂತಗುಣ। ಹುಡುಗ ಬೆನ್ನೇರಲ್ಕೆ।
ಗಡಬಡಿಸದೆಂದೂ ಬಿಡದಿರಲು ಶಾಂತತೆಯ।
ಮೃಡ ಶರಣೆ ಅವಳು– ಘನಮಠ ||೮೭||

**ಸೊಲ್ಲಾಪುರದ ವಾರದ ಮಲ್ಲಪ್ಪನವರ ವಚನ**

ವೀರಶೈವಾನ್ವಯದ। ಸಾರ ಗ್ರಥಗಳೆಲ್ಲಾ।
ವಾರದ ಮಲ್ಲಪ್ಪನವರ। ಸಾಹಸದಿಂದ। ತೋ
ರುವವು ಜಗದಿ– ಘನಮಠ ||೮೮||

ಗ್ರಂಥ ಮುದ್ರಣ ಮಾಡಿ।ದಂಥಕರುಣಾಶಾಲಿ।
ಸಂತ ಸೊನ್ನಲಪುರದ ವಾರದ ಮಲ್ಲಪ್ಪ।
ನಂತವರು ವಿರಳ– ಘನಮಠ ||೮೯||

ಅಂದಿಗವರಿಂದಾದ| ಸುಂದರನ ಸಂಸ್ಕೃತದ|
ಅಂದವಾಗಿರುವ ಪಾಠಶಾಲೆಯು ಜಗದಿ| ಇಂದಿಗೂ
ಸ್ಥಿರವು- ಘನಮಠ ||೯೦||

ಶಿವಮಠದ ಸೇವೆಯನು| ಅವಿರತವು ಮಾಡುತ್ತ|
ಅವನಿಯೊಳಿಗ್ಗೆಸರು ಸ್ಥಿರವು ಮಲ್ಲಪ್ಪನವ|
ಶಿವಶರಣ ಸತ್ಯ- ಘನಮಠ ||೯೧||

ಅವರು ಮಾಡಿದ ಕಾರ್ಯ| ಅವನಿಯೊಳಗೆಂದು|
ಅವಿನಾಶವಾಗಿ ಮೆರೆಯುವವು ವಿಶ್ವದೊಳ್|
ಶಿವ ಕಾರ್ಯ ಶ್ರೇಷ್ಠ- ಘನಮಠ ||೯೨||

### ಶಿರಸಂಗಿಯ ಲಿಂಗರಾಜರ ವಚನ

ಶಿರಸಂಗಿ ಗ್ರಾಮದೊಳು| ಅರಸು ಮನೆತನ|
ದ್ಹುಟ್ಟಿ ಮೆರದ ವಿಶ್ವದೊಳು ಲಿಂಗರಾಜನು ಕೊನೆಗೆ|
ಹರಿಶರಣನಾದ- ಘನಮಠ ||೯೩||

ಹಿರಿಯ ಸಂಸ್ಥಾನದ ಧೊರೆಯು ತಾನಾದರೂ|
ಹರಮಠಕೆ ತನ್ನ| ಶಿರಿತವನವನರ್ಪಿಸಿ|
ಸ್ಥಿರ ಮುಕ್ತಿ ಪಡೆದ- ಘನಮಠ ||೯೪||

ಲಿಂಗರಾಜರ ನಾಮ| ಕಂಗೊಳಿಪ ಕಾಲೇಜು|
ಹಿಂಗದೆಂದೆಂದೂ ಬೆಳಗಾವಿ ಗ್ರಾಮದೊಳು|
ಮಂಗಲಾತ್ಮಕವು- ಘನಮಠ ||೯೫||

ಶಿರಸಂಗಿ ಗ್ರಾಮದಾ| ಧೊರೆಗಳಾ ಶುಭನಾಮ|
ಸ್ಥಿರವಾಗಿ ನಾಡಿನೊಳು| ಮೆರೆವದೆಂದೆಂದಿಗೂ|
ಕರುನಾಡ ಹಿರಿಮೆ- ಘನಮಠ ||೯೬||

ಮೆರೆವುದಾಂಗ್ಲರ ವಿದ್ಯೆ। ಶಿರಸಂಗಿ ಧೊರೆಕರುಣೆ।
ಕರು ನಾಡಿನೆಲ್ಲಾ ದೀನ ದಲಿತರ ಸೇವೆ।
ಅರಸು ತಾ ಗೈದ— ಘನಮಠ ॥೯೭॥

ಕನ್ನಡಮ್ಮನ ಕಂದ। ಕನ್ನಡಮ್ಮನ ಸೇವೆ।
ಮುನ್ನ ತಾ ಮಾಡಿ ಮುನ್ನಡೆದ ಶಿವಲೋಕ।
ವನ್ನು ತಾ ಪಡೆದ— ಘನಮಠ ॥೯೮॥

## ನಾಲತ್ವಾಡ ವೀರೇಶ ಶರಣರ ವಚನ

ಮೂರು ನಾಲತ್ವಾಡ। ವೀರೇಶ ಶರಣನವ।
ಮಾರಿ ಜಾತ್ರೆಯಲಿ ಹಿಂಸೆಯನು ನೋಡದಲೆ।
ಮೂರು ತಾ ತೊರೆದ— ಘನಮಠ ॥೯೯॥

ಹೇಯಮಾಯ ಸಂಸಾರ। ದಾಯತವ ತಿಳಿಯುತ್ತ।
ಕಾಯಕವ ಕೊಂಡು ಕಾಯದಿಂ ಶಿವಶರಣ।
ಜೀಯ ವೀರೇಶ— ಘನಮಠ ॥೧೦೦॥

ವೀರೇಶರಾ ತನುಜೆ। ಮಾರನಂ ಗೆಲಿದಿಹಳು।
ವೀರ ಶಿವಶರಣೆ ರುದ್ರಮ್ಮ ನಾಡಿನೊಳು।
ಗೌರಿಯಾಗಿಹಳು— ಘನಮಠ ॥೧೦೧॥

## ಕರಡಕಲ್ಲ್ ಕಾಳಿಬೆಳಗುಂದಿ ನಾವದಗಿ ಹಿರೇಮಠದ ಶಿವಜಾತ ಒಡೆಯರ ವಚನ

ಹತ್ತನೆಯ ಶತಮಾನ। ಚಿತ್ತ ಜಾರಿಯ ತತ್ವ।
ಬಿತ್ತರಿಸಲೆಂದು ಧರೆಗಿಳಿದು ಗುರುವು ಸರ್ವೋತ್ತಮನು।
ಮಹಿಮ— ಘನಮಠ ॥೧೦೨॥

ಕರಡಕಲ್ಲ ಗ್ರಾಮದೊಳು। ಮೆರವ ಬಿಲ್ಲಮ ರಾಜ।
ಧೊರೆಗೆ ಗುರುವಾಗಿ ಮೆರೆದ ಮಹಿಮಾ ಪುರುಷ।
ಗುರುವು ಶಿವಜಾತ— ಘನಮಠ ॥೧೦೩॥

ಕುಣಿಯ ಸೋಮೇಶ್ವರನ| ಘನಪುಣ್ಯಸ್ಥಾನದೊಳ್|
ಎಣಿಕೆ ಇಲ್ಲದ ವರುಷ ತಪಗೈದ ಶಿವಜಾತ|
ನೆನೆಯಲ್ಕೆ ಮುಕ್ತಿ- ಘನಮಠ ||೧೦೪||

ನಾವದಗಿ ಗುರುವಂಶ| ಶಿವಜಾತರಿಂ ಮುಂದೆ|
ಭುವಿಯೊಳಗೆ ಬಂದ ಗುರು ಲಿಂಗ ಆಚಾರ್ಯ|
ಅವನಿಯೊಳು ಜನಿಸಿ- ಘನಮಠ ||೧೦೫||

ಆಂದೋಲಿ ಗ್ರಾಮದೊಳು ಹಿಂದೆ ಮೆರೆದಿಹ ಮಹಿಮ|
ತಂದೆ ಗುರುಲಿಂಗ ಮಹಿಮರಿಂ ಶಿವತತ್ವ|
ಹೊಂದಿ ತಾ ಮೆರೆದ- ಘನಮಠ ||೧೦೬||

ಕಾಳ ಬೆಳಗುಂದಿಯಾ| ಮೇಲೆ ತೋಪಿನಕಟ್ಟೆ|
ಮೇಲಾದ ಹಿರಿಮಠದ ನಾವದಗಿ ಗುರುವಂಶ|
ಬಾಳವದು ಜಗದಿ- ಘನಮಠ ||೧೦೭||

## ಶ್ರೀ ಅಡವಿ ಅಮರೇಶ್ವರ ಕ್ಷೇತ್ರ ವಚನ

ಅಡವಿ ಅಮರೇಶ್ವರನು| ಪೊಡವಿಯೊಳು ನೆಲೆಸಿರುವ|
ಗಡಿನಾಡ ಕನ್ನಡ ಮಾನ್ವಿ ತಾಲೂಕಿನೊಳ್|
ಸಡಗರದ ಕ್ಷೇತ್ರ- ಘನಮಠ ||೧೦೮||

ಪರಮ ಗುರು ಚನ್ನಬಸವ| ವರ ನಿರಂಜನಸ್ವಾಮಿ|
ಕರದಿಂದ ಸ್ಥಾಪಿಸಿದ| ಅಡವಿ ಅಮರೇಶ್ವರನ|
ಸ್ಥಿರವು ಸುಕ್ಷೇತ್ರ- ಘನಮಠ ||೧೦೯||

ಚನ್ನಬಸವಸ್ವಾಮಿ| ಉನ್ನತ ಕ್ಷೇತ್ರದೊಳು|
ಸನ್ನುತನು ಸ್ಥಾಪಿಸಿದ ಸಂಸ್ಕೃತದ ಶಾಲೆಯದು|
ಮುನ್ನ ಶೋಭಿಪುದು- ಘನಮಠ ||೧೧೦||

ಬಂದ ಭಕ್ತರಿಗೆಲ್ಲ ಸುಂದರದ ದಾಸೋಹ।
ಎಂದೆಂದಿಗೂ ಸ್ಥಿರವು ಚನ್ನ ಬಸವ ಸ್ವಾಮಿ।
ಯಿಂದಕಡೆತನಕ– ಘನಮಠ ॥೧೧೧॥

ನಮನಗುರು ವೃಂದಕ್ಕೆ। ನಮನ ಚರಗಣಕೆಲ್ಲ।
ನಮನ ಶಿವಲಿಂಗ ಧರಿಸಿರುವ ಶರಣರಿಗೆ।
ನಮನ ನಾಲ್ಕನೆ ಪಥಕೆ– ಘನಮಠ ॥೧೧೨॥

## ಗುರುಬಸವಾರ್ಯರು ಮಠಮಾಸ್ತರ ವಚನ

ಹುನಗುಂದ ಗ್ರಾಮದೊಳು। ಗಣವರರ ಮಠದಲ್ಲಿ।
ಜನಿಸಿ ಗುರು ಬಸವಾರ್ಯ। ನೆಂಬ ಮಾಹೇಶ್ವರನು।
ಘನಮಠರ ಕರುಣೆ– ಘನಮಠ ॥೧೧೩॥

ತನ್ನ ಜೀವನವೆಲ್ಲ। ಕನ್ನಡದ ಸುವಿದ್ಯೆಯನು।
ಚನ್ನ ಮಕ್ಕಳಿಗೆ ಕಲಿಯಲ್ಕೆ ಕಾಲೇಜು ಮುನ್ನ।
ಸ್ಥಾಪಿಸಿದ– ಘನಮಠ ॥೧೧೪॥

ಬ್ರಹ್ಮಚಾರಿಯು ಅವನು। ನಿರ್ಮಲನು ನಿತ್ಯದೊಳು।
ಹಮ್ಮು ಬಿಮ್ಮುಗಳಿಲ್ಲ। ದಾ ಸದಾಚಾರ್ಯ ಅವ।
ಬ್ರಹ್ಮನೇ ಆದ– ಘನಮಠ ॥೧೧೫॥

## ನಾಗರಾಳ ದೊಡ್ಡಪ್ಪ ಶರಣರ ವಚನ

ಹುನಗುಂದ ಗ್ರಾಮದೊಳು। ವಿನಯಗುಣ ಸಂಪನ್ನ।
ಘನಮಠರ ಕರುಣೆ ಪಡೆದವನು। ಜೀವನದಿ ಧನಿಕ।
ತಾನಾಗಿ– ಘನಮಠ ॥೧೧೬॥

ಎಣಿಕೆ ಇಲ್ಲದ ಧನವ। ಗಣನೆ ಮಾಡದೆ ತಾನು।
ವಿನಯದಿಂದವನು। ವಿದ್ಯೆ ಖಾತೆಗೆ ಸಲಿಸಿ।
ಜನತೆಯೊಳು ಶ್ರೇಷ್ಠ– ಘನಮಠ ॥೧೧೭॥

ನಾಗರಾಳ ಮನೆತನವು। ಯೋಗಿ ಘನಮಠ ಕರುಣೆ।
ಬಾಗಿ ವಿನಯದೊಳು। ಪಡೆಯುತ್ತಲಿಂದಿಗೂ।
ಭೋಗಿ ತ್ಯಾಗಿಗಳು– ಘನಮಠ ॥೧೧೮॥

— ಇತಿ ೧೧೮ ನೇ ವಚನಕ್ಕೆ ಚತುರ್ಥ ಪಥ ಮಂಗಲಂ —

## .... ಪಂಚಮ ಪಥವು ....

### ವಳಬಳ್ಳಾರಿ ಶ್ರೀ ಮ. ನಿ. ಪ್ರ. ಚನ್ನಬಸವ ಸ್ವಾಮಿಗಳ ವಚನ

ಮೆರೆವ ಒಳಬಳ್ಳಾರಿ। ಗುರು ನಿರಂಜನ ಪೀಠ।
ಪರಮ ಗುರು ಚನಬಸವಸ್ವಾಮಿ ಭಕ್ತರ ಪ್ರೇಮಿ।
ಧರೆಯ ರಕ್ಷಿಪನು– ಘನಮಠ ॥ ॥

ಬಳ್ಳಾರಿ ಗ್ರಾಮದಾ। ಒಳ್ಳೆ ಚರಜಂಗಮನು।
ಬಲ್ಲಿದನು ಚನ್ನಬಸವ ಸ್ವಾಮಿಯು ಕೃಪೆಯು।
ಎಲ್ಲರಿಗೆ ಬೇಕು– ಘನಮಠ ॥೨॥

ಅಂಗ ಗುಣಗಳನಳಿದ। ಲಿಂಗಪೂಜಾ ನಿರತ।
ಕಂಗೊಳಿಪ ಗುರುವು ವಳಬಳ್ಳಾರಿ ಪೀಠವದು।
ಮಂಗಲವು ಜನಕೆ– ಘನಮಠ ॥೩॥

ವಿರತಿಯ ಘನತತ್ವ। ನಗಿತ ಜಂಗಮ ಶ್ರೇಷ್ಠ।
ಸಿರುತ ಘನಕರುಣಿ ದೀನದಲಿತರ ಸೇವೆ।
ಚರನು ತಾಗೈವ- ಘನಮಠ ॥೪॥

ಅಡವಿಯೊಳಗಮರೇಶ। ಮೃಡಲಿಂಗ ಸ್ಥಾಪಿಸಿ।
ಅಡವಿ ಅಮರೇಶ್ವರ ಕ್ಷೇತ್ರ ಸ್ಥಾಪನೆ ಗೈದ।
ಮೃಡ ರೂಪಿ ಚರನು- ಘನಮಠ ॥೫॥

ಗೊರಬಾಳ ಗ್ರಾಮದಾ। ಹರ ಭಕ್ತರೆಲ್ಲರೂ।
ಚರನಾಜ್ಞೆಯಿಂದ ಕಲಬುರ್ಗಿ ಮಹಮಹಿಮ।
ಶರಣನಾ ಸ್ಥಿರವು- ಘನಮಠ ॥೬॥

ಬಂಥನಾಳ ಶ್ರೀ ಮ. ನಿ. ಪ್ರ. ಸಂಗನಬಸವ ಶಿವಯೋಗಿಗಳ ವೆಚನ

ಭಂಥನಾಳೇಶ ಘನವಂತ ಸಂಗನನಬಸವ।
ರಂಥ ಶಿವಯೋಗಿಗಳು ಪುಟ್ಟುವರೆ ಮಹಿಮಾ।
ವಂತ ಶಿವಸಮರು- ಘನಮಠ ॥೭॥

ಶಿವಯೋಗಿ ಪುಂಗವನು। ಅವನಿಯೊಳಗಾನಂತ।
ಶಿವಮಠದ ಶ್ರೇಷ್ಠ ಕಾರ್ಯಗಳ ತಾ ಮಾಡಿ।
ಅವನಿಗ್ಗೆ ಸರಾದ- ಘನಮಠ ॥೮॥

ಏಳು ನೂರೆಪ್ಪತ್ತು। ಮೇಲಾದ ಚರಪೂಜೆ।
ಬಾಳ ಹರುಷದೊಳು ಪೂರೈಸಿ ವಿಶ್ವದೊಳು।
ಮೇಲಾದ ವಿರತ- ಘನಮಠ ॥೯॥

ಲಕ್ಷ ತೊಂಭತ್ತಾರು। ಸಾವಿರದ ಗಣ ಪೂಜೆ।
ಲಕ್ಷದಿಂ ಮಾಡಿ ಕ್ಷಿತಿಯ ಪಾವನ ಗೈದ।
ಪ್ರತ್ಯಕ್ಷ ಸಮಚರನು- ಘನಮಠ ॥೧೦॥

ಐದು ಕೋಟಿಯು ಮಂತ್ರ। ಗೈದು ಜಪ ಕೃಷ್ಣೆಯೊಳು।
ಆದರದಿ ವಿಶ್ವಕ್ಕೆ ಶಾಂತಿಯನು ಸ್ಥಾಪಿಸಿದ।
ಮೋದ ಘನಮೂರ್ತಿ– ಘನಮಠ ॥೧೧॥

## ತುಂಬದ ಗುರುಶಿದ್ಧಶಿವಯೋಗಿ ವಚನ

ತುಂಬ ಗ್ರಾಮದೊಳಿರುವ। ಸಂಭ್ರಮದ ಹಿರಿಮಠದ।
ಶಂಭು ಸಮನಾದ ಗುರುಸಿದ್ಧ ಶಿವಯೋಗಿ।
ನಂಬಿ ನಾ ಭಜಿಪೆ– ಘನಮಠ ॥೧೨॥

ಗುರುಸಿದ್ಧ ಶಿವಯೋಗಿ। ಚರಿಸಿ ಕರುನಾಡೆಲ್ಲ।
ಪರಮತದ ಪಂಡಿತರ ಖಂಡಿಸುತ ಶಿವಮತದ ಹಿರಿಮೆ।
ತಾ ಪಡೆದ– ಘನಮಠ ॥೧೩॥

ಹರಿಹರ ಗ್ರಾಮದೊಳು। ಹರಿವೈಷ್ಣವಾದಿಗಳ
ಹರಮತೋನ್ನತ ಶಾಸ್ತ್ರ ತರ್ಕದಿಂ ತಾ ಗದ್ದು।
ಧರೆಯೊಳಗೆ ಸಾರ್ಥ– ಘನಮಠ ॥೧೪॥

ಮರಳ ವೇದಾಂತವನು ಧರೆಯೊಳಗೆ ಭೋದಿಸುತ।
ಮೆರೆದ ಸಿದ್ಧಾರೂಢರೊಡನೆ ಶಿವಮತ ತತ್ವ।
ಪರಿಯ ಭೋದಿಸಿದ– ಘನಮಠ ॥೧೫॥

ವೇದಾಂತ ಶಿವ ತತ್ವ। ಆದರದಿ ಭೋದಿಸುತ।
ಈ ಧರೆಯೆನೆಲ್ಲ ಚರಿಸಿ ತುಂಬದ ಗ್ರಾಮ।
ಕಾದಾರ ಮೂರ್ತಿ– ಘನಮಠ ॥೧೬॥

## ಗುಡದೂರ ದೊಡ್ಡಬಸವೇಶ ವಚನ

ಒಡೆಯ ಗುರು ದೊಡ್ಡಬಸವ। ಗುಡದೂರ ಸ್ಥಿರವಾಸ।
ಪೊಡವಿಯೊಳಗ್ಗೆಸರು ಪಡೆದ ಮಹಿಮ ಪುರುಷ।
ಬಿಡದೆ ನಾ ಭಜಿಗೆ– ಘನಮಠ ॥೧೭॥

ಶರಣ ತತ್ವವ ಧರೆಯ। ಮರುಳರಿಗೆ ಭೋದಿಸುತ।
ಗುರುರೂಪ ಕೊಟ್ಟ ಗುರುವು ಶ್ರೀದೊಡ್ಡ ಬಸವ।
ಚರಿತೆಯದು ಘನವು- ಘನಮಠ ॥೧೮॥

ಬಾಲಪ್ಪನಾಮದಾ। ಹಾಲುಮತದವನೊಬ್ಬ ಕಾ।
ಲಾರಿರೂಪ ದೊಡ್ಡವ ಗುರು ಕರುಣೆ। ಬಾಲಪ್ಪ
ಶರಣ- ಘನಮಠ ॥೧೯॥

ಶಿವನೆ ಜಂಗಮ ರೂಪ। ದವನಿಯೊಳಗವತರಿಸಿ।
ಭುವನಕಾನಂತ ಲೀಲೆಗಳ ತೋರಿದನು।
ಶಿವನೆ ದೊಡ್ಬಸವ- ಘನಮಠ ॥೨೦॥

ಕುಲದ ಮಲಿನತೆಯಳಿದ। ಚಲುವು ಶ್ರೀ ದೊಡ್ಬಸವ।
ನಿಲಯ ಗುಡದೂರ ಶಾಶ್ವತವು ಶಿವಯೋಗಿ।
ಗೆಲವು ಭಕ್ತರಿಗೆ- ಘನಮಠ ॥೨೧॥

**ಸಜ್ಜಲಗುಡ್ಡದ ಶರಣಮ್ಮನವರ ವಚನ**

ಕಂಬ್ಳಿಹಾಳ ಗ್ರಾಮದೊಳು। ಸಾಂಬನೊಲಿಮೆಯ ಪಡೆದು।
ಸಂಭ್ರಮದಿ ಶೋಭಿಸುವ ಸಜ್ಜಲಗುಡ್ಡದಾ।
ಶಂಭು ಶಿವಶರಣೆ- ಘನಮಠ ॥೨೨॥

ಲಿಂಗ ಪೂಜಾಬಲದಿ। ಅಂಗಗುಣಗಳ ಕಳೆದು।
ಕಂಗೊಳಿಸುತಿಹಳು ಸರ್ವಮಂಗಳೆಯಂತೆ।
ಮಂಗಲಳು ನಿತ್ಯ- ಘನಮಠ ॥೨೩॥

ಶರಣರಿರುವಿಕೆಯಿಂದ। ನಿರುತ ಶಿವಕಾರ್ಯದಾ।
ಚರಣೆ ನಡೆಯುವವು। ಪುಣ್ಯ ಕ್ಷೇತ್ರದ ನೋಟ।
ಹರನ ಸಭೆಯಂತೆ- ಘನಮಠ ॥೨೪॥

ಬರುವ ಭಕ್ತರಿಗೆಲ್ಲಾ। ಹರಸಿ ಆಶೀರ್ವದಿಸಿ।
ಕರುಣಿ ತಾನರ್ಪಿಸುವ ದಿವ್ಯ ಪ್ರಸಾದದುಪ। ಚ
ರಿಸುವಳು ಶರಣೆ- ಘನಮಠ ॥೨೫॥

ಗುರಲಿಂಗ ಜಂಗಮರ। ನರಿದು ಸೇವಿಪ ನಿತ್ಯ।
ಹರ ಶರಣರಾಚರಿಪ ದಿವ್ಯ ಪೂಜಾ ಮಹಿಮೆ।
ಪರಮ ಸುಕ್ಷೇತ್ರ- ಘನಮಠ ॥೨೬॥

## ಕುಷ್ಟಗಿಯ ಶಿವಶರಣೆ ರುದ್ರಮ್ಮನ ವಚನ

ಮುದ್ದಾನಿ ಮಠದಮ್ಮ। ಶುದ್ಧ ಚಾರಿತ್ರಕಳು।
ಬದ್ದಳಾಗಿಹಳು ಪತಿಧರ್ಮ ರುದ್ರಮ್ಮ।
ಶುದ್ಧ ಚಾರಿತ್ರೆ- ಘನಮಠ ॥೨೭॥

ತನ್ನನುಡಿ ತನ್ನಾಡು। ತನ್ನಪತಿ ಸುತರನ್ನು।
ತನ್ನಾತ್ಮದಂತೆ ಭಾವಿಸುವ ಶಿವ ಶರಣೆ।
ಪುಣ್ಯ ರುದ್ರಮ್ಮ- ಘನಮಠ ॥೨೮॥

ಕುಷ್ಟಗಿಯ ಹಿರಿಮಠದ। ಶ್ರೇಷ್ಠ ಮುದ್ದಾನಿ।
ನಿಷ್ಠೆಯಿಂ ತನ್ನ ಸೇವೆ ಸಲ್ಲಿಸಿ ನಿತ್ಯ। ಶ್ರೇಷ್ಠ
ಶಿವ ಶರಣೆ- ಘನಮಠ ॥೨೯॥

ಮುದ್ದಾನ ಸ್ವಾಮಿ ಮನ। ದ್ದಿಗ್ಗಿನಾ ಸತಿಯಾಗಿ।
ಗೆದ್ದಳೀ ಭವವ ಶುದ್ದಚಾರತ್ರ ಪ್ರ।
ಸಿದ್ಧ ರುದ್ರಮ್ಮ- ಘನಮಠ ॥೩೦॥

ಅತಿಥಿ ಸೇವೆಯ ಮಾಡಿ। ಪತಿ ಪರಾಯಣೆಯಾಗಿ।
ಕ್ಷಿತಿಯೊಳಗೆ ಶಾಶ್ವತವು ರುದ್ರಮ್ಮನಾ ಕೀರ್ತಿ।
ಪತಿವ್ರತೆಯ ಪ್ರಭೆಯು- ಘನಮಠ ॥೩೧॥

## ಸೋವನ್ನಾಳ ಬಸವಲಿಂಗ ಶರಣರ ವಚನ

ಶರಣರಾಚರಣೆಯನು| ಕಂಸಿ ಜೀವನವೆಲ್ಲ|
ಪರಿಶುದ್ಧ ನಡೆಯಿಂದ ಹೆಸರಾದ ಸೋವನ್ನಾಳ|
ಶರಣ ನಿಜಶರಣ– ಘನಮಠ ||೩೨||

ಬಸವಲಿಂಗಪ್ಪ ಶರಣ| ನಸಮಗಣ| ನಿಜಶಾಸ್ತ್ರ
ವಿಸರ ವಿಸ್ತಾರ ವಿಶ್ವಕ್ಕೆ ಭೋಧಿಸಿದ|
ಹೆಸರಾಂತ ಶರಣ– ಘನಮಠ ||೩೩||

ನೇಗಿಲವೆ ಆಧಾರ| ವಾಗಿಹುದು ಜೀವನಕೆ|
ತ್ಯಾಗಿ ತಾನಾಗಿ ಇಹದಿಂದ ಪರಗೆದ್ದ| ಯೋಗಿ
ನಿಜಶರಣ– ಘನಮಠ ||೩೪||

ನವಕೋಟಿ ಮಂತ್ರವನು| ಅವನಿಯಾಳ್ವಾರದೊಳು|
ಸವಣಿಯಿಂ ಶಿವಲಿಂಗ ಸ್ಥಾಪಿಸಿದ ಸ್ಮಾರಕವು|
ಭುವನದೊಳು ಸ್ಥಿರವು– ಘನಮಠ ||೩೫||

ಕಲಕೇರಿಯಾಳ್ವಾರ| ಚಲುವ ತಾಳಿಕೋಟಿ|
ಬಲವಂತ ಬಸವ ಬಾಗೇವಾಡಿ ತಾಲೂಕು|
ನಿಲಯ ಸೋವನ್ನಾಳು– ಘನಮಠ ||೩೬||

ವೇದವೇದಾಂತದೊಳು| ಆದಿಯಿಂ ಸೋವನ್ನಾಳು|
ಸಾಧನೆಯು ಗೈದ ಪಾಟೀಲರನ್ವಯವು|
ಆದರ್ಶವಲ್ಲಿ– ಘನಮಠ ||೩೭||

ಬಸವಲಿಂಗರ ಪೂರ್ವ ಅಸಮ ಕೀರ್ತಿಯಪಡೆದ|
ಅಸಮಾಕ್ಷ ಶರಣ ಅಯ್ಯಪ್ಪಗೌಡನವ|
ಹೆಸರಾಂತ ಜ್ಞಾನಿ– ಘನಮಠ ||೩೮||

ಶತ ವರುಷ ಬಾಳಿನೊಳು। ಶಿತಿಗರಳಮಠಸೇವೆ।
ಸತತ ಗೈದಾಶರಣನಯ್ಯಪ್ಪ ಗೌಡನವ।
ಕ್ಷಿತಿಯೊಳವ ಸ್ಥಿರನು- ಘನಮಠ ॥೩೯॥

ಮನೆಯೊಳಗೆ ದಾಸೋಹವನು ದಿನವು ನಡೆಸುತ್ತಾ।
ಘನವಾದ ನಿಜಗುಣರ ಶಾಸ್ತ್ರ ಮಂದಿರದೊಳಗೆ।
ಅನುಗಾಲ ಪೇಳ್ದ- ಘನಮಠ ॥೪೦॥

ಅಡವಿ ಸೋಮ್ನಾಳ ಗ್ರಾಮ ತೊಡೆದು ನೂತನ ನಾಮ।
ಪಡೆದಿಹುದು ಶರಣ ಸೋಮ್ನಾಳೆಂಬ ನಾಮದಿಂ।
ಪೊಡವಿಯೊಳು ಸ್ಥಿರವು- ಘನಮಠ ॥೪೧॥

ನೂರೊಂದು ವರುಷವು। ಮಾರಾರಿ ಶರಣನವ।
ಕಾರಣಿಕನಾಗಿ ಬಾಳ್ದನಯ್ಯಪ್ಪಗೌಡ।
ಧಾರುಣಿಗೆ ಮಿಗಿಲು- ಘನಮಠ ॥೪೨॥

### ಬಸವನ ಬಾಗೇವಾಡಿ ಬಸವೇಶ್ವರ ವಚನ

ಬಸವಬಾಗೇವಾಡಿ ಯಶ ಪಡೆದ ತಾಲೂಕು!
ಅಸಮಾಕ್ಷನಲ್ಲಿ ಬಸವೇಶ ನಾಮದಿಂ। ದಿಶೆಯ
ಬೆಳಗಿದನು- ಘನಮಠ ॥೪೩॥

ಬಾಗೇವಾಡಿಯ ಬಸವ। ಸಾಗಿ ಕಲ್ಯಾಣಕ್ಕೆ।
ಯೋಗಿ ಶಿವಶರಣರ ಗುರು ಜಂಗಮರ ಸೇವೆ।
ತ್ಯಾಗಿ ತಾ ಗೈದ- ಘನಮಠ ॥೪೪॥

### ಕವಿತಾಳ ಗ್ರಾಮದ ನಿರಂಜನ ಪೀಠದ ವಚನ

ಕವಿತಾಳ ಗ್ರಾಮದೊಳು। ಶಿವರೂಪಿ ಚರವರನು।
ಅವತರಿಸಿ ಅವನಿಯನು। ಪಾವನ ಗೈದಿಹನು।
ಅವನಿಯೊಳು ಸ್ಥಿರವು- ಘನಮಠ ॥೪೫॥

ಬಸವಲಿಂಗ ಸ್ವಾಮಿ ಹೆಸರಾಗಿ ಭೂಮಿಯೊಳು।
ಯಸವ ಪಡೆದಿಹನು ಕವಿತಾಳ ಗ್ರಾಮದೊಳು।
ಪಶುಪತಿಯು ರೂಪ- ಘನಮಠ ||೪೬||

ಗುರು ನಿರಂಜನ ಪೀಠ। ಸ್ಥಿರವಾಗಿ ಕವಿತಾಳ।
ಹರಭಕ್ತರಾ ಬಯಕೆ ಕರುಣಿಸುತ ಕವಿತಾಳು।
ಸ್ಥಿರವು ವಿಶ್ವದೊಳು- ಘನಮಠ ||೪೭||

ಸಿದ್ಧಲಿಂಗ ಸ್ವಾಮಿ ಸಿದ್ಧಿಯನು ತಾ ಪಡೆದು।
ಗೆದ್ದನಷ್ಟಾವರಣ ಪಾಲಿಸುತ ಮಠದಿ ಪ್ರ
ಸಿದ್ಧಿ ತಾ ಪಡೆದ- ಘನಮಠ ||೪೮||

ವಾರವಾರವು ಮಠವಿ। ಮಾರ ಹರಮಠ ತತ್ವ।
ಸಾರುವರು ಭಕ್ತತಿಂತಿಣಿಗೆ ಘನ।
ತರಾಚಾರ ಗುರುವರರು- ಘನಮಠ ||೪೯||

## ಮುಕ್ಕುಂದಿ ಕರವೀರ ಶಿವಯೋಗಿ ವಚನ

ಕರವೀರ ಶಿವಯೋಗಿ ಮೆರದಿಹನು ಕರುನಾಡ।
ಹಿರಿಯ ತಪಗೈದು ತುಂಗಭದ್ರೆ ತಟದಿ।
ಸ್ಥಿರವು ಮುಕ್ಕುಂದಿ- ಘನಮಠ ||೫೦||

ಜನನ ತಾವರಗೇರಿ। ಮನಸಿಜನ ತಾಗೆದ್ದು।
ಘನಬ್ರಹ್ಮಚಾರೀ ಮಠವೈದು ಗ್ರಾಮದೊಳು।
ನೆನಹಿಂ ನಿಲಿಸೀ- ಘನಮಠ ||೫೧||

ಕುಂಟೋಜಿ ಗ್ರಾಮ ಸಿದ್ದಾಪುರವು ಇಟಗಿಯೊಳು।
ಬಂಟ ತಾನೆನಿಸಿ ಮಠಗಳನು ಸ್ಥಾಪಿಸಿದ।
ಧಿಟ್ಟ ಶಿವಯೋಗಿ- ಘನಮಠ ||೫೨||

ಹರನೆ ತಾ ಧರೆಯೊಳಗೆ। ಕರವೀರ ನಾಮದಿಂ।
ಚರಿಸಿಯಂತ್ಯಕ್ಕೆ ಮೆರೆವ ಗೊಬ್ಬರಕಲ್ಲು।
ಸ್ಥಿರಮಾಡಿ ಮಠವ- ಘನಮಠ ॥೫೩॥

ಪುಣ್ಯ ಶಿವಯೋಗಿಯಾ। ಮಾನ್ಯ ಸಂತತಿಯವರು।
ಗಣ್ಯರೆಂದೆನಿಸಿ ಇರುವ ಗೊಬ್ಬರಕಲ್ಲು।
ಪುಣ್ಯ ಸುಕ್ಷೇತ್ರ- ಘನಮಠ ॥೫೪॥

ಬಿಲ್ಕೆರಿ ಗ್ರಾಮದೊಳು। ನೆಲೆಸಿಹುದು ಮೂಲಸ್ಥಲ।
ಚಲಿಸುತಲಿ ನಾಡ ಕರವೀರ ಶಿವಯೋಗಿ।
ನಿಲಯ ಕುಂಟೋಜಿ- ಘನಮಠ ॥೫೫॥

## ಸಿದ್ಧಪರ್ವತ ಅಂಬಾಕ್ಷೇತ್ರ ವಚನ

ಗುರುಚಿದಾನಂದನಾ। ಪರಮ ತಪಸಿನ ಫಲವು।
ಕರುನಾಡಿನಲ್ಲಿ ಹೆಸರು ಪಡೆದಿಹ ಸಿದ್ಧ।
ಪರುವತವು ಕ್ಷೇತ್ರ- ಘನಮಠ ॥ ೬॥

ಅಂಬ ನೆಲೆಸಿಹಳು ಜಗ। ದಂಬ ಮೂರುತಿಯಾಗಿ।
ಸಂಭ್ರದಿ ನಾಡ ರಕ್ಷಿಸಲು ಇಳೆಗಿಳಿದ।
ಅಂಬ ಸುಕ್ಷೇತ್ರ- ಘನಮಠ ॥೫೭॥

ಬನವು ತಾ ಚಿಗುರೊಡೆದು। ವನವು ಸಿಂಗಾರಾಗಿ।
ಬನದ ಹುಣ್ಣಿಮೆಯ। ದಿನದಿ ಅಂಭಾವಾತೆ।
ಘನವಾದ ಜಾತ್ರೆ- ಘನಮಠ ॥೫೮॥

ಸಾಧು ಸಂತರವೊಳ। ಆದರದಿ ಕೂಡುವದು।
ಮೋದದಿಂದಂಬಾ ಜಾತ್ರೆಯನು ಮಾಡುವರು।
ಭೇದ ತಾವಳಿದು- ಘನಮಠ ॥೫೯॥

ಸಿದ್ಧ ಕ್ಷೇತ್ರದ ಮುಂದೆ। ಬದ್ಧನಾಗಿಹ ಶರಣ।
ಶುದ್ಧ ಮನದಾತ್ಮ। ಭೀಮಲಿಂಗನು ಪ್ರ।
ಸಿದ್ಧ ಶಿವಯೋಗಿ- ಘನಮಠ ||೬೦||

ಶುಂಭ ನಿಶುಂಭರಾ। ದಂಭವನು ಮುರಿಯಲ್ಕೆ।
ಸಾಂಭನ ಸತಿ ಗೌರಿ ಕುಂಭಿನಿಗೆ ಇಳಿಯಲ್ಕೆ।
ಅಂಭಾ ಸುಕ್ಷೇತ್ರ- ಘನಮಠ ||೬೧||

## ಸಿದ್ಧರಾಂಪೂರ ಕೊಡೆಕಲ್ಲ ಬಸವೇಶ್ವರ ವಚನ

ಕೊಡೆಕಲ್ಲ ಗ್ರಾಮದ ಮೃಡರೂಪ ಬಸವಾರ್ಯ।
ದೃಡ ಚಿತ್ತನಾಗಿ ಚರಿಸುತಂಬಾಕ್ಷೇತ್ರ।
ಎಡೆಗೆ ತಾ ಬಂದ- ಘನಮಠ ||೬೨||

ಸಿದ್ಧ ಪರ್ವತ ಬಳಿಯ। ಸಿದ್ಧರಾಂಪೂರ ಗ್ರಾಮ।
ಬುದ್ಧಿಯುತರಲ್ಲಿ ಜ್ಞಾನಿ ವಿರುಪಾಕ್ಷಯ್ಯ।
ಸಿದ್ಧರಿಹರಲ್ಲಿ- ಘನಮಠ ||೬೩||

ಪಶು ಪತಿಯು ಸಮರಾದ। ಬಸವಾರ್ಯರಾ ಲೀಲೆ।
ಅಸಮ ಅಗಣಿತವ ತಾ ಕಂಡು ವಿರುಪಯ್ಯ ಪರಮಿತ।
ಬೆಸುಗೆ ತಾನಾದ- ಘನಮಠ ||೬೪||

ಗುರುಶಿಷ್ಯರುಭಯರು। ಹರಭಕ್ತರ।
ನಿರುತ ಗೈಯ್ಯುತಿಹ ಸೇವೆಯನು ಸ್ವೀಕರಿಸಿ।
ಹರುಷದಿಂದಿಹರು- ಘನಮಠ ||೬೫||

ಸ್ವಾಮಿಯ ಕೃಪೆ ಪಡೆದ। ಪ್ರೇಮಿ ಸೋಮನಗೌಡ।
ಭೂಮಿ ಸಿರಿ ಸಕಲ ಸಂಪದವ ಪಡೆದಿಹನು।
ನೇಮಿ ಶಿವಭಕ್ತ- ಘನಮಠ ||೬೬||

ಆವರ ಭಕ್ತಿಗೆ ಮೆಚ್ಚಿ ಕುವರಂ ಕರುಣಿಸಿದ।
ಲವಕುಶರ ತೆರದಿ ಬಸವನ್ನೈಯ್ಯನಗೌಡ।
ರುಭಯರಿರುತಿಹರು– ಘನಮಠ ॥೬೭॥

ವರುಷ ನವರಾತ್ರಿಯೊಳು। ಪರಮ ಪರತರ ಪುಣ್ಯ।
ವರಶಕ್ತಿ ಸಾಂಭವಿಯ ಪೌರಾಣವನು ನಿತ್ಯ।
ಹರುಷದಾಲಿಪರು– ಘನಮಠ ॥೬೮॥

ಗುರುಬಸವ ಸ್ವಾಮಿಯ ವರುವರುಷ ಜಾತ್ರೆಯನು।
ಬರುವ ಭಾರತದ। ಹುಣ್ಣಿಮೆಯ ದಿನದಂದು।
ನಿರುತಗೆಯ್ಯುವರು– ಘನಮಠ ॥೬೯॥

ಸ್ವಾಮಿಯ ಜಾತ್ರೆಗೆ। ನೇಮದಿಂದೆಳೆಯಲ್ಕೆ।
ಆ ಮಹಾಸುಗುಣೆ ಹೊಸ ರತವ ಮಾಡಿಸಿದ।
ಪ್ರೇಮದಭಕ್ತ– ಘನಮಠ ॥೭೦॥

ಕೊಡೆಕಲ್ಲ ಬಸವಾರ್ಯ ಮೃಡರೂಪ ತಾನಾಗಿ।
ಬಿಡದೇ ನೆಲಿಸಿಹನು ಮೃಢಭಕ್ತರಾಶಯುವೆ।
ದೃಡತೆ ತಾ ಕಂಡು– ಘನಮಠ ॥೭೧॥

ಸಿದ್ದರಾಂಪೂರ ಗ್ರಾಮ। ಬುದಿವಂತರು।
ಬಹಳ ಬುದ್ದಿಲ್ಲದವರು ಎಕರ ಚರಣ ಕಳಕೊಂಡು।
ಬಿದ್ದಿಹರು ಅಲ್ಲಿ– ಘನಮಠ ॥೭೨॥

## ಗೊರೇಬಾಳು ಶರಣಬಸವ ನಚನ

ಸಿಂಧನೂರ ತಾಲೂಕು। ಬಂಧುರವು ಗೊರೆಬಾಳು।
ಇಂದುಧರನವತಾರಿ। ಕಲಬುರ್ಗಿ ಶರಣನವ।
ಬಂದು ನೆಲೆಸಿಹನು– ಘನಮಠ ॥೭೩॥

ಗುಣವಂತ ಭಕ್ತಗಣ। ಹಣವಧಿಕ ವ್ಯಯ ಮಾಡಿ।
ಗಣನೆಗೆ ಮೀರಿ ಮಂದಿರವ ರಚಿಸಿಹರು।
ಮಣಿಯುವದು ಮನವು- ಘನಮಠ ॥೭೪॥

ಧರೆಯೊಳ್ಖೆ ಸತಾಗಿರುವ। ಗುರುವು ಒಳಬಳ್ಳಾರಿ।
ಕರುಣೆಯಿಂದವರು ಕಲಬುರ್ಗಿ ಶರಣನಾ। ವರವ
ಪಡೆದಿಹರು - ಘನಮಠ ॥೭೫॥

ಎಡೆಯೂರು ತೋಂಟದಾ। ಒಡೆಯಸಿದ್ಧಲಿಂಗನ।
ಪಡೆದಿಹರು ಕೃಪೆಯ। ಗೊರೆಬಾಳು ದೃಢಭಕ್ತ।
ದೃಢಭಕ್ತಿಯುತರು- ಘನಮಠ ॥೭೬

ಕಲಬುರಗಿ ಗ್ರಾಮದಿಂ। ದಿಳಿದು ಬಂದಿಹ ಶರಣ।
ಚಲುವ ಗೊರೆಬಾಳು ಎರಡನೆಯ ಕಲಬುರ್ಗಿ।
ನಿಲಯ ಸುಕ್ಷೇತ್ರ- ಘನಮಠ ॥೭೭॥

ಇವರು ಮಾಡಿದಕಾರ್ಯ। ರವಿಶಶಿಯುರಿರುವಂತೆ।
ಅವಿರತವು ಸ್ಥಿರವು ಧರ್ಮಕೀರ್ತಿಯ ಕಾರ್ಯ।
ಭುವನ ಬೆಳಗುವದು- ಘನಮಠ ॥೭೮॥

ಗೊರೆಬಾಳು ಭಕ್ತಗಣ। ಸ್ಥಿರಭಕ್ತಿಯಿಂಗೈದ।
ಹರನ ಪ್ರತಿರೂಪ ಕಲಬುರ್ಗಿ ಶ್ರೀಶರಣ।
ಸ್ಥಿರ ಮುಕ್ತಿ ಸತ್ಯ- ಘನಮಠ ॥೭೯॥

ಇಂದು ಮಾಡಿದ ಕಾರ್ಯ ಮುಂದೆ ಎಂದೆಂದಿಗೂ।
ಬಂಧುರವು ಜಗದಿ ಗೊರೆಬಾಳ ಸ್ಥಿರಕಾರ್ಯ।
ಸುಂದರಿತಿಹಾಸ- ಘನಮಠ ॥೮೦॥

## ಪುರಂದರ ದಾಸರ ವಚನ

ದಾಸ ಪಂಥಿಗಳೊಳಗೆ। ಕೇಶವನ ಕೃಪೆ ಪಡೆದು।
ಲೇಸಾದ ಪದವಿ ಪಡೆದ ಶ್ರೀಪುರಂದರ।
ದಾಸನೇ ಮಿಗಿಲು– ಘನಮಠ ||೪೧||

ವಿಜಯ ವಿಠ್ಠಲ ನಾಮ। ಭಜಿಸಿ ತನು ಮಲತ್ರಯವ।
ತ್ಯಜಿಸಿ ಮನೆ ಮಠವ। ಸಂಚರಿಸಿ ಕರುನಾಡ।
ನಿಜದಾಸನಿವನು– ಘನಮಠ ||೪೨||

ಹರಿನಾಮಕೀರ್ತನೆಯ। ಪರಮಪಥವನು ಜಗದಿ।
ಚರಿಸಿ ಕರುನಾಡ ಪಾವನಗೊಳಿಸಿದ।
ಹಿರಿದಾಸ ಶ್ರೇಷ್ಠ– ಘನಮಠ ||೪೩||

ದಾಸಭಾವನೆಯಿಂದ। ಈಶತ್ವವನು ಪಡೆದು।
ದೇಶವನು ಸುತ್ತಿ। ಕೇಶವನ ಸನ್ನಿಧಿಗೆ।
ದಾಸಗಮಿಸಿದನು– ಘನಮಠ ||೪೪||

ಹರಿ ಹರರ ಭೇದ ಪರಿ। ಹರಿಸಿ ಜಗಜನಕೆಲ್ಲ।
ಹರಿಯು ಸಖ ಹರನೆಂಬ ಸ್ಥಿರಭಾವ ಬೋಧಿಸಿದ।
ಪುರಂದರದಾಸ– ಘನಮಠ ||೪೫||

## ಕನಕದಾಸರ ವಚನ

ದೇವನೊಲಿಯಲ್ಕೆ ಜಗ। ದ್ಯಾವಕುಲವಾದರೇನ್।
ಭಾವಶುದ್ಧಿಯ ಕನಕ ಹರಿಧ್ಯಾನದಿಂ ವಾಸು।
ದೇವ ನಿಜ ದಾಸ– ಘನಮಠ ||೪೬||

ಪರಮ ಭಕ್ತರಿಗೆ ಹರಿಯ। ದರುಶನವು ಲಭಿಸದಿರೆ।
ಹರಿಧ್ಯಾನ ಕನಕ ಭಾವದಿಂ ಭಜಿಸೆ ಮಂ।
ದಿರದಿ ಹರಿತಿರುಗಿ– ಘನಮಠ ||೪೭||

ಮಂದಿರದಿ ಹಿಂಬದಿಯು। ಸುಂದರದ ಪ್ರಕಾರ।
ದಂದವಾಗಿರುವ ಕನಕಂಗೆ ಕಿಂಡಿಯಿಂ।
ಸಂದರ್ಶನಿತ್ತ- ಘನಮಠ ॥೮೮॥

ಅಂದಿನಿಂದಾಕಿಂಡಿ ಸುಂದರದ ವಿಶ್ವದೊಳು।
ಇಂದಿಗೂ ಶಾಶ್ವತವು ಕನಕನ ಕಿಂಡಿಯಿಂ।
ತೆಂದಿಗೂ ಸ್ಥಿರವು- ಘನಮಠ ॥೮೯॥

ಹರಿಭಕ್ತನಿರಲಿ ಜಗ। ದ್ಧರಭಕ್ತನಿರಲೇಸು।
ಶರೀರ ಪಾವಿತ್ರ। ನಿರುವಾತ ವಿಶ್ವದೊಳು।
ಹರಿಹರರ ಭಕ್ತ- ಘನಮಠ ॥೯೦॥

ನರಲೋಕದೊಳಗಿರುವ। ನರರ ಭೇದವಕಳೆಯು।
ಲ್ಹರಿಹರರೆ ಕೂಡಿ ಒಂದಾದ ಸ್ಮಾರಕವು।
ಹರಿಹರ ಗ್ರಾಮ- ಘನಮಠ ॥೯೧॥

## ಉಡುಪಿಯ ಶ್ರೀಕೃಷ್ಣನ ವಚನ

ಒಡೆಯ ಮದ್ವಾಚಾರ್ಯ। ದೃಢದಿ ಪೇಳಿದ ತತ್ವ।
ಪೊಡವಿಯೊಳಗ್ಧಸರು ಮಾಧ್ವಮತವಿಂತೆಂದು।
ದೃಢವಾಯ್ತು ಇಲ್ಲಿ- ಘನಮಠ ॥೯೨॥

ಹಡಗದೊಳು ಸಾಗರದ। ತಡಿಗೆ ತೇಲುತಬಂದ।
ವಡವೆಯನು ಪಿಡಿದು ಮಧ್ವ ಗುರು ಸ್ಥಾಪಿಸಿದ।
ಉಡುಪಿ ಶ್ರೀಕೃಷ್ಣ- ಘನಮಠ ॥೯೩॥

ಮಾಧ್ವ ಮತವನು ಜಗದಿ। ಆದ್ಯದೊಳು ಸ್ಥಾಪಿಸಿದ।
ಮಧ್ವಗುರು ಆಚಾರ್ಯ ವೈಷ್ಣವಾನ್ವಯ ಮೂಲ।
ಸಾಧ್ಯತೆಯ ಮಹಿಮೆ- ಘನಮಠ ॥೯೪॥

ವೇದಾಗಮದ ಸಾರ। ಬೋಧಿಸಿದ ಮಹಿಮ ನಿವ।
ಮಾದಕದ ವಸ್ತುಗಳ ಸ್ವಾದಕ್ಕೆ ಬಹಿಷ್ಕರಿಸಿ।
ಮಾಧವನೆ ಆದ– ಘನಮಠ ॥೯೫॥

ಅಂದಿನಿಂದುಡುಪಿಯೊಳು। ಸುಂದರ ಮೂರ್ತಿಗದು।
ಚಂದಿರದ ನಾಮ ಶ್ರೀಕೃಷ್ಣ ನಿಂತೆಂದು।
ಅಂದವಾಗಿಹುದು– ಘನಮಠ ॥೯೬॥

## ಮಧ್ವಾಚಾರ್ಯರ ವಚನ

ಬುದ್ಧಿಯುತ ಮಾನವನು ಆಧ್ಯಾತ್ಮ ಶೋಧನೆಯು।
ಸಾಧ್ಯತೆಯುಗೊಂಡ ತತ್ವವೇ ವಿಶ್ವದೊಳು।
ಮಾಧ್ವ ಮತವಾಯ್ತು– ಘನಮಠ ॥೯೭॥

ಭಾರತದೊಳನಂತ। ಬೇರೆ ಬೇರೆ ಮತಕೆ।
ಕಾರಣಿಕರೆನಿಪಾ। ಆಚಾರ್ಯರೆಲ್ಲರಾ।
ಸಾರವದು ಒಂದೇ– ಘನಮಠ ॥೯೮॥

ಹರಿಹರಾದಿತ್ಯಾದಿ। ವರಶಕ್ತಿ ರವಿ ಶಶಿಯು।
ಹಿರಿಯು ಮತ ಸ್ಥಾಪಿಸಿದ ಆಚಾರ್ಯರೆಲ್ಲರೂ।
ಹರಿಹರ ಸಮರೂ– ಘನಮಠ ॥೯೯॥

ಎಲ್ಲ ಮತದಾಚಾರ್ಯ। ರೆಲ್ಲರೂ ಭಾರತದ।
ಎಲ್ಲ ಜನಗಣಕೆ ಒಳ್ಳೆ ಪಥ ತೋರಿದರು।
ಪುಲ್ಲಾಕ್ಷ ಸಮರು– ಘನಮಠ ॥೧೦೦॥

ಖಂಡೇಂದುಧರ ತತ್ವ। ಪುಂಡರೀಕಾಕ್ಷ ಮತ।
ಪಂಡಿತಂ ಮನ್ಯ ಭರತ ಖಂಡಕೆ ಮಾನ್ಯ।
ಉಂಡಿಗೆಯ ಮುದ್ರೆ– ಘನಮಠ ॥೧೦೧॥

### ರಾಘವೇಂದ್ರಾಚಾರ್ಯ ವಚನ

ತುಂಗಭದ್ರೆಯ ತಟದಿ ಮಂಗಲಾತ್ಮಕ ಪೀಠ।
ಸಂಗೊಳಿಸಿದಾ ಗುರುವು ರಾಘವೇಂದ್ರಾಚಾರ್ಯ ಗುರು।
ಮಂಗಲನು ಜಗಕೆ– ಘನಮಠ ॥೧೦೨॥

ರಾಘವೇಂದ್ರ ಸ್ವಾಮಿ। ಯೋಗಿ ಜನವಂದ್ಯ ಭುವಿ।
ರಾಗದಿಂದಚ್ಯುತಾನ್ವಯ ವರ್ಧನಾಚಾರ್ಯ।
ಆಗಮ ಸ್ತುತ್ಯ– ಘನಮಠ ॥೧೦೩॥

ರಾಮಾಯಣದ ಸಾರ। ಈ ಮಹೀಸ್ಥಾನದಲಿ।
ಆ ಮಹಾತ್ಮರು ಸ್ಥಾಪಿಸಿದರವರು ತಮ್ಮಯ।
ಸಾಮರ್ಥ್ಯದಿಂದ– ಘನಮಠ ॥೧೦೪॥

ಹರಿ ಹರರು ಬೇರೆಂಬ। ವಿರಸವನು ದೂರ್ಮಾಡಿ।
ಧರಗೆ ಬೋಧಿಸಿದ ಗುರು ರಾಘವೇಂದ್ರಾರ್ಯ।
ಹರಿಯೆ ಹರನೆಂದು– ಘನಮಠ ॥೧೦೫॥

ಗುರು ರಾಘವೇಂದ್ರರಾ। ಪರಮ ದಿವ್ಯ ಜ್ಞಾನ।
ಧರೆಗೆ ಭೋದಿಪುದು ಹರಿಮತದ ಶ್ರೇಷ್ಠತೆಯು।
ಸ್ಥಿರವು ವಿಶ್ವದೊಳು– ಘನಮಠ ॥೧೦೬॥

### ಶಂಕರಾಚಾರ್ಯರ ವಚನ

ಶೃಂಗೇರಿ ಮಠದೊಡೆಯ। ಮಂಗಲಾತ್ಮಕ ಮಹಿಮ।
ಸಂಘಟಿಸಿದಾ ಸ್ಮಾರ್ತ ಮತ ಸ್ಥಾಪನಾಚಾರ್ಯ।
ಶಂಕರಾಚಾರ್ಯ– ಘನಮಠ ॥೧೦೭॥

ಶಂಕರಾಚಾರ್ಯಗುರು। ಶಂಕರದ್ವೈತ ಮತ।
ಡಂಕಣೆಯಗೊಳಿಸಿ ಶೈವಮತ ಸ್ಥಾಪನೆಯ।
ಅಂಕಿತಾಚಾರ್ಯ– ಘನಮಠ ॥೧೦೮॥

ಗುರು ರೇಣುಕಾಚಾರ್ಯ| ಕರುಣೆಯಿಂ ಪಡೆದಿರುವ|
ವರ ಚಂದ್ರಮೌಳೀಶ್ವರ ಲಿಂಗ ಸ್ಥಾಪಿಸಿದ|
ಸ್ಥಿರ ಶಂಕರಾಚಾರ್ಯ- ಘನಮಠ ||೧೦೯||

ಚಾರುತರ ಶೈವಮತ| ಧಾರುಣಿಗೆ ವಿಸ್ತಾರ|
ಆರೋಹಗೊಳಿಸಿ| ಮೆರೆದ ಗುರುಶಂಕರಾ|
ಚಾರ್ಯ ಘನಮಹಿಮೆ- ಘನಮಠ ||೧೧೦||

ಭಾವಜಾತಕರೂಪ| ಸ್ಥಾವರಕೆ ನೆಲೆಗೊಳಿಸಿ|
ಈ ವಸುಧಿಯೊಳಗೆ ಲಿಂಗವನು ಸ್ಥಾಪಿಸಿದ|
ಭಾವಿಕಾಚಾರ್ಯ- ಘನಮಠ ||೧೧೧||

## ರಾಮಾನುಜಾಚಾರ್ಯ ವಚನ

ವೈಷ್ಣವಾನ್ವಯ ಜಗದಿ| ಸೃಷ್ಟಿಸಿದ ಘನಮಹಿಮ|
ಶ್ರೇಷ್ಠ ರಾಮಾನುಜಾಚಾರ್ಯ ಜ್ಞಾನ ಕ್ರಿಯೆಯು|
ನೈಷ್ಠೆಯಿಂ ಸಾರ್ದ- ಘನಮಠ ||೧೧೨||

ರಾಮಾನುಜಾಚಾರ್ಯ| ದಾಮೋದಕಾನ್ವಯುವ|
ಭೂಮಿ ಭಾರತದಿ ಸ್ಥಾಪಿಸಿದ ಗುರುಪೀಠ|
ದಾಮೋತ್ತರಾಧಿ- ಘನಮಠ ||೧೧೩||

## ಮಾನ್ವಿ ಜಗನ್ನಾಥದಾಸರ ವಚನ

ದೇವನಾಮವ ಭಜಿಸಿ| ಭಾವಶುದ್ಧತೆಯಿಂದ|
ದೇವತ್ವ ಪಡೆದ ಮಾನ್ವಿಯ ಜಗನ್ನಾಥ|
ಗೋವಿಂದದಾಸ- ಘನಮಠ ||೧೧೪||

ನರದೇಹದಿಂ ಪುಟ್ಟಿ| ಹರಿಸೇವೆಯನು ಗೈದು|
ನರಭಾವವಳಿದು ಹರಿದಾಸ ತಾನಾಗಿ|
ಸ್ಥಿರಪದವಿ ಪಡೆದ- ಘನಮಠ ||೧೧೫||

## ಚೀಕಲಪರ್ವಿ ವಿಜಯದಾಸ ವಚನ

ಗ್ರಾಮ ಚೀಕಲಪರ್ವಿ। ನಾಮ ವಿಜಯದಾಸ।
ಶ್ಯಾಮಾಂಗಧ್ಯಾನ ನಿತ್ಯ। ಪಠಿಸುತ ಪದವಿ।
ಧಾಮ ಪಡೆದಿಹರು- ಘನಮಠ ॥೧೧೬॥

ನಡೆನುಡಿಯೊಳಾಚರಣೆ। ಕೊಡುವ ಸಮಯದೊಳು।
ಬಿಡದಿಲ್ಲ ರಿನಾಮ ನುಡಿದು ವಿಜಯದಾಸ।
ಪಡೆದ ವೈಕುಂಠ- ಘನಮಠ ॥೧೧೭॥

## ಗೋನವಾರದ ರಾಮದಾಸ ವಚನ

ಗ್ರಾಮ ಜೋಳದಹೆಡ್ಗಿ। ನಾಮಾಂಕ ಬಡೆಸಾಬ।
ಕಾಮಿನಿಯ ಕಾಟ ಕಳೆದವನು ಸಂಸಾರ।
ಸೀಮೆ ದಾಟಿದನು- ಘನಮಠ ॥೧೧೮॥

ಗೋನವಾರಕೆ ಬಂದು। ಶ್ರೀನಿವಾಸರ ಕೃಪೆಯು।
ದಾನಿಗಳ ಪುಣ್ಯ ಸಂಸಾರದಿಂದವನು।
ಸ್ವಾನಭುವಿಯಾದ- ಘನಮಠ ॥೧೧೯॥

ಹೇಯಮಯ ಸಂಸಾರ। ಮಾಯೆಯನು ದೂರ್ಮಾಡಿ।
ಕಾಯ ಪರಿಶುದ್ಧವಾಗಲ್ಕೆ ಮಾಧ್ವಮತ।
ದಾಯತವನರಿತ- ಘನಮಠ ॥೧೨೦॥

ರಾಮನಾಮದ ಧ್ಯಾನ। ನೇಮದಿಂ ಮಾಡಲ್ಕೆ।
ತಾಮಸವ ಕಳೆದು ಪರಿಶುದ್ಧ ಹೃದಯ ನಿಜ।
ರಾಮದಾಸಾದ- ಘನಮಠ ॥೧೨೧॥

ದೇಶಕೋಶವ ಚರಿಸಿ। ಕೇಶವನ ಮೂರ್ತಿಮನ।
ವಾಸಿಷ್ಠ ಗೊಳಿಸಿ ವಿಜಯನಗರದಿ ರಾಮ।
ದಾಸ ಗುರುಕಂಡ- ಘನಮಠ ॥೧೨೨॥

ರಾಮವಧೂತರಿಂ| ಭೂಮಿಜಾಪತಿಮಹಿಮೆ|
ನೇಮದಿಂದರಿತು| ಭೂಮಿಯೊಳಗಿವನು ನಿಜ|
ರಾಮದಾಸಾದ- ಘನಮಠ ||೧೨೩||

ರಾಮನಾಮಾಂಕಿತವಿ| ನೇಮದೊಳಗಗಣಿತ|
ಸ್ತ್ರೋಮಪದ ಪದ್ಯ ರಚಿಸಿ ನಿಜರಾಮನ|
ಪ್ರೇಮದಾಸಾದ- ಘನಮಠ ||೧೨೪||

ಸಕ್ರಮದಿ ಹರಿಸೇವೆ| ಮಿಕ್ಕದಲೆ ತಾ ಮಾಡಿ|
ವಿಕ್ರಮದಿ ಸಂವತ್ಸರದಿ| ಹರಿ ಸನ್ನಿಧಿಯ|
ದಕ್ಕಿಸಿಕೊಂಡ- ಘನಮಠ ||೧೨೫||

ಪಿಂಜಾರನಾದರೂ|ಕಂಜಾಕ್ಷ ಕೃಪೆ ಪಡೆದು|
ನಂಜುಂಡ ಶಿವನ ಸಖ ಧ್ಯಾನ ಸಂಸಾರ|
ನಂಜು ತಾ ಕಳೆದ- ಘನಮಠ ||೧೨೬||

## ಶಿಶುನಾಳ ಶರೀಫ ಸಾಹೇಬರ ವಚನ

ಗೋವಿಂದ ಗುರು ಕರುಣ| ಬಾವದೊಳ್ ತಾನರಿದು|
ಭಾವಶುದ್ಧಾತ್ಮ ಶಿಶುನಾಳಿನಾ ಶರಣ|
ದೇವ ಸಮನಾದ- ಘನಮಠ ||೧೨೭||

ಶಿಶುನಾಳ ಮುದ್ರೆಯಿಂ| ದಸಮಪದಗಳ ರಚಿಸಿ|
ದಿಶೆ ದಿಶೆಯ ಪಸರಿಸಿದ ಪಶುಪತಿಯ ತತ್ವವನು|
ಶಿಶುನಾಳ ಶರೀಪ- ಘನಮಠ ||೧೨೮||

ಹಿಂದು ಮುಸಲ್ಮಾನ| ಸಂದೇಹವನು ಬಿಡಿಸಿ|
ಬಂದುಗಳಿಗೊಲಿದು| ಶಿವತತ್ವವನು| ವಿಶ್ವ|
ಬಂಧು ತಾನಾದ- ಘನಮಠ ||೧೨೯||

ಮತಮತಾಂತರ ಭೇಧ। ವತಿಗಳೆದು ವಿಶ್ವದೊಳು।
ಚ್ಯುತಿ ಬಾರದಂತೆ ಸಕಲ ಮತದೊಳು ಬೆರೆತ।
ಮತಿಯುತ ಶರೀಫ- ಘನಮಠ ॥೧೩೦॥

— ಇತಿ ೧೩೦ ನೇ ವಚನಕ್ಕೆ ಪಂಚಮ ಪಥ ಮಂಗಲಂ —

## — ಷಷ್ಟಮ ಪಥ —

### ★ ಶರಣ ಜೀವನದ ವಚನಗಳು ★

ಹರ ನಿರುವನೆಂಬ ನಿಜ। ಶರಿರದೊಳು ಸ್ಥಿರವಾಗಿ।
ಮರವೆ ದೂರಾಗಿ ಅರುವಿರುವ ನರಸತ್ಯ।
ಶರಣ ತಾನಾಗ್ವ- ಘನಮಠ ॥೧॥

ಲಿಂಗ ಜಂಗಮವೆರಡು। ಮಂಗಲಾತ್ಮಕವೆಂದು।
ಅಂಗ ವಿರುತನಕ। ಮರೆಯದಾ ಮರ್ತ್ಯಂಗೆ।
ಸಂಗಯ್ಯನೊಲಿವ- ಘನಮಠ ॥೨॥

ಬಡವ ತಾನಾದರೂ। ಧೃಡನೇಮವನು ಬಿಡದೆ।
ವಡಲಾಸೆಗನ್ಯವಡವೆಯನು ಬಯಸದಗೆ।
ಮೃಡನೊಲಿವನಿತ್ಯ- ಘನಮಠ ॥೩॥

ಉಪವಾಸವಿದ್ದರೂ ಅಪವಾದ ಕಾರ್ಯಗಳ।
ನೆಪವಿಲ್ಲದೆಂದೂ ತಾ ಮಾಡ ಸಜ್ಜನನ।
ತಪವಿದುವೆ ನೋಡಾ- ಘನಮಠ ॥೪॥

ಗುರುಜಂಗಮರ ಕಂಡು। ಹರುಷದಿಂದ್ಹಿಗ್ಗುತ್ತ।
ಹರನೆಂಬ ಭಾವ ಹೃದಯದೊಳು ಭಾವಿಸುವ।
ಸ್ಥಿರ ಭಕ್ತನಿವನು- ಘನಮಠ ॥೫॥

ಶಿವಲಾಂಛನಗಳನ್ನು। ಸವಿನಯದಿ ಪ್ರೀತಿಸುವ।
ಸುವಿವೇಕ ಭಾವದಿಂದಿರುವ ಭಕ್ತಂಗೆ।
ಭವವಿಲ್ಲೆನಾಶ- ಘನಮಠ ॥೬॥

ಆಡವನೆಂದನೃತ। ಮಾಡನಪಕ್ಷತಿಯಿಂದು।
ರೂಢಿಯೊಳ್ ನಾನೇ ಕಿರಿಯನೆಂಬುವನರಗೆ।
ಜೋಡಿಯಾರ ಜಗದಿ- ಘನಮಠ ॥೭॥

ಶಂಕಿಸದೇ ಹಿರಿಯರೊಳು। ಕಿಂಕರನು ತಾನಾಗಿ।
ಅಂಕೆಯೊಳಗಿಡುವ ಇಂದ್ರಿಯದ ವ್ಯಾಪಾರ।
ಶಂಕರನ ಸಮನು- ಘನಮಠ ॥೮॥

ತನ್ನ ತಾಯ್ತಂದೆಗಳ। ಮನ್ನಿಸುವ ಮನದಿಂದ।
ಭಿನ್ನಿಲ್ಲದಂತೆ ಶಿವನೆಲ್ಲರನಿವಗೆ।
ಮನ್ನಣೆಯು ಜಗದಿ- ಘನಮಠ ॥೯॥

ಕಾಮಿನಿಯ ತಾ ಕಂಡು। ಕಾಮಿಸನು ಮನದೆಂದು।
ಸೋಮಧರ ಸತಿಯ ಸಮರೆಂದು ಭಾವಿಸುವ।
ನೇಮಿಯವ ಶರಣ- ಘನಮಠ ॥೧೦॥

ತನ್ನ ದೇವರನುಳಿದು। ಅನ್ಯ ದೇವರ್ಕಳಂ।
ಮನ್ನಿಸನು ಎಂದು। ಮನದಿಂದಲವನು। ಸಂ।
ಪನ್ನಮನುಜರಲಿ- ಘನಮಠ ॥೧೧॥

ಪ್ರಾಣಿದಯೆ ಹೃದಯದಲಿ। ಸ್ವಾನುಭವವನದಲ್ಲಿ।
ನೂನವಾಗದಿಹ ತನ್ನ ಧರ್ಮದ ನಡತೆ।
ಮಾನಯುತ ಜಗದಿ– ಘನಮಠ ॥೧೨॥

ಪರಚಿಂತೆಯನುಮಾಡ। ಹರ ಚಿಂತೆಯನು ಬಿಡನು।
ಸರಳ ಭಾವದಲಿ ಸರ್ವರನು ತಾಕಾಣ್ವ।
ನರಜೀವಿ ಶರಣ– ಘನಮಠ ॥೧೩॥

ನುಡಿಸತ್ಯ ನಡೆ ಸತ್ಯ। ಒಡಲಿನೊಳು ನಿರ್ಮಲತೆ।
ಬಿಡುಕುವನೆಂದೂ। ಪರಸುಖವ ತಾ ಕಂಡು।
ಪಡೆವ ಮೃಡಪದವಿ– ಘನಮಠ ॥೧೪॥

ಮಂಗಲಾತ್ಮಕ ಶಿವನ। ಅಂಗದೊಳು ಧ್ಯಾನಿಸುತ।
ತಂಗುಳವ ತಿಂದು। ತೃಪ್ತಿಪಡೆಯುವ ಪರರ।
ಹಂಗಿಗವದೂರ– ಘನಮಠ ॥೧೫॥

ಮೋಸ ವಂಚನೆ ಮನದೊ। ಳಾಶೆ ಮಾಡನು ಪರರ।
ಈಶ ನೆಲ್ಲರೊಳು ಸ್ಥಿರವೆಂದು ತಿಳಿವಂಗೆ।
ಕ್ಲೇಶ ಬರದೆಂದೂ– ಘನಮಠ ॥೧೬॥

ತನು ಶುದ್ಧವಾಗಲ್ಕೆ। ವಿನಯ ದೇಹದಿ ಬೇಕು।
ಮನ ಶುದ್ಧವಾಗಿ ಮಾನವನು ಎನಿಸಲ್ಕೆ।
ನೆನೆಯೊ ಶಿವಮಂತ್ರ– ಘನಮಠ ॥೧೭॥

ಕಷ್ಟದೊಳಗಿದ್ದರೂ ದುಶ್ಚಟವ ತಾ ಮಾಡ।
ನಿಷ್ಟೆಯೊಳಗಿರುವ ನೀತಿಯನು ಬಿಡದಿರುವ।
ಶ್ರೇಷ್ಠ ಶಿವಶರಣ– ಘನಮಠ ॥೧೮॥

ಮಾದಕ ಪದಾರ್ಥಗಳ। ಸ್ವಾದನೋಡನು ಎಂದು।
ವೇದ ಧರ್ಮವನು ಆದರಿಸುವನು ನಿತ್ಯ।
ಸಾಧು ಶಿವಶರಣ– ಘನಮಠ ॥೧೯॥

ಹೊಗೆಸೊಪ್ಪು ಸೇವಿಸದೆ। ಬಿಗುವಾನ ಹೃದಯದೊಳು।
ನಗಜಾದಿಪತಿಯ। ಸೇವೆಯರ್ಚನೆ ಧ್ಯಾನ।
ಸೊಗಸು ಶರಣಂಗೆ– ಘನಮಠ ॥೨೦॥

ನಿತ್ಯ ನಿರ್ಮಲ ಕಾರ್ಯ। ವೃತ್ತಿಯಿಂ ಜೀವಿಸುತ।
ಹೆತ್ತ ತಾಯ್ತಂದೆ ಘನವೆಂದು ತಿಳಿವ ನಿಜ।
ಭಕ್ತ ತಾ ಶರಣ– ಘನಮಠ ॥೨೧॥

ಅಂಗ ಲಿಂಗದ ಸಂಗ। ಮಂಗಲಾತ್ಮಕವೆಂದು।
ಸಂಗ ಸಜ್ಜನರ। ಸಹವಾಸದಿರುವ ನಿಜ।
ತುಂಗ ಶಿವಶರಣ– ಘನಮಠ ॥೨೨॥

ವಾಣಿಯೋಳ್ ಸತ್ಯತೆಯು। ಪ್ರಾಣಿಯೋಳ್ ದಾತೃತ್ವ।
ಮಾಣಿ ನಿಗ್ರಹತೆ। ಸ್ವಾನುಭವಿ ಸುಖಪೂರ್ಣ।
ಕ್ಷೋಣಿಯೊಳು ಶರಣ– ಘನಮಠ ॥೨೩॥

ನುಡಿ ಸರಳ ನಡೆ ಸರಳ। ಒಡಲ ಕಾಯಕ ಸರಳ।
ಮೃಡಶರಣರಾಚರಣೆ ಬಿಡದಿರುವ ಕಡೆತನಕ।
ದೃಢ ಶರಣ– ಘನಮಠ ॥೨೪॥

ತನ್ನ ತಾನರಿಯಲ್ಕೆ। ಮನ್ನಣೆಯು ಜಗದೊಳಗೆ।
ಪನ್ನಂಗಧರನ ಕೃಪೆಯುಕ್ಕು ಮಾನವಗೆ।
ಉನ್ನತದ ಪದವಿ– ಘನಮಠ ॥೨೫॥

ಇಂದ್ರಿಯಂಗಳಿಗಧಿಕ। ಕೇಂದ್ರವಾಗಿಹ ಮನವ।
ಸಾಂದ್ರತರವಾಗಿ ಸ್ವಾಧೀನವಿಹ ನರಗೆ।
ಇಂದ್ರಪದವಕ್ಕು– ಘನಮಠ ॥೨೬॥

ನಂಬಿಗೆಯ ಕಾರಣವು। ಸಾಂಭನೊಲಿಯಲ್ಕೆ ಮನ।
ದ್ವಂಬಲದಿ ಬೇರೆ ನೆನೆಯದಿರಲೆಂದೆಂದು।
ಶಂಭು ತಾನೊಲಿವ– ಘನಮಠ ॥೨೭॥

## ★ ದೇವರ ಅಸ್ತಿತ್ವದ ವಚನ ★

ನಂಬಿ ನೀ ಕರಿಯಲ್ಕೆ। ಕಂಬದೋಳಿಹ ಶಿವನ।
ಹಂಬಲಿಸು ಅನ್ಯ ವಿಷಯಾಶೆಯೊಳು ಮನಕೆ।
ಇಂಬುಗೊಡಬೇಡ- ಘನಮಠ ॥೨೮॥

ಮನಸಿಜಾರಿಯ ನೆನಹು। ಮನದಿ ನೆಲೆಗೊಳ್ಳಲ್ಕೆ।
ಸೊಣಗರ ಭಯವು। ನಿನಗೇಕೆ ಅಪಮೃತ್ಯು।
ಕನಸಿನಂತಕ್ಕು- ಘನಮಠ ॥೨೯॥

ಬಂಧು ಭಾಂಧವರೆಂನು। ಹೊಂದದಿರು ಅನ್ಯರನು।
ಸಂದೇಹ ಬಿಡದುದಂದುಗವು ಲೋಕಕ್ಕೆ।
ಬಂಧು ಶಿವನೊಬ್ಬ- ಘನಮಠ ॥೩೦॥

ಉಣಲುಡಲು ವಸ್ತ್ರಾನ್ನ। ನುಡಿಯಲ್ಕೆ ಶಿವನಾಮ।
ನಡೆಯಲ್ಕೆ ಶರಣ ಪಥವುಂಟು ಮಾನವಗೆ।
ದೃಡ ಬೇಕು ಮನದಿ- ಘನಮಠ ॥೩೧॥

ಬಂಧು ಬಳಗದೊಳಿರಲು। ಬಂಧನವು ಹೆಚ್ಚುವದು।
ಇಂಧುಧರ ನಾಮ ನೆನೆಯಲ್ಕೆ ಸಂಸಾರ।
ಬಂದನವು ಧೂರ- ಘನಮಠ ॥೩೨॥

ನರರ ಸ್ತುತಿಗಿಂತಲೂ। ಹರಧ್ಯಾನ ಮಿಗಿಲೆಂದು।
ಮರೆಯದಿರು ಹರನ ಕರುಣೆಯಿಂ ಕಾಯ್ವನವ।
ನರರಿಂದಲೇನು- ಘನಮಠ ॥೩೩॥

ಜಗದ ಜನರಿಂದೇನು। ಅಘಹೆಂದು ಹೋಗುವದೇ।
ಗಗನ ತಾರೆಗಳ ಎಣಿಸಲ್ಕೆ ಫಲವೇನು।
ಅಗಜೆ ಪತಿದೈವ- ಘನಮಠ ॥೩೪॥

ಜನಮರುಳನಾಗದೇ। ಮನಸಿಜಾರಿಯ ಧ್ಯಾನ।
ದಿನರಾತ್ರಿ ಬಿಡದೆ ನೆನೆಯಲ್ಕೆ ಮನಸಿನಾ।
ಘನ ಭಯವು ದೂರ– ಘನಮಠ ||೩೫||

ಸಾಧು ಸತ್ಪುರುಷರನು। ಆದರಿಸು ಮುದದಿಂದ।
ಸಾಧಿಸೈ ಭಕ್ತಿ ಜ್ಞಾನ ವೈರಾಗ್ಯವನು।
ಭೇದ ತರವಲ್ಲ– ಘನಮಠ ||೩೬||

## ★ ಮಾನವನೇ ಮಹಾದೇವ ವಚನ ★

ಭಾವಜಾರಿಯೆ ವಿಶ್ವ। ಜೀವರೊಳು ತಾನಿದ್ದು।
ಈಯ್ವ ಸುಖದುಃಖ ಜೀವಿಗಳ ಕೃತಕರ್ಮ।
ಭಾವನೆಯೆ ಮುಖ್ಯ– ಘನಮಠ ||೩೭||

ದೇವನಿಹನೆಂದು ನರ। ಭಾವಿಸಲ್ಕವತನ್ನ।
ಜೀವನದ ಕಾರ್ಯ ಗೆಯ್ಯುತಿರಲಂತ್ಯಕ್ಕೆ।
ದೇವ ತಾನಾಗ್ವ– ಘನಮಠ ||೩೮||

ಶಂಕಿಸದೆ ಮಾನವನು ಕಿಂಕರತ್ವದಿ ನಿತ್ಯ।
ಶಂಕರನ ಸೇವೆ ದೃಢವಾಗಲವ ಸತ್ಯ।
ಶಂಕರನೆ ತಾನು– ಘನಮಠ ||೩೯||

ಮಾನವನು ದಿನ ನಿತ್ಯ। ಜ್ಞಾನಿಗಳ ವಡನಾಟಿ।
ಸ್ವಾನುಭವಪೂರ್ಣ ವಿಶ್ವದೊಳಗವ ತಾನು।
ಧೇನುವಿನ ಸಮನು– ಘನಮಠ ||೪೦||

ದೃಢಭಕ್ತಿಯಿಂ ಮನುಜ ವಡಲಿನೊಳು ಶಿವಭಾವ।
ಬಿಡದಿರಲು ಭಕ್ತ ಪೊಡವಿಯೊಳಗಂತ್ಯಕ್ಕೆ।
ಮೃಡನು ತಾ ಮನುಜ– ಘನಮಠ ||೪೧||

## ★ ನರಜನ್ಮದ ಮುಖ್ಯತ್ವ ವಚನ ★

ನರಜನ್ಮ ಬಂದಿರಲು। ಹರ ಭಕ್ತಿ ಇಲ್ಲದಿರೆ।
ಕುರಿ ಕೋಣ ಕೊಬ್ಬಿ। ಗ್ರಾಮ ದೇವತೆ ಎದುರು।
ಕೊರಳು ಕೊಯ್ದಂತೆ– ಘನಮಠ ॥೪೨॥

ಹಲವು ಜನ್ಮದ ಪುಣ್ಯ। ಚಲುವರನಾಗಿರುವಿ।
ಬೆಲೆ ಬಾಳ್ವ ದೇಹವಿರುವಾಗ ಪರಶಿವನ।
ನೆಲೆಯರಿಯೋ ಬೇಗ– ಘನಮಠ ॥೪೩॥

ಇಂದು ನಾಳೆನ್ನದಿರು। ಮಂದಮತಿಯಾಗದಿರು।
ದಂದುಗವು ಬಹಳ ಕಾದಿಹುದು ಜಾಗ್ರದಲಿ।
ಇಂದುಧರನರಿಯೋ– ಘನಮಠ ॥೪೪॥

ಶರೀರ ಸತಿಸುತರು ಧನ। ಸ್ಥಿರವಲ್ಲವೆಂದು ನೀ।
ಅರಿದರಿಂದು ಮಿಥ್ಯ ಮೋಹದೊಳು ಗತಿಸಿದೊಡೆ।
ದೊರಕುವದೆ ಜನ್ಮ– ಘನಮಠ ॥೪೫॥

ಶಿವನೇಕೆ ಹುಡುಕುವಿಯೊ। ಅವನಿಯೊಳಗವನಿಲ್ಲ।
ಭುವನದೊಳಗಿರುವ। ಸದುಹೃದಯರಾ ಆತ್ಮ।
ಶಿವ ನಿಲಯ ಸತ್ಯ– ಘನಮಠ ॥೪೬॥

ಅರಿದು ನೀ ನೋಡಲ್ಕೆ। ಹರನು ನಿನ್ನೊಳಗಿರುವ।
ಅರಿಯದಿರೆ ದುರುಳ। ದುರ್ಜನನು ನೀನಾಗಿ।
ಮರುಳುವಿಯೊ ಧರೆಗೆ– ಘನಮಠ ॥೪೭॥

ಚಿಂತೆಯನು ದೂರ್ಮಾಡಿ। ಅಂತಕಾರಿಯ ನೆನೆಯೊ।
ಭ್ರಾಂತಿ ದೂರಾಗಿ ಭವ ನಾಶವಾಗಲ್ಕೆ।
ಅಂತ್ಯವಿದೆ ಜನ್ಮ– ಘನಮಠ ॥೪೮॥

ಅರುವು ಮರವುಗಳೆರಡು। ನರನಿನ್ನ ದೇಹದೊಳು।
ಅರುವಿನಿಂ ಮರವ ನಿಗ್ರಹಿಸೆ ನಿಶ್ಚಿಂತ।
ದೊರಕುವದು ಮುಕ್ತಿ– ಘನಮಠ ॥೪೯॥

ದಯವು ಧರ್ಮಕೆ ಮೂಲ। ಭಯವು ಭ್ರಾಂತಿಗೆ ಮೂಲ।
ನಯನಂಗಳೆರಡು ನೋಟಕ್ಕೆ ಮುಕ್ತಿಗೆ।
ನಯಭಕ್ತಿ ಮೂಲ– ಘನಮಠ ॥೫೦॥

ಯೋಗಿಯಾಗಲು ನರನು। ಭೋಗದಾಶೆಯ ತೊರೆದು।
ತ್ಯಾಗ ಗುಣಬೇಕು ವಿಷಯದೊಳು ಯೋಗಕ್ಕೆ।
ತ್ಯಾಗವೇ ಮುಖ್ಯ– ಘನಮಠ ॥೫೧॥

ನುಡಿಯೊಳಗೆ ಸತ್ಯತೆಯು। ನಡೆಯೊಳತಿಜಾಗ್ರತೆಯು।
ಒಡಲೊಳಗೆ ಪ್ರಾಣಿದಯೆ ಪೂರ್ಣವಾಗಲ್ಕೆ।
ಮೃಡನಂತೆ ಮರ್ತ್ಯ– ಘನಮಠ ॥೫೨॥

ಇರಿವೆ ಕರಿ ಜೀವರೊಳು। ಹಿರಿದಾದ ನರಜನ್ಮ।
ದೊರಕಿರುವ ಸಮಯ। ಅರಿದು ಆಚರಿಸದಿರೆ।
ನರಜನ್ಮ ವ್ಯರ್ಥ–– ಘನಮಠ ॥೫೩॥

ಹರನೊಲಿಮೆಯಿಂದ ಈ। ನರಜನ್ಮ ದೊರಕಿರಲು।
ಅರಿದ ಭವತತ್ವ ತಿಳಿಯದಿರೆ ನರಜನ್ಮ।
ದೊರಕದೆಂದೆಂದೂ– ಘನಮಠ ॥೫೪॥

ಇಂದುನಾಳೆನ್ನುತಲಿ। ಮಂದಮತಿಯಾಗದಿರು।
ಇಂದುಧರ ತತ್ವ ತಿಳಿಯಲ್ಕೆ ಜೀವನದಿ।
ಸಂದೇಹ ಬೇಡ– ಘನಮಠ ॥೫೫॥

ಅಪ್ಪ ಅವ್ವಾಯೆಂದು। ಉಪ್ಪರಿಗೆ ಮನೆಯೆಂದು।
ಮುಪ್ಪುರ ಹರನ ಮರೆಯೆ ಜವನಾಳುಗಳು।
ಜಪ್ಪಿಸುತ್ತಿಹರು– ಘನಮಠ ॥೫೬॥

ಅಂತಕಾರಿಯ ಮರೆದು। ಚಿಂತಿಸುತ ಸತಿಸುತರ।
ಭ್ರಾಂತಿಯಿಂ ದಿನವಗಳೆಯಲ್ಕೆ ಕರುಣೆಯದು।
ಅಂತಕನಿಗಿಲ್ಲ- ಘನಮಠ ॥೫೭॥

ಹಣವಿರುವ ಪರ್ಯಂತ ಜನಮೆಚ್ಚಿಗೆಯು ಜಗದಿ।
ಗಣನಾಥ ಶಿವನು। ಹಣವನಾಳಿಸ ನಿನ್ನ।
ಗುಣಬೇಕು ಶಿವಗೆ- ಘನಮಠ ॥೫೮॥

ಶರೀರ ಶಾಶ್ವತವಾಗಲರಿಯೋ ನೀ ಹರತತ್ವ॥
ಬರಿದೇಕೆ ಸ್ವಪ್ನ ಸಂಸಾರದೊಳಗಳಿಯ।
ತಿರಿಗುಟ್ಟುಸಾವು- ಘನಮಠ ॥೫೯॥

ಕನಕಕಾಮಿನಿಯಾಶೆ। ಮನಸಿನಿಂದೂರ್ಮಾಡು।
ಮನಸಿಜಾರಿಯನು ದಿನಕ್ಕೊಮ್ಮೆ ನೆನೆಯಲ್ಕೆ।
ಮನುಜನೆನಿಸುವಿಯೋ- ಘನಮಠ ॥೬೦॥

ಮಾನವನು ನಾನೆಂಬ। ಜ್ಞಾನ ಶಾಶ್ವತವಿರಲು।
ಸ್ವಾನುಭವಿಯಾಗಿ ಇಹದಿಂದ ಪರಮುಕ್ತಿ।
ಸ್ಥಾಣುಪದ ಸತ್ಯ- ಘನಮಠ ॥೬೧॥

## ★ ಭಕ್ತಿಯ ಪ್ರಾಧಾನ್ಯ ವಚನ ★

ಭಕ್ತಿ ಮುಕ್ತಿಗೆ ಮೂಲ ಯುಕ್ತಿ ಕಾರ್ಯಕ್ಕೆ ಮೂಲ।
ಶಕ್ತಿಯೇ ಸರ್ವಕ್ಕೆ ಮೂಲ ವಿಷಯಾಶಕ್ತಿ।
ಸಕ್ತ ನರಕಕ್ಕೆ- ಘನಮಠ ॥೬೨॥

ಶಿವನೊಲಿಮೆಯಾಗಲ್ಕೆ। ಭುವನದೊಳು ಮಾನವನ।
ಭವದೊಳಗೆ ಬೆರೆದು ಬೆರೆಯದಂತಿರಲವನೆ।
ಅವನಿಯೊಳ್ ಶರಣ- ಘನಮಠ ॥೬೩॥

ತಂದೆತಾಯ್ಗಳ ಸೇವೆ| ಭಂಧು ಬಳಗದ ಸೇವೆ|
ಒಂದೆ ಮನದಿಂದ ಮಾಡಲ್ಕೆ ಜಗದೆಂದು|
ಕುಂದು ಬರದಯ್ಯ- ಘನಮಠ ||೬೪||

ತನುವಿನೋಳ್ ಮಾನವಗೆ| ವಿನಯ ಮೊದಲಿರಬೇಕು|
ಘನತೆ ಪಡೆಯಲ್ಕೆ| ವಿನಯ ವಿಶ್ವದಿ ಮುಖ್ಯ|
ಮನುಜರೆಲ್ಲರಿಗೆ- ಘನಮಠ ||೬೫||

ಗುರು ಹಿರಿಯರೆಲ್ಲರಿಗೆ| ಶಿರಬಾಗಿ ನಡೆಯುತ್ತ|
ಹಿರಿದೆಂಬ ಭಾವ ಮನದಿಂದ ತೊರೆಯಲ್ಕೆ|
ಸಿರಿಸಂಪದಹುದು- ಘನಮಠ ||೬೬||

ನರನಾಗಿ ಜನಿಸಿ ಜಗ| ದುರುವಿನಿಂ ಮಾನವನು|
ಗುರು ಕರುಣ ಪಡೆದು| ನಡೆಯಲವನಂತ್ಯಕ್ಕೆ|
ಶರಣ ತಾನಾಗ್ವ- ಘನಮಠ ||೬೭||

ಕಾಯ ಗುಣವಳಿದು ನಿರ್ಮಾಯ ಮಾನಸನಾಗಿ|
ನ್ಯಾಯವಾದುದನೆ ಗೈಯ್ಯಲವ ವಿಶ್ವದೊಳು|
ಸಾಯನೆಂದೆಂದೂ- ಘನಮಠ ||೬೮||

ಚಿತ್ತ ಚಂಚಲವಿಹುದು| ನಿತ್ಯನಲ್ಲನು ನರನು|
ಗೊತ್ತಾಗದೆಂದೂ ತಾನಿರುವ ಕಟ್ಟಳೆಯು|
ಸತ್ತರೂ ಸಿಗದು- ಘನಮಠ |೬೯||

ಅಸುವಳಿವ ಮುನ್ನನೀ| ಪಶಪತಿಯ ನೆನಹಿನೊಳು|
ವಿಷಯೇಚ್ಛೆಯಳಿದು| ಮತಿವಂತನಾಗಲ್ಕೆ|
ಯಶವಂತ ಜಗದಿ- ಘನಮಠ ||೭೦||

ಭವನಾಶವಾಗಲ್ಕೆ| ಶಿವನಾಮರಸನೆಯೊಳು|
ಅವನಿಯೊಳಿರುವ ಪರಿಯಂತ ಮಾನವನು|
ಸವಿನಿಸಲು ಮುಕ್ತ- ಘನಮಠ ||೭೧||

ಭಕ್ತಿಯುಳ್ಳಡೆ ಮನುಜ। ಯುಕ್ತನಾಗುವ ಭವಧಿ।
ಭಕ್ತಿ ಇಲ್ಲದಲೆ ಮಾನವಗೆ ಜನ್ಮಾಂತ।
ಮುಕ್ತಿಯದು ಕಾಣ— ಘನಮಠ ॥೭೨॥

ಅಂತಕಾರಿಯ ಧ್ಯಾನ। ಕಿಂತಹೆಚ್ಚಿನದಿಲ್ಲ।
ಚಿಂತೆ ಕಳೆಯುವದು। ಮಾನವನ ಮರ್ತ್ಯದೊಳು।
ಭ್ರಾಂತಿಯಿಂ ದೂರ— ಘನಮಠ ॥೭೩॥

ಸತಿಸುತರ ಭ್ರಾಂತಿಯೊಳು। ಮತಿರಹಿತನಾಗದಿರು।
ತಿತಿ ಗರಳ ಶಿವನ ಮೊರೆದು। ಮಾನವ ನೀನು।
ಪತಿತನಾಗದಿರು— ಘನಮಠ ॥೭೪॥

ದೇವನೊಲಿಯಲ್ಕೆ ಜಗ। ಸೇವೆಯೆ ಕಾರಣವು।
ಭಾವದೊಳಗೆಲ್ಲಾ ಪರಿಶುದ್ಧನಾಗಲ್ಕೆ!
ದೇವಸಮ ಮನುಜ— ಘನಮಠ ॥೭೫॥

ಹರ ಭಜನೆ ಗುರುಸೇವೆ। ಶರೀರವಿರುಪರಿಯೆಂತ।
ಪರಿಶುದ್ಧ ಮನದಿ ಮಾಡಲ್ಕೆ ಮಾನವನು।
ಶರಣ ತಾನಹನು— ಘನಮಠ ॥೭೬॥

ಅಂದಿಂದು ಮುಂದೆಂದು। ಸಂದೆಹ ತರವಲ್ಲ।
ಇಂದುಧರ ಶಿವನೆ ಭಜನೆಯರ್ಚನೆಗೈಯ್ಯ
ಲಂದೆ ನಿಜ ಮುಕ್ತ— ಘನಮಠ ॥೭೭॥

ದೇವರಧ್ಯಾನವದು ಭಾವದೋಳ್ ತುಂಬಿರಲು।
ಯಾವದನು ಬಯಸೆ ಸಿದ್ಧಿಯದು ಇಹಪರದಿ।
ಯಾವಾಗಲುಂಟು— ಘನಮಠ ॥೭೮॥

ತಂದೆ ತಾಯ್ಗಳನೆಂದೂ। ನಿಂದೆಯಾಡಲಿಬೇಡ।
ಬಂಧನವಕ್ಕು ಬಲುಬಾಧೆ ವಿಶ್ವದೊಳು।
ನಿಂದೆ ನಿನಗಕ್ಕು— ಘನಮಠ ॥೭೯॥

ಶಕ್ತಿ ಯುಕ್ತಿಗಳಲ್ಲಿ। ಭಕ್ತಿಯೇ ಬಲು ಶ್ರೇಷ್ಠ।
ಶಕ್ತಿಯಿಂ ಮಡಿದ ರಾವಣನು ಹಣಮಂತ।
ಭಕ್ತಿಯಿಂದಮರ- ಘನಮಠ ॥೮೦॥

ತರುಳ ಮಾರ್ಕಂಡೇಯ। ಹರನ ಮೆಚ್ಚಿಸಿ ತಾನು।
ಸ್ಥಿರಜೀವಿಯಾದ ಭಕ್ತಿಯಿಂದಲಿ ಜಗದಿ।
ವರ ಭಕ್ತಿನರಗೆ- ಘನಮಠ ॥೮೧॥

ಇಂದು ಧರನ ಭಕ್ತಿಯಿಂ। ತಂದೆ ತಾಯ್ಗಳ ಕಷ್ಟ।
ಬಂಧನವ ಕಳೆದ ಕಂದ ಮಾರ್ಕಂಡೇಯ।
ಇಂದಿಗೂ ಸ್ಥಿರನು- ಘನಮಠ ॥೮೨॥

ಅಂದಿಂದು ಮುಂದೆಂದು। ಸಂದೇಹಗೊಳಬೇಡ।
ಇಂದಿರುವ ದಿನವೇ ಶುಭವೆಂದು ಶಿವಭಕ್ತಿ।
ಯಿಂದ ಸ್ಥಿರನಾಗೋ- ಘನಮಠ ॥೮೩॥

ಇಷ್ಟವದು ಸಿದ್ಧಿಸಲು। ಸೃಷ್ಟಿಗೀಶನ ಭಜಿಸು।
ಇಷ್ಟಾರ್ಥ ಕಳೆವ। ಭ್ರಷ್ಟದೈವವ ನೆನೆದು।
ಕೆಟ್ಟು ಹೋಗದಿರು- ಘನಮಠ ॥೮೪॥

ಮನವು ಮರ್ಕಟ ಪ್ರಾಯ। ತನುವು ಶಾಶ್ವತವಲ್ಲ।
ದಿನ ದಿನಕೆ ದೇಹ ಮುಪ್ಪಾಗಿ ಮಂದಾಗಿ।
ಕುಣಿಯೆ ಗತಿ ನಿನಗೆ- ಘನಮಠ ॥೮೫॥

ಕಾಯವಿರುವಾಗಲೇ। ಮಾಯಯಾ ಪರಿ ತಿಳಿದು।
ಹೇಯವಾದುದನೆ ದೂರ್ಮಾಡಿ ದೇಹ ನೀ।
ಮಾಯ ನೆಂದಿನಿಸೋ- ಘನಮಠ ॥೮೬॥

ಬಾಗಿ ಬೆಳದಿಹ ಭತ್ತ। ನಾಗಭೂಷಣರೂಪಿ।
ಯೋಗಿ ಜಂಗಮಗೆ। ನೈವೇದ್ಯರ್ಪಿತವು।
ಬಾಗಿ ನಡೆಲೇಸು- ಘನಮಠ ॥೮೭॥

ಸೀಟಾಗಿ ಬೆಳೆದಿರುವ। ಚೋಟು ಸಜ್ಜೆಯು ಧಾನ್ಯ।
ಕಾಟ ಕಳೆಯಲ್ಕೆ ಯಮನೂರ ಪೀರನಿಗೆ।
ಊಟ ತಾನಾಯ್ತು- ಘನಮಠ ॥೮೮॥

ಸತ್ವ ರಜ ತಮವೆಂಬ। ನಿತ್ಯದಾವಾಹಾರ।
ಹಾರದೊಳು ಚಿತ್ತ। ಜಾರಿಯು ಸೇವೆ ಗೈಯ್ಯುವಾ।
ಭಕ್ತಂಗೆ। ಸತ್ವಾನ್ನ ಲೇಸು- ಘನಮಠ ॥೮೯॥

ಕುಲವಂತನಾದರೂ। ಛಲವಂತನಾಗದಿರೆ।
ಚಲುವ ಶಿವಲಿಂಗದಾ ಒಲವೆ ಇಲ್ಲದ ಮನುಜ।
ಕುಲಗೇಡಿ ಜಗದಿ- ಘನಮಠ ॥೯೦॥

ಬಸವಾಂಶ ಸಂಭೂತ। ವಸುಧಿಯೊಳ।
ಗವಭಕ್ತ ಪಶುಪತಿಯ। ಪ್ರೇಮವಿಲ್ಲವಿಹ ಮಾನವನು।
ಬಸವಾಂಶನಲ್ಲ- ಘನಮಠ ॥೯೧॥

ಗುರು ಸೇವೆಯನು ತನ್ನ। ಶರೀರದಿಂ ಮಾಡದಿಹ।
ನರನಜ್ಞ ಧರೆಯೊಳಗೆ। ಮುಂದಿನಾ ಜನ್ಮದೊಳು।
ಕುರಿಯಾಗಿ ಬಾಳ್ವ- ಘನಮಠ ॥೯೨॥

## ★ ಭಕ್ತ ಜಂಗಮ ಸ್ವರೂಪ ವಚನ ★

ಗುರುಲಿಂಗ ಜಂಗಮಾ। ಚರಣೆಯನು ಪ್ರತಿ ನಿತ್ಯ।
ಅಂದು ಆಚರಿಸದೆ ಇರುತಿರುವ ನರ ಮುಂದೆ।
ಕರಡಿಯ ಜನ್ಮ- ಘನಮಠ ॥೯೩॥

ನಸುಕಿನೊಳು ತಾನೆದ್ದು। ಪಶುಪತಿಯ ಧ್ಯಾನಿಸುತ।
ನೊಸಲಿಂಗೆ ಭಸ್ಮ। ಧರಿಸುವ ನಿಜಭಕ್ತ।
ಬಸವಾಂಶನವನು- ಘನಮಠ ॥೯೪॥

ಅಂಗದ ಮೇಲ್ಲಿರುತ| ಲಿಂಗವನು ಬಿಡದಿರುವ|
ಜಂಗಮ ವೇಷಕ್ಕೆ ಮಣಿದು| ನಮಿಸುವ ನರನು|
ತುಂಗ ಶಿವ ಭಕ್ತ– ಘನಮಠ ||೯೫||

ಶಿವನಾಂಶಂಭೂತರೇ| ಭುವಿಯೊಳಗೆ ಜಂಗಮರು|
ಶಿವಧರ್ಮದಾಚರಣೆ ಆಚರಿಸದಿರಲವರು|
ಶಿವನಂಶರಲ್ಲ– ಘನಮಠ ||೯೬||

ಮಂಗಲಾತ್ಮಕವಾದ| ಜಂಗಮಾಚರಣೆಯನು|
ಅಂಗದೊಳರಿದು| ಆಚರಿಸುವರೆ ಶಿವನು|
ಅಂಗಾಂಶರವರು– ಘನಮಠ ||೯೭||

ತನುಮನವ ನಿಗ್ರಹಿಸಿ| ಮನಸಿನಿಂ ಶಿವ|
ಧರ್ಮ ಅನುವರಿತು ನಿತ್ಯ ಆಚರಿಸುವರೆ ಜಗದಿ|
ತ್ರಿಣಯನ ರೂಪ– ಘನಮಠ ||೯೮||

ನುಡಿಯೊಳಗೆ ಶಿವನಾಮ| ಮೃಡ ಮತಾಚರಣೆಯನು|
ನಡೆಯೊಳಗೆ ನಿತ್ಯವಾಚರಿಸುವ ಜಗದಿ|
ಮೃಡನಂಶಚರನು– ಘನಮಠ ||೯೯||

ಚಿತ್ತಜಾರಿಯ ಮತದ| ಸ್ತುತ್ಯವಾದಾಚರಣೆ|
ನಿತ್ಯವೂ ಬಿಡದಾಚರಿಸುವವ| ವಿಶ್ವದೊಳು|
ಸತ್ಯ ಚರವರನು– ಘನಮಠ ||೧೦೦||

ಕನಕ ಕಾಮಿನಿಯಾಶೆ| ಕನಸಿನೊಳು ತಾ ನೆನೆಯ|
ಮನವ ನಿಗ್ರಹಿಸಿ ಮನಸಿಜನ ಮಣಿಸಿದವ|
ಘನವಿರತ ಜಗದಿ– ಘನಮಠ ||೧೦೧||

ಆಶೆ ಮೂರನು ತೊರೆದು| ಈಶ ಮತದಾಚರಣೆ|
ಲೇಸೆನಿಸುವಂತೆ ಬಿಡದಿರಲು ನಿಜ ಸ|
ನ್ಯಾಸಿಯನ ಜಗದಿ– ಘನಮಠ ||೧೦೨||

ಡಾಂಬಿಕಾಚರಣೆ ಮನ| ದ್ದಂಬಲದಿ ಬಿಡದಿರುವ|
ಶಂಭು ವೇಶಮೊಳು ಚರಿಸುತಿಹ ಜಂಗಮನ|
ನಂಬದವು ಜಗವು- ಘನಮಠ ||೧೦೩||

ಬಸವಾದಿ ಪ್ರಮಥರಾ| ಹೆಸರಾಂತ ವಚನಗಳ|
ವಸುಧಿಯೊಳು ನಿತ್ಯ ಬೋಧಿಸುತ ಚರಿಸುವವ|
ಪಶುಪತಿಯು ರೂಪ- ಘನಮಠ ||೧೦೪||

ಜಂಗಮವು ಜಗದೊಳಗೆ| ಜಗವು ಜಂಗಮದೊಳಗೆ|
ಜಂಗಮನ ಬಿಟ್ಟು ಜಗವಿಲ್ಲ ಜಗದ್ದುಟ್ಟು|
ಜಂಗಮವೇ ಮೂಲ- ಘನಮಠ ||೧೦೫||

ಘನಕೆ ಘನವಾಗಿರುವ| ಅಣುವಿಗಣುವಾಗಿರುವ|
ತ್ರಿಣಯನ ರೂಪ ಧರಣಿಯೊಳು ಚರಿಸುವಗೆ|
ಮಣಿಯುವದು ವಿಶ್ವ- ಘನಮಠ ||೧೦೬||

ಸ್ಥಾವರಕೆ ಅಳಿವುಂಟು| ಜಂಗಮಕೆ ಸ್ಥಿರವುಂಟು|
ಭಾವ ನಿರ್ಭಾವ ಜಂಗಮದಿ ಶಾಶ್ವತವು|
ಯಾವಾಗಲುಂಟು- ಘನಮಠ ||೧೦೭||

ವಂದಿಸುವೆ ವಿಶ್ವದೊಳು| ಎಂದಿಗೂ ಸ್ಥಿರವಾದ|
ಸುಂದರದ ಶಿವನೇ ವಿಶ್ವದೊಳು ಚರನಾಗಿ|
ಅಂದಿಂದು ಚರಿಪ- ಘನಮಠ ||೧೦೮||

— ಇತಿ ೧೦೮ ನೇ ಪದಕ್ಕೆ ಷಷ್ಠಮ ಪಥ ಮಂಗಲಂ —

## — ಸಪ್ತಮ ಪಥ —

### ★ ನೀತಿಯ ವಚನಗಳು ★

ಅಂಗಗುಣವಳಿಯಲ್ಕೆ। ಸಂಗವಳ್ಳಿಯದಿರಲಿ।
ಅಂಗನೆಯರೊಡನೆ ಅಕ್ಕ ತಂಗಿಯ ಭಾವ।
ಹಿಂಗದಿರೆ ಶರಣ– ಘನಮಠ ॥೧॥

ಮಾನವನು ಮನಸಿನ ಹೀನಗುಣವಳಿಯಲ್ಕೆ।
ಜ್ಞಾನಿಗಳ ಸಂಗ ಒಡನಾಟ ವಿಶ್ವದೊಳು।
ಜೇನು ಸವಿದಂತೆ– ಘನಮಠ ॥೨॥

ದೇಶ ಸೇವೆಯೇ ಜಗದಿ ಈಶ ಸೇವೆಯೆಂದು।
ದಾಸ ಭಾವದೊಳು ಜನಸೇವೆಯನು ಗೈದು।
ಈಶರಾಗಿಹರು– ಘನಮಠ ॥೩॥

ದೀನ ದಲಿತರ ಸೇವೆ ಮಾನವರು ತಾವ್ಮಾಡಿ।
ಕ್ಷೋಣಿಯೊಳು ಕೀರ್ತಿ ಪಡೆದಿಹರು ರಾಷ್ಟ್ರದೊಳು।
ಮಾನವರೆ ಅವರು– ಘನಮಠ ॥೪॥

ಬಂಧು ಬಳಗದ ಸೇವೆ। ತಂದೆ ತಾಯ್ಗುರು ಸೇವೆ।
ಹಿಂದುಳಿದ ದೀನರನುಗಾಲ ಸೇವಿಸೆ ವಿಶ್ವ।
ಬಂಧು ಮಾನವನು– ಘನಮಠ ॥೫॥

ತನ್ನ ಸತಿ ಸುತರಂತೆ। ಅನ್ಯರನು ಭಾವಿಸುತ।
ಭಿನ್ನಿಲ್ಲದಂತೆ ಸರ್ವಸಮತಾವಾದಿ।
ಮನ್ನಣೆಯು ನರಗೆ– ಘನಮಠ ॥೬॥

ತನುವಿನುಪಚಾರದಿಂ। ಜನಸೇವೆಯನು ಮಾಡು।
ಘನ ಜನಾರ್ಧನನವನು ನಿತ್ಯ ತೃಪ್ತನು ಜಗದಿ।
ಜನಸೇವೆ ಮುಖ್ಯ– ಘನಮಠ ॥೭॥

ವಿನಯವಿಲ್ಲದ ವಾಣಿ। ತನಯರಿಲ್ಲದ ಮನೆಯು।
ಇನಿಯನಿರುವಾಗ ಸೇವೆ ಗೈಯ್ಯದ ಸತಿಯು।
ಎನಿತಿದ್ದರೇನು— ಘನಮತ ॥೮॥

ಮಾತು ಅತಿ ಇದ್ದರೂ। ಜಾತಿಹಿರಿದಾದರೂ।
ಪೂತ ಭಾವನೆಯು ಮನದಿಲ್ಲದಿರೆ ಮನುಜ।
ಖ್ಯಾತ ನಿದ್ದೇನು— ಘನಮತ ॥೯॥

ನಿಂದೆ ನಾಲಿಗೆಕೇಡು। ಸಂದೇಹ ಮನಕೇಡು।
ದುಂದುಗಾರಿಕೆಯು ಧನಕೇಡು ಸತಿಗೆ ಸ್ವ।
ಚ್ಛಂದ ತಾ ಕೇಡು— ಘನಮತ ॥೧೦॥

ನುಡಿಯಂತೆ ನಡೆಯಿರಲು। ಮೃಢಧ್ಯಾನ ಮನದಿರಲು।
ಮಡದಿಯನುಕೂಲ ಸಂಸಾರ ಸುಖವಿರಲು।
ಪಡೆವನವ ಮುಕ್ತಿ— ಘನಮತ ॥೧೧॥

ವಾದಿಸುವ ಸತಿ ಕಾಟ। ಸ್ವಾದವಿಲ್ಲದ ಊಟ।
ಆದರಿಲ್ಲದಲೆ ಅಲೆದಾಟ ಮಾನವಗೆ।
ಖೇದ ಬಿಡವೆಂದು— ಘನಮತ ॥೧೨॥

ಉದಯ ಕಾಲದೊಳೈದು। ಮುದದಿಂದ ಮೈದೊಳೆದು।
ಪದುಮಾಕ್ಷ ಸಖನ। ನೆನಹಿನೊಳಗಿರೆ ರುಜೆಯು।
ಒದಗವೆಂದೆಂದೂ— ಘನಮತ ॥೧೩॥

ಕರಚರಣ ಮೊದಲಾದ। ನರನೇಂದ್ರಿಯಾದಿಗಳ।
ದುರಿತ ದುಷ್ಕೃತಿಗೆ ಬಳಸದಿರೆ ಬಾಹ್ಯದೊಳು।
ಪರುಷವಾಗುವವು— ಘನಮತ ॥೧೪॥

ತಂದೆ ತಾಯ್ ಸೇವೆ ಮನ। ದಿಂದ ಮಾಡಲ್ಕೆ।
ನರ ಕಂದಮೂಲಗಳ ತಿಂದು ಮಾಡುವ ತಪದ।
ಗೊಂದಲನೇ ಬೇಡ— ಘನಮತ ॥೧೫॥

ಮಾತಿನೊಳು ಮಿತಿ ಇರಲಿ। ನೀತಿ ನಡೆಯೊಳಗಿರಲಿ।
ಆತುರವು ಬೇಡವೆಲೆ ಮನುಜ ಮಾತಿನೊಳು।
ರೀತಿಗೆಡಬೇಡ- ಘನಮಠ ॥೧೬॥

ತಂದೆ ತಾಯ್ಗುರು ಸೇವೆ। ವಂದೆ ಮನದೊಳು ಮಾಡು।
ಸಂದೇಹ ಬೇಡ ಶಿವಧರ್ಮ ತತ್ವದೊಳು।
ಕುಂದು ನಿನಗಿಲ್ಲ- ಘನಮಠ ॥೧೭॥

ಸತಿ ಪತಿಗಳೊಳು ಭಾವ। ಜೊತೆಯಾಗಿ ನಡೆಯುತಿರೆ।
ಸುತರೆಲ್ಲ ಸೇವಾ ತತ್ಪರರ ಸಂಸಾರ।
ಚ್ಯುತಿಯಾಗದೆಂದೂ- ಘನಮಠ ॥೧೮॥

ಮಡದಿಯುಳ ಮಾತಿನಲಿ। ನಡೆಯುತಿಹ ಮಗನಿರಲು।
ಕಡು ಕೇಡು ತಂದೆ। ತಾಯ್ಗಳ್ಗೆ ಮನೆತನಕೆ।
ಬಿಡದೆಂದು ವಿಧಿಯು- ಘನಮಠ ॥೧೯॥

ಅತ್ತೆ ಮಾವರ ಸೇವೆ ತೊತ್ತಾಗಿ ಮಾಡುತಿರೆ।
ಉತ್ತಮರ ಮಗಳು ಸೊಸೆಯಾದ ಮನೆತನಕೆ।
ನಿತ್ಯವದು ಸಿರಿಯು- ಘನಮಠ ॥೨೦॥

ವರುಷವೆಂಟಾಗಲ್ಕೆ। ನೆರೆಮನೆಗೆ ಅರಮನೆಗೆ।
ಪರವೂರ ಸಂತೆ ಮಾಡಲ್ಕೆ ಮಗಳನ್ನು।
ಮರೆದಟ್ಟಬೇಡಾ- ಘನಮಠ ॥೨೧॥

ತಾತ ಗುರುಹಿರಿಯರನು। ಪ್ರೀತಿಯಿಂದಾದರಿಸು।
ಮಾತು ಬಂದಾಗ ಮೌನವಿರೆ ಮಾನವಗೆ।
ಯಾತರ ಕಲಹ- ಘನಮಠ ॥೨೨॥

ಬಾಗಿ ಬೆಳದಿಹ ಬಿದಿರು। ನಾಗಭೂಷಣ ಸೇವೆ।
ಭೋಗಿ ತ್ಯಾಗಿಗಳ ಮೆರವಣಿಗೆ ಪಲ್ಲಕ್ಕಿ।
ಸಾಗದಂಡಿಗೆಯು- ಘನಮಠ ॥೨೩॥

ನೀಟಾಗಿ ಬೆಳೆದಗಣಿ। ಆಟಪಾಟಗಳಾಡಿ।
ಚೋಟುದರಕಾಗಿ। ತಿರುಗುತಿಹ ಡಂಬರಿಗೆ।
ಗೂಟ ತಾನಾಯ್ತು- ಘನಮಠ ॥೨೪॥

ವಿನಯ ವಿಶ್ವದ ಶೋಭೆ। ತನಯ ಮಂದಿರ।
ಶೋಭೆ ಮನದಿಂದ ಮಾಡ್ವ ಶಿವಭಜನೆ ಮಾನವಗೆ।
ಅನುಗಾಲ ಶೋಭೆ- ಘನಮಠ ॥೨೫॥

ಶಿಶುವು ಸದನಕೆ ಶೋಭೆ। ರಸನೆ ಶುಭನುಡಿ ಶೋಭೆ।
ನಸುನಗುವ ಸತಿಯು। ಸಂಸಾರದಿರೆ ಶೋಭೆ।
ನೊಸಲ ಕಳೆ ಭಸ್ಮ- ಘನಮಠ ॥೨೬॥

ಗುಣವಂತರೇ ಜಗದಿ। ತ್ರಿಣಯನೊಲಿಮೆಗೆ ಮುಖ್ಯ।
ಹಣವಂತರೆಂದೂ। ಗುಣವಂತರಾಗದಿರೆ।
ಎಣಿಕೆಯೊಳಗಿಲ್ಲ- ಘನಮಠ ॥೨೭॥

ಅರುವು ದೇಹದ ಗುರುವು। ಮರುವು ಮಾನವ ವೈರಿ।
ಶರೀರದಿರುತಿರುವ ಅರವು ಮರವುಗಳಲ್ಲಿ।
ಅರಿದು ಹರನಾಗೊ- ಘನಮಠ ॥೨೮॥

ಹಣವಿದ್ದ ಕಾಲಕ್ಕೆ। ಗುಣವಂತ ನೀನಾಗು।
ಗುಣವಿಲ್ಲದವನೇ ಸಂಸಾರ ವಿಶ್ವದೊಳು।
ಗಣನೆಯೊಳಗಿಲ್ಲ- ಘನಮಠ ॥೨೯॥

ಪತಿಯ ಸೇವೆಯು ಸತಿಗೆ। ಅತಿಮುಖ್ಯವೆಂದರಿದು।
ಚ್ಯುತಿ ಬಾರದಂತೆ ನಡೆಯಲಾ ಸತಿಮಣಿಯು।
ಪತಿವ್ರತೆಯು ಜಗದಿ- ಘನಮಠ ॥೩೦॥

ಗಂಡನಿಲ್ಲದ ವೇಳೆ। ಮಂಡೆ ಬಾಚುವ ಸತಿಯು।
ಕಂಡಕಂಡದನೆ ಕಾಮಿಸುವ ಕಾಮಿನಿಯು।
ಮಿಂಡರ ಗೂಳಿ- ಘನಮಠ ॥೩೧॥

ಜನನಕೆ ತಾನಂಜಿ। ತನಯರಂ ಸಂತೈಸಿ।
ಮನೆತನದ ಮಾನ ತನ್ನದೆಂತೆಂಬ ಸತಿ।
ಘನ ಪುಣ್ಯವಂತಿ– ಘನಮಠ ||೩೨||

ಹತ್ತಾರು ಹಡೆದರೂ। ಚಿತ್ತಶುದ್ಧಿಯದಿಲ್ಲ।
ಹೆತ್ತ ಮಕ್ಕಳೊಳು। ಮೋಹವಿಲ್ಲದ ನಾರಿ।
ವ್ಯರ್ಥ ವಿಶ್ವದೊಳು– ಘನಮಠ ||೩೩||

ಮಾನವೇ ಧನವಾಗಿ। ಸ್ವಾನುಭವಿ ತಾನಾಗಿ।
ಪ್ರಾಣದೊಲು ತನ್ನ। ಪತಿಸೇವೆ ಗೈವ ಸತಿ।
ಮಾನಿನಿಯು ಜಗದಿ– ಘನಮಠ ||೩೪||

ಮಾತು ಕಲಿತಿಹನೆಂದು। ನೀತಿಯನು ಬಿಡಬೇಡ।
ಚಾತುರ್ಯ ಬೇಡ। ಸಾಧು ಸಜ್ಜನರೊಡನೆ।
ಪ್ರೀಯಿರೆ ನೀತಿ– ಘನಮಠ ||೩೫||

ತಂದೆ ತಾಯ್ಗಳಲಿ ಮನೆ। ಮಂದಿಯೊಳು ಮಡದಿ।
ಸಂದೇಹಗೊಳಲು ಕ್ಷಣಕ್ಷಣಕೆ ನಿನಗದೇ।
ಕುಂದು ಮುಂದಕ್ಕು– ಘನಮಠ ||೩೬||

ಊರಿಗುಪಕಾರವದು। ಯಾರು ಕೇಳುವರಿಲ್ಲ।
ಮಾರಾರಿ ಹರನ ಭಜಿಸಿ ನಿನ್ನಯ ಕರ್ಮ।
ದೂರಮಾಡೆಂದ– ಘನಮಠ ||೩೭||

ಪರವುಳ್ಳ ದೇವರನು। ಅರುವುಳ್ಳ ಮನುಜರನು।
ಚಿರಕಾಲ ನಂಬಿ ಭಜಿಸಲ್ಕೆ ನರ ನೀನು।
ಸ್ಥಿರ ಸುಖಿಯು ಕಾಣೋ– ಘನಮಠ ||೩೮||

ಆಡದನೃತವನೆಂದು। ಮಾಡದಿರೆ ಪರನಿಂದೆ।
ಬೇಡಿದರೆ ನಾಸ್ತಿ ಎನದಿರುವ ನಾಲಿಗೆಯು।
ನಾಡಿಗೊಳ್ಳಿಯದು– ಘನಮಠ ||೩೯||

ಶರೀರವಿರುವಂತ್ಯಕ್ಕು। ಹರನಿವ ತಾ ತಿಳಿದು।
ನರನಿಂದ್ರಿಯಗಳ ಹರಗೆ ಬಳಸುವ ನರಗೆ।
ಹರನೊಲಿವನು ಸತ್ಯ- ಘನಮಠ ॥೪೦॥

ಬುದ್ಧಿಯುಳ್ಳವ ನೀನು। ಎದ್ದಾಗ ದೇವರನು।
ಶುದ್ಧ ಭಾವದಲಿ ನೆನೆಯಲ್ಕೆ ನಿನಗಿದ್ದ।
ಬುದ್ಧಿಯೇ ಮೇಲು- ಘನಮಠ ॥೪೧॥

ದೇಹಕ್ಕೆ ಜೊತೆಯಾಗಿ ಸ್ನೇಹ ವಳ್ಳಿಯದಿರಲಿ।
ಬಾಹ್ಯದಾಚರಣೆ ಬಹು ಶುದ್ಧವಾಗಲ್ಕೆ।
ದೇಹ ದೇಗುಲವು- ಘನಮಠ ॥೪೨॥

ಶರಿರ ಕೊರಗಿಸಬೇಡ। ಬರಿದೆ ವ್ರತಗಳ ಬೇಡ।
ಅರುವಿಲ್ಲದೆಂದೂ ಆಚರಿಸದಿರೆ ನರನು।
ಹರನೆ ತಾನಹನು- ಘನಮಠ ॥೪೩॥

ಕರಚರಣದಿಂದೆಂದು। ದುರಿತವೆಸಗಲಿ ಬೇಡ।
ಹರಶರಣ ಚರಿತೆ ಪೌರಾಣ ಕೀರ್ತನೆಯ।
ಮರೆಯದಲೆ ಕೇಳೋ- ಘನಮಠ ॥೪೪॥

ಸಂಘದೊಳು ಶಿವನುಂಟು। ಅಂಗದೊಳು ಹರನುಂಟು।
ಅಂಗದೊಳು ಲಿಂಗ ಜಂಗಮವು ಜಗವೆಲ್ಲ।
ಅಂಗಜ ವೈರಿ- ಘನಮಠ ॥೪೫॥

ಹೊತ್ತು ಗೊತ್ತಿನದಲ್ಲ। ವಿತ್ತ ಶಾಶ್ವತವಲ್ಲ।
ಚಿತ್ತಜಾರಿಯನು ನೆನೆಯುತ್ತ ನಾಲಿಗೆಯ।
ಸತ್ಯದೊಳು ಬಳಸೋ- ಘನಮಠ ॥೪೬॥

ತನವು ರೋಗದ ಬೀಡು। ಮನದ ಗತಿ ಬಲುಓಡು।
ಘನವಂತನೆನಿಸಿ ತನು ಶುದ್ಧವಾಗಲ್ಕೆ।
ಎಣಿಸೋ ಶಿವಮಂತ್ರ- ಘನಮಠ ॥೪೭॥

ಅಂಗನೆಯರಾ ಆಶೆ। ಬಂಗಾರದದೊಳು ಬಹಳ।
ಬಂಗಾರದಾಶೆ ಬಯಲಾಗಲಾ ನಾರಿ।
ಮಂಗಲಳು ಜಗಕೆ- ಘನಮಠ ॥೬೮॥

ನಾರಿಯೇ ಸಂಸಾರ। ಸಾರವಾಗಿಹಳವಳು।
ನಾರಿ ತಾ ಮಾರನುಪಟಳವ ಸಿಗ್ರಹಿಸೆ।
ವೀರ ಶಿವಶರಣೆ- ಘನಮಠ ॥೬೯॥

ಕಂಡದನು ಕಾಮಿಸದೆ। ಪಿಂಡಭೋಗವನುಳಿದು।
ಖಂಡೇಂದುಧರ। ಭಾವನೆಯು ಬಲವಾಗಲು।
ಉದ್ದಂಡ ಶಿವಶರಣೆ- ಘನಮಠ ॥೭೦॥

ನಿನ್ನ ಸತಿಯುಳ ತೆರದಿ। ಅನ್ಯ ಸತಿಯುಳ ನೋಡೆ।
ಭಿನ್ನೆಂಬ ಭಾವನತಿಗಳೆಯದಿರೆ ನಿನ್ನ।
ಕಣ್ಣಿನಾ ಕೆಡಗು- ಘನಮಠ ॥೭೧॥

ಆಲಿಯಿಂದಾಲಿಸುವ। ನೀಲಕಂಠನ ನಾಮ।
ಆಲಿಯುದಿ ಸೇರಿ ನೆನಸಲ್ಕೆ ಮಾನಸದಿ।
ಶೀಲ ನೀನಹುದು- ಘನಮಠ ॥೭೨॥

ಶಿವನಾಮವನು ನಿನ್ನ। ಕಿವಿಯಿಂದ ಕೇಳಲ್ಕೆ।
ಭವಹರಿದು ನಿನ್ನ ಬಂಧನವ ಕಳೆಯಲ್ಕೆ।
ಕಿವಿಯೆ ಕಾರಣವು- ಘನಮಠ ॥೭೩॥

ಭೃತ್ಯ ಭಾವದ ಸೇವೆ। ಸಂತ್ಯವಂತರ ಸ್ನೆಹ।
ನಿತ್ಯದೊಳು ನುಡಿವ ನುಡಿ ಸತ್ಯವಾಗಲ್ಕೆ।
ಕರ್ತನೇ ನೀನು- ಘನಮಠ ॥೭೪॥

ಮಣ್ಣಿನಲಿ ನವಧಾನ್ಯ। ಮಣ್ಣಿನಲಿ ಮಣಿಹೇಮ।
ಮಣ್ಣಿಂಗೆ ಕಾದಿ ಮಹಿಪಾಲರಳಿದಿಹರು।
ಮಣ್ಣೆ ಸರ್ವಸ್ವ- ಘನಮಠ ॥೭೫॥

ಮಣ್ಣು ಹೊನ್ನುಗಳ। ಬಣ್ಣಕ್ಕೆ ಮರುಳಾಗಿ।
ಸುಣ್ಣಗಿ ಸುರರು ನರರು ದಾನವರೆಲ್ಲ।
ಮಣ್ಣಾದ್ದರಿಂದೆ- ಘನಮಠ ॥೫೬॥

ತನು ಮನವ ಧನ ಮೂರ। ನನುವಿನಿಂದರಿಯುತ್ತ।
ಇನನಯನ ಕಾರ್ಯಂಗಳಲಿ ಮನ ಧನವೀಯೆ।
ತನುವು ಪರಿಶುದ್ಧ-ಘನಮಠ ॥೫೭॥

ಗಣನೆ ಇಲ್ಲದ ದ್ರವ್ಯ। ಎನಿತಿದ್ದರೂ ನಾಶ।
ಮನದಿಂದಲ್ಲರಗೆ ಮಣಿಯಲಾರದ ತನುವು।
ಕುಣಿಗೆ ಗತಿಯಕ್ಕು- ಘನಮಠ ॥೫೮॥

ಗುರುವಿರಲು ಗ್ರಾಮದೊಳು। ಅರುವಿರಲು ದೇಹದೊಳು।
ಹರನರುವು ನರಗೆ। ಸ್ಥಿರವಾಗಲಾ ನರಗೆ।
ದೊರಕುವದು ಮುಕ್ತಿ- ಘನಮಠ ॥೫೯॥

ಮನವು ಮಾಡಿದ ಕರ್ಮ। ತನುವು ಭೋಗಿಸಬೇಕು॥
ಮನವ ನಿಗ್ರಹಿಸಿ ನೀತಿಯಿಂ ನಡೆಯಲ್ಕೆ॥
ತನುವಿಗೆ ಮುಕ್ತಿ- ಘನಮಠ ॥೬೦॥

ಪಾಪಕಾರ್ಯವಮಾಡೆ ತಾಪ। ಕೊಡುವದು ಮನವು।
ಕೋಪದಿಂ ಮಾನವನು। ಮನವ ಬಂಧನದಿಡಲು।
ತಾಪಸೋತ್ತಮನು- ಘನಮಠ ॥೬೧॥

ಮನದ ಚಂಚಲತೆಯನು। ಅನುವಿನಿಂ ನಿಗ್ರಹಿಸಿ।
ಮನದಿಂದ ಶಿವಮನುವ ಜಪಿಸಲ್ಕೆ ಮನುಜನು।
ಜನುಮ ಸಾರ್ಥಕವು- ಘನಮಠ ॥೬೨॥

ಕಾಯಕವಿರುವಾಗ ಶಿವ। ನಾಯತವನರಿಯಲ್ಕೆ॥
ಮಾಯೆಯಿಂ ದೂರ ಮಾನವನ ಜನ್ಮದಾ।
ಧ್ಯೇಯ ಸಾರ್ಥಕವು- ಘನಮಠ ॥೬೩॥

ಜಾತಿ ಹಿರಿದಾದರೂ ನೀತಿಯಿಲ್ಲದ ಮನುಜ|
ಪಾತಕನು ಎನಿಸಿ ವಿಶ್ವದೊಳಗವನು ಕಿ|
ರಾತನೆನಿಸುವನು- ಘನಮಠ ||೬೪||

ಹಂಕಾರದತಿರೇಕ ಠೇಂಕಾರ ತರವಲ್ಲ|
ಹಂಕಾರದಿಂದ ಅಸುವಳಿದ ರಾವಣನು|
ಕಿಂಕರತೆ ಮೇಲು- ಘನಮಠ ||೬೫||

ಇಂದು ಮಾಡಿದ ದಾನ ಮುಂದೆ ನಿನಗಾಪತ್ತು|
ಬಂದಾಗ ಬಡಡು ಕರೆದಂತೆ ಒದಗುವದು|
ಸಂದೇಹ ಬೇಡಾ- ಘನಮಠ ||೬೬||

ಮಾತು ಮಾತಿಗೆ ಮಥನ| ಆತುರವು ಅತಿಕೇಡು|
ಪ್ರೀತಿಯೊಂದಿರಲಿ ಸರ್ವರ ಸಮಯದೊಳು|
ಸೋತವನೇ ಜಾಣ- ಘನಮಠ ||೬೭||

ಹಲವು ದೇವರಗಿಂತ ಚಲುವ ಶ್ರೀಘನಮಠನು|
ನಿಲಯು ಕೆಲವೂರ ನಿಜವಾಸ ಅಲ್ಲುಂಟು|
ಹಲವು ಕಲೆಗಾರ- ಘನಮಠ ||೬೮||

ಕನ್ನಡದ ನುಡಿ ಚಲುವು| ನನ್ನಿಯಿಂ ನುಡಿಯಲ್ಕೆ|
ಸನ್ನುತರು ನಾಡ ನುಡಿಯಲ್ಲಿ ವಾಗ್ಮಿಗಳು|
ಮುನ್ನಡೆದರಿಲ್ಲಿ- ಘನಮಠ ||೬೯||

ವಾಣಿ ನಿನಗಿಹುದೆಂದು| ಜಾಣತನದಿಂ ಬಳಸು|
ವಾಣಿ ಪಾಣಿಗಳ ಹರಿಬಿಡಲು ಮಾನವನು|
ಕೋಣನಂತಕ್ಕು- ಘನಮಠ ||೭೦||

ಕೈ ತುಂಬ ಹಣವಿರಲು| ಮೈತುಂಬ ಕಣ್ಣಿರಲಿ|
ಘಾತುಕರು ಜಗದಿ ತುಂಬಿಹರು ನಿನಗದರ|
ಭೀತಿಯೆ ಬೇಡ- ಘನಮಠ ||೭೧||

ಶಿರಿಯಿದ್ದ ಕಾಲಕ್ಕೆ| ಕರೆದು ದಾನವ ಮಾಡು|
ಶಿರಿ ಕರಗಿ ನರನು ಬರಿಗೈಯ್ಯಾಲಿರಲವನ|
ಸ್ಥಿರ ದಾನ ಜಗದಿ- ಘನಮಠ ||೭೨||

ಮಾತಿನೊಳು ಮೃದು ವಿರಲಿ| ಪ್ರೀತಿ ಯಲ್ಲರೊಳಿರಲಿ|
ಚಾತುರ್ಯಬೇಡ ಸತ್ಪುರುಷರಾಸಂಗ|
ಪ್ರೀತಿಯಿಂ ಮಾಡು- ಘನಮಠ ||೭೩||

ಹೊತ್ತು ಹೋದರೆ ಬರದು| ಮಾತು ಕೊಟ್ಟರೆ ಸಿಗದು|
ದೈತ್ಯಾರಿ ಸಖನ ನೆನಹು ಚಿತ್ತದೊಳಿರಲು|
ಗೊತ್ತಿಗೊಂದುವಿಯೊ- ಘನಮಠ ||೭೪||

ತನು ಶುದ್ಧಿ ಇಲ್ಲದಗೆ| ಘನತೆಯುದು ಮೊದಲಿಲ್ಲ|
ಮನಶುದ್ಧಿ ಇಲ್ಲದಲೆ ಮನು ಜಪಿಸೆ ಫಲವಿಲ್ಲ|
ಮನುಜನವನಲ್ಲ- ಘನಮಠ ||೭೫||

ಲಂಚದಿಂ ಜಗನಾಶ| ಸಂಚಿನಿಂ ಕುಲ ನಾಶ|
ವಂಚನೆಯು ಸಕಲ ಜೀವಿ ಕೋಟಿಗೆ ನಾಶ|
ಸಂಚಯಿಸು ಪುಣ್ಯ- ಘನಮಠ ||೭೬||

ಇಂಬಾದ ವಿಶ್ವದೊಳು| ನಂಬಿಗೆಯು ಮುಖ್ಯವದು|
ಸಂಭ್ರಮದ ಸಂಚಾರ ಮಾಡಲ್ಕೆ ಮಾನವಗೆ|
ನಂಬಿಗೆಯೆ ಮುಖ್ಯ- ಘನಮಠ ||೭೭||

ಸಾಂಬಶಿವನೊಲಿಯಲ್ಕೆ| ನಂಬಿಗೆಯು ಇಲ್ಲದಿರೆ|
ಸಾಂಬ ನಿನಗಿಲ್ಲ ಇಂಬು ವಿಶ್ವದೊಳಿಲ್ಲ|
ನಂಬು ನಂಬಿಗೆಯ- ಘನಮಠ ||೭೮||

ನೋಡಿ ಮಾಡುವದಲ್ಲ| ಬೇಡಿದರೆ ಕೊಡರಾರು|
ರೂಢಿಯೊಳು ನೋಡಿ| ನಿನ್ನ ಹೃದಯಾಂತರದಿ|
ಜಾಡು ಬಿಡೆ ಲೇಸು- ಘನಮಠ ||೭೯||

ಉಪಕಾರ ಮಾಡಿ। ಪ್ರತ್ಯುಪಕಾರ ಬಯಸದಿರು।
ಉಪಕಾರ ಸಹಕಾರ ಮಾನವನ ಸಹಜಗುಣ।
ನೆಪವಿರಲಿ ನಿನಗೆ– ಘನಮಠ ||೮೦||

ನಾನು ಮಾಡಿಹೆನೆಂಬ। ಸ್ವಾನುಭವವಿರೆ ನರನು।
ಶ್ವಾನ ತಾ ಬೊಗಳಿ ಕುರಿಯ ಮುಂದಿಗೆದಾಳಿ।
ನೂನವಾದಂತೆ– ಘನಮಠ ||೮೧||

ಮಾಡಿ ಕೆಟ್ಟರು ಜನರು। ರೂಢಿಯೊಳು ಮನವಿರದೆ।
ನೀಡಿರುವೆನೆಂಬ ನಿಜ ಮನದಿ ಇರುತಿರಲು।
ಕೇಡು ಮಾನವಗೆ– ಘನಮಠ ||೮೨||

ಓದದಿರುವನ ಬಾಯಿ। ಮೋದ ಸವಿಯುದಬಾಯಿ।
ಮೇದಿನಿಯೊಳದುವೆ ಬಿಲದಬಾಯಿ ಘನತೆಯು।
ಸ್ವಾದ ನಿನಗಿಲ್ಲ– ಘನಮಠ ||೮೩||

ಮಕ್ಕಳಿಗೆ ತಾಯ್ತಂದೆ ಅಕ್ಷರ ವಿಧ್ಯೆಯನು।
ಚಿಕ್ಕತನದಲಿ ಕಲಿಸದಿರೆ ಧನಲಕ್ಷ।
ಲಕ್ಷಗಳಿಸೇನು– ಘನಮಠ ||೮೪||

ವಿದ್ಯೆಯಿಲ್ಲದ ಮನುಜ। ಹದ್ದಿಗಿಂತಲು ಕಡೆಯು।
ವಿಧ್ಯೆ ಬುದ್ಧಿಗಳ ಸಮ್ಮೇಳ ವಿಶ್ವದೊಳು।
ಬುದ್ಧಿಯೇ ಬೆಳಕು– ಘನಮಠ ||೮೫||

ಕೊಟ್ಟ ದಾನವು ನಿನಗೆ। ಕಟ್ಟಿದಾ ಬುತ್ತಿಯುದು।
ಕೊಟ್ಟದ್ದು ಕೆಡದು। ಸೃಷ್ಟಿಯೊಳು ಶಾಶ್ವತವು।
ಕೊಟ್ಟವನೆ ಧನ್ಯ– ಘನಮಠ ||೮೬||

ಹರನ ಸೇವೆಯ ಮಾಡಿ। ವರವ ಕೇಳಲಿಬೇಡ।
ಹರನಿಗರುವುಂಟು ನರನ ಕೃತಕರ್ಮ ಫಲ।
ಸ್ಥಿರವು ವಿಶ್ವದೊಳು– ಘನಮಠ ||೮೭||

ನ್ಯಾಯ ಅನ್ಯಾಯದಾ। ಆಯತನನರಿಯಲ್ಕೆ।
ತೋಯಜಾಕ್ಷನ ಸಖನ ನೆನಹು ನಿಜದಿರೆ ನಿನ್ನ।
ಕಾಯಕವು ಶುದ್ಧ- ಘನಮಠ ॥೮೮॥

ದೇಹವಿದು ದೇಗುಲವು। ಜೀವವೆ ಶಿವಲಿಂಗ।
ದೇವನಿಹನೆಂಬ ಭಾವ ಸ್ಥಿರವಾಗಲ್ಕೆ।
ದೇಹಿಯೆ ದೇವ- ಘನಮಠ ॥೮೯॥

ಅಂಗಪೊಳಗುದ್ಭವಿಪ। ಮಂಗಚೇಷ್ಟೆಯನಳಿದು।
ಜಂಗಮನೆ ಶಿವನು। ಶಿವನು ಜಂಗಮನೆಂದು।
ಅಂಗದಿಂದರಿಯೊ- ಘನಮಠ ॥೯೦॥

ಕನಸಿನೊಳು ಕಾಣುತಿಹ। ಮನುಮಥಾರಿಯು ನಿನ್ನ।
ನೆನಹಿನೊಳು ನನಸಾಗಲಾಸಮಯ।
ಮನವೆ ಮಹದೇವ- ಘನಮಠ ॥೯೧॥

ಒಂಟಿಯಾಗಿರುವಾಗ। ತಂಟೆಯನು ಮಾಡದಿರು।
ತುಂಟತನವೆಂದೂ ಬಳಸದಿರು ಯೌವ್ವನದಿ।
ಗಂಟಲಕೆ ಗಾಣ- ಘನಮಠ ॥೯೨॥

ಕೋಪವದು ಮಾನವಗೆ ತಾಪವದು ತರವಲ್ಲ।
ಭೂಪ ತಾಪಸಿಗೆ। ಕೋಪವಿರೆ ವಿಶ್ವದೊಳು।
ಪಾಪಿಯಾಗುವರು- ಘನಮಠ ॥೯೩॥

ಮನದ ಪಾವಿತ್ರ್ಯತೆಗೆ। ದಿನನುಡಿಯೊ ಶಿವಮಂತ್ರ।
ಕನಸಿನಂತಿಹುದು ಸಂಸಾರ ಶಿವನಾಮ।
ಮನುಜನೆನಿಸುವದು- ಘನಮಠ ॥೯೪॥

ತನುವ ನಿರ್ಮಲ ಮಾಡಿ। ಮನನ ನಿಗ್ರಹಮಾಡು।
ವನಿತೆಯರ ಕಂಡು ಮನದಿ ಸೋದರ ಭಾವ।
ಅನುಗಾಲವಿರಲಿ- ಘನಮಠ ॥೯೫॥

ಮನದೊಳಗೆ ಮಂತ್ರವನು। ಅನುಗಾಲ ನುಡಿಯಲ್ಕೆ।
ತನು ಶುದ್ಧವಾಗಿ ಮನಸಿಜನ ಕಾಟವದು।
ತನುವಿನಿಂ ದೂರ- ಘನಮಠ ||೯೬||

ಭಾವಜಾರಿಯ ನಾಮ। ಸಾವಧಾನ ನುಡಿಯೆ।
ಭಾವ ಪರಿಶುದ್ಧ ವಾಗುವದು ಮಾನವನ।
ಕಾವುದದು ನಿತ್ಯ- ಘನಮಠ ||೯೭||

ಶಿವನ ನಾಮವ ನುಡಿದು। ಕುವರ ಮಾರ್ಕಂಡೇಯ।
ಭುವನದೊಳಗಮರನಾಗಿಹನು ಸ್ಥಿರ ಮುಕ್ತಿ।
ಜವನಭಯ ದೂರ- ಘನಮಠ ||೯೮||

ಶಂಭು ನಾಮದ ಪಠಣ। ಕುಂಭಿನಿಯೊಳದು ಶ್ರೇಷ್ಠ।
ಡಾಂಭಿಕವು ಬೇಡ ಶಂಭು ತಾನೊಲಿಯಲ್ಕೆ।
ನಂಬು ಶಿವನಾಮ- ಘನಮಠ ||೯೯||

ನುಡಿಯಂತೆ ನಡೆಯಿರಲಿ। ಧೃಢ ಮನವು ಶಿವನೊಳಗೆ।
ಬಿಡಬೇಡವೆಂದೂ ಸತ್ಸಂಗ ಸಂಸಾರ।
ಸಡಗರವು ಕಾಣೋ- ಘನಮಠ ||೧೦೦||

ಲಿಂಗ ಧ್ಯಾನವು ಮನದಿ। ಅಂಗದಿಂ ಗುರುಸೇವೆ।
ಜಂಗಮನ ಸೇವೆ ಮನದಿಂದ ಮಾಡಲ್ಕೆ।
ಸಂಗಯ್ಯನೊಲಿವ- ಘನಮಠ ||೧೦೧||

— ಇತಿ ೧೦೧ ನೇ ಪದಕ್ಕೆ ಸಪ್ತಮ ಪಥ ಮಂಗಲಂ —

# — ಅಷ್ಟಮ ಪಥ —

## ★ ಸಂಸಾರ ಜೀವನ ವಚನಗಳು ★

ಮುನಿಯು ಮುನಿಯುವ ಮನದಿ। ವನಿತೆಯರ ದರ್ಶನದಿ।
ಮನಸಿಜನ ಕಾಟ ಕಳೆಯಲ್ಕೆ ಮುನಿವೃಂದ।
ವನವ ಸೇರುವದು- ಘನಮಠ ॥೧॥

ಯೋಗದೊಳಗಿಬ್ಬಗೆಯು। ರಾಗವಿರೆ ಯೋಗಿ ತಾ।
ಭೋಗಿ ಭೂಷಣನ ನೆನವಿಲ್ಲದಿರೆ ಮನದಿ।
ಸಾಗುವನು ನಿರಯ- ಘನಮಠ ॥೨॥

ಹರಭಕ್ತರಾವೆಂದು ಧರಿಸಿ ಲಾಂಛನ ಮನದಿ।
ಹರದಿಯರ ನೆನಹು। ಶಿರಿಭೋಗದೊಳಗಾಶೆ।
ದುರಿತಕ್ಕೆ ದಾರಿ- ಘನಮಠ ॥೩॥

ಮಾನವಗೆ ಸತಿ ಸುಗುಣಿ। ನೂನವಾಗದಲಿರಲು।
ಜೇನು ಸವಿದಂತೆ ಸಂಸಾರದೊಳು ಕಾಮ।
ಧೇನುವಿದ್ದಂತೆ- ಘನಮಠ ॥೪॥

ಧನಕನಕ ಮಣಿಮುತ್ತು। ದಿನಸು ದಿನಸಿನ ಧಾನ್ಯ।
ಅನುಕೂಲವಾದ ಸತಿಸುತರು ಮನೆಯೊಳಿರೆ।
ಅನುಗಾಲ ಸುಖವು- ಘನಮಠ ॥೫॥

ನಾರಿ ಜೀವನಸಾರ। ನಾರಿಯಿಂ ಸಂಸಾರ।
ನಾರಿಯೇ ವಿಶ್ವಕ್ಕೆ ಮೂಲ ತಾನದು ಗೃಹಕೆ।
ತೋರಣದ ಮಾಲೆ- ಘನಮಠ ॥೬॥

ನಾರಿ ಗುಣವಿಲ್ಲದಿರೆ। ಮಾರಿ ಮನೆಯೊಳು ಭೂತ।
ಸೇರಿಕೊಂಡಂತೆ ಸಂಸಾರ ಸುಂದರತೆ।
ಪೂರ ಅಳಿಯುವದು- ಘನಮಠ ॥೭॥

ಸತಿಯು ಗುಣಿಸುವುದಂತೆ। ಅತಿ ಕೋಮಲಾಗಿರಲು।
ಮತಿವಂತೆಯಾಗಿ ಪತಿಸೇವೆ ಗೆಯ್ವ ಸತಿ।
ಪತಿವ್ರತೆಯು ಜಗದಿ- ಘನಮಠ ॥೮॥

ಮಂದಮತಿಯಾದ ಸತಿ। ನಿಂದೆಯಾಡುವ ಮಗನು।
ಮಂದಿರದೊಳಿರಲು। ಕುಂದು ತಪ್ಪದು ನಿತ್ಯ।
ಸಂದಿಪುದು। ದುಃಖ- ಘನಮಠ ॥೯॥

ರೂಪವತಿ ಸತಿಯಿರಲು। ಕೂಪ ಮನೆಯೊಳಗಿರಲು।
ಪಾಪಿಗಳ ನೆರೆಯು ಬಿಡದಿರಲು ಸಂಸಾರ।
ತಾಪದಾಯಕವು- ಘನಮಠ ॥೧೦॥

ಸತಿ ರೂಪಗುಣಯುತೆಯು। ಸುತರಾಜ್ಞೆ ಪಾಲಿಪರು।
ಮತಿವಂತನೆನಿಸಿ ಶತವರುಷ ಬಾಳಿದರು।
ಕ್ಷಿತಿಯೊಳವ ಧನ್ಯ- ಘನಮಠ ॥೧೧॥

ತನ್ನ ನುಡಿ ತನ್ನಾಡು। ತನ್ನ ತಾಯ್ತಂದೆ ಗುರು।
ತನ್ನಾತ್ಮ ತನ್ನ ಸತಿಸುತರು ವಿಶ್ವದೊಳು।
ಮನ್ನಣೆಯು ನರಗೆ- ಘನಮಠ ॥೧೨॥

ತನ್ನ ತಾನರಿದೊಡೆ। ಧನ್ಯನವ ವಿಶ್ವದೊಳು।
ಭಿನ್ನಿಲ್ಲದಂತೆ ಪರರ ಸಹಕರಿಸಲವ।
ಮಾನ್ಯ ವಿಶ್ವದೊಳು- ಘನಮಠ ॥೧೩॥

ಮಡದಿಯಳ ವಡಲ ಗುಣ। ದೃಡತೆಯಿಂದಿರಬೇಕು।
ನಡೆ ನುಡಿಯು ಒಂದಾಗಿ। ಮೃದು ಕುಸುಮದಂತಿರಲು।
ಪೃಥ ಶರಣೆ ವನಿತೆ- ಘನಮಠ ॥೧೪॥

ಚಾಡಿ ಹೇಳುವ ಮಡದಿ। ಮೂಢಮತಿಯುಳ್ಳ ಮಗ।
ಜೋಡಿಯಾಗಲ್ಕೆ ಸಂಸಾರದೊಳು ನರಗೆ।
ಕೇಡು ಬಿಡದೆಂದೂ- ಘನಮಠ ॥೧೫॥

ಚೊಕ್ಕಟದ ಮನೆಯೊಳಗೆ ಭಕ್ತಿಯುತ ಸತಿಯಿರಲು|
ಅಕ್ಕರತೆಯುಳ್ಳ ಮಕ್ಕಳಿರಲಾ ಮನೆಯು|
ಮುಕ್ತಿ ಸಾಮ್ರಾಜ್ಯ- ಘನಮಠ ||೧೬||

ಹೆಂಡವನ್ನು ತಾಕುಡಿದು ಹೆಂಡತಿಯ ಕಾಡುತಿಹ|
ಗಂಡನ ಜೊತೆಗೆ ಭವಣೆ ಬಿಡುವದಕಿಂತ|
ರಂಡೆತನಲೇಸು- ಘನಮಠ ||೧೭||

ಗಂಡನಿರುವಾಗ ಸತಿ| ಮಿಂಡೆಯರ ಜೊತೆಗೂಡಿ|
ಅಂಡಲೆವ ಜಾರ ಸತಿಗಿಂತ ಮಾನವಗೆ|
ಷಂಡತ್ವ ಲೇಸು- ಘನಮಠ ||೧೮||

ಗಂಡನಸುವಳಿಯಲ್ಕೆ| ಹೆಂಡತಿಯು ಬಲುಜಾಣೆ|
ಅಂಡಲೆವ ನಾರಿ ಜಾರೆಯೊಳ ಪತಿಯವನು|
ಕಂಡ ಸುಖವೇನು- ಘನಮಠ ||೧೯||

ಮೂಗಿನತಿಶಯಕಿಂತ| ಮೂಗುತಿಯ ಕೊಂಡಾಡ್ವ|
ಸೋಗಲಾಡಿಯರ ಮಂಗ ಬುದ್ಧಿಯ ಕಂಡು|
ನಾಗೇಶ ನಗುವ- ಘನಮಠ ||೨೦||

ತಂದೆ ತಾಯ್ ಕಳಕೊಂಡ| ಕಂದಗಳ ನೋಡಿ ಮನ|
ದಿಂದ ಮರಗುತ್ತ ಕರುಣೆಯನು ತೋರುವರೆ|
ಇಂದುಧರ ಸಮರು- ಘನಮಠ ||೨೧||

ತನಯರಿಲ್ಲದ ಮನೆಯು ಇನಿಯನಿಲ್ಲದ ಬಾಲೆ!
ಎನಿತಿದ್ದರೇನು ಸಂಸಾರ ಸಾಮ್ರಾಜ್ಯ|
ಕನಸಿನಂತಹುದು- ಘನಮಠ ||೨೨||

ತಂದೆ ತಾಯ್ ಇಲ್ಲದಿಹ| ಕಂದಗಳ ಗೋಳನ್ನು|
ಬಂಧುಗಳು ಯಾರೂ ದಿಕ್ಕಿಲ್ಲ ಮಕ್ಕಳಿಗೆ|
ಇಂದುಧರ ಗತಿಯು- ಘನಮಠ ||೨೩||

ಪೊಟ್ಟೆಗಶನವದಿಲ್ಲ। ಬಟ್ಟೆ ಮೈಯೊಳಗಿಲ್ಲ।
ನಿಟ್ಟುಸುರು ಬಿಡುವ ನಿರ್ಗತಿಕರಿಗೆ ಆಸನ।
ಕೊಟ್ಟವನೆ ದೇವ- ಘನಮಠ ||೨೪||

ಮಲತಾಯಿ ಮನೆಯೊಳಿರೆ। ಹಲವು ತರ ಕಾಡುವಳು।
ಕುಲಗೇಡಿ ಹೆಣ್ಣು ಮಲ ಮಕ್ಕಳಿಗೆ ಮೃತ್ಯು।
ನಿಲಯ ಸುಡುಗಾಡು- ಘನಮಠ ||೨೫||

ತಾಯ್ತನದ ಹಿರಿಮೆಯನು। ನಾಯ್ಗಳೇಂಬಲ್ಲರೈ।
ನೋಯಿಸುವರಕಟ ತಾಯ್ಗಳಿಲ್ಲದ ಸುತರ।
ಕಾಯ್ವ ಶಿವನಿತ್ಯ- ಘನಮಠ ||೨೬||

ಹಿತವು ಬಯಸುವರೆನಗೆ। ಕ್ಷಿತಿಯೊಳ್ಯಾರಿಲ್ಲೆಂದು।
ಮತಿಹೀನ ಮಗುವೆ। ಪತಿತರನು ನೆನೆಯದಿರು।
ಶಿತಿಕಠ ಗತಿಯು- ಘನಮಠ ||೨೭||

ಇಲ್ಲದುದನೆ ನೆನೆದು। ಮಳ್ಳರಂತಳಬೇಡ।
ಕ್ಷುಲ್ಲಕರ ನೆರೆಯ। ಬಯಸದಿರು ಮಗ ವಿಶ್ವ।
ದೊಲ್ಲಭನೆ ಕಾಯ್ವ- ಘನಮಠ ||೨೮||

ಅಳಬೇಡವೆಲೆ ಮಗುವೆ। ಇಳೆಯೊಣ್ಮತಾಕಾಯ್ವ।
ದಲಿತ ದೀನರಿಗೆ ರಕ್ಷಕನು ಶಿವನೆಂದು।
ಉಲಿಯುವವು ವೇದ- ಘನಮಠ ||೨೯||

ಹೆತ್ತ ತಾಯ್ ಇಲ್ಲದಿರೆ। ಅತ್ತೇಕೆ ಕೊರಗುವಿಯೊ।
ಮೃತ್ಯುವನು ಗೆದ್ದ। ಚಿತ್ತಜಾರಿಯು ಜಗದ।
ಸತ್ಯತಾ ಕಾಯ್ವ- ಘನಮಠ ||೩೦||

## ★ ವೇಶ್ಯೆಯರ ಜೀವನದ ವಚನಗಳು ★

ವೇಶ್ಯೆಯಳ ಕಡೆನೋಟ। ಹಾಸ್ಯಗಾರರ ವಾಣಿ।
ದಾಸಿಯಳ ಸ್ನೇಹ। ಮೋಸಗಾರರ ಸಖ್ಯ।
ನಾಶಕ್ಕೆ ಮೂಲ- ಘನಮಠ ||೩೧||

ಜಾರೆಯಾ ಕಣ್ಗೊನೆಯು। ವಾರಾಂಗನೆಯ ಮನವು।
ಜಾರುವಾಸಿರಿಯ ಅತ್ಯಾಶೆ ಮಾನವಗೆ।
ಕೂರಂಬು ಗಾಯ- ಘನಮಠ ॥೩೨॥

ವೇಶ್ಯಯನು ದಾಶಿಯನು। ಕಾಶಿನೊಳಗಾಶಿಯನು।
ಮೋಸದಿಂದೆಂದೂ ಗಾಶಿಗೊಳಗಾಗದಿರೆ॥
ಈಶ ತಾನೊಲಿವ- ಘನಮಠ ॥೩೩॥

ಹಣವಿರುವ ಮಾನವನ। ಗುಣವಂತನೆಂದರಿದು।
ಹಣ ಹರಿದ ಮೇಲೆ। ಗುಣ ನೋಡಳಾ ವೇಶ್ಯೆ।
ಹಣವೆನುವಳಯ್ಯೋ- ಘನಮಠ ॥೩೪॥

ಕೋಟಿನಂಗಿಯುವಳಗೆ। ನೋಟಿನಾ ಕಂಥೆ ಇರೆ।
ಸಾಟಿ ನಿನಗಾರೂ ಇಲ್ಲೆಂದು ಅಪಹರಿಸಿ।
ಚಾಟಿ ತೋರುವಳು- ಘನಮಠ ॥೩೫॥

ಕಾಸಿರುವತನ ವಿಟರ। ವೇಶ್ಯಯರ ಉಪಚಾರ!
ಕಾಸು ತೀರಲ್ಕೆ ಧನಪತಿಯು ಜಗದಿ ಸ।
ನ್ಯಾಸಿಯಂತಕ್ಕು- ಘನಮಠ ॥೩೬॥

## ★ ಹಣ ವಿಲ್ಲದಬಾಳು ವಚನಗಳು ★

ಹಣವೀಯಲೀ ಜಗವು। ಧಣಿ ಧಣೀ ಯೆನುತಿಹದು।
ಹಣ ತೀರಲೀ ಜಗದಿ ಗುಣಗೇಡಿ ತಾನಾಗ್ವ।
ಹಣ ಮುಖ್ಯ ಜಗದಿ- ಘನಮಠ ॥೩೭॥

ಕಾಂಚಾಣವಿರೆ ನಿನ್ನ। ಮಂಚದೊಳು ತೂಗುವರು।
ಕಾಂಚಾಣವಿಲ್ಲದಿರೆ। ನಿನ್ನಯ ಸತಿಸುತರು।
ವಂಚಿಸದೆ ಬಿಡರು- ಘನಮಠ ॥೩೮॥

## ★ ಹೆಣ್ಣಿನ ಹಂಬಲ ವಚನ ★

ಹೆಣ್ಣಿನ್ಹಂಬಲ ಬೇಡ। ಹೊನ್ನಿನಾಶೆಯು ಬೇಡ।
ಕಣ್ಣಿದ್ದು ಕುರುಡ ನಾಗದಿರು ಮೈಯೊಳಗೆ।
ಎಣ್ಣಿಯಿರಲರಿಯೊ- ಘನಮಠ ||೩೯||

ಭಂಗಾರವಿಲ್ಲದಿರೆ। ಶೃಂಗಾರವೇತರದು।
ಶಿಂಗರಿಪ ನಾರಿಯರು। ಭಂಗಾರ ಕೊಡದಿರಲು।
ಮಂಗನೆನುತಿಹರು- ಘನಮಠ ||೪೦||

ಹೆಣ್ಣು ಹೆಣ್ಣೆಂದು ಸೀ। ಸಣ್ಣಾಗದಿರು ಮನುಜ।
ಹೆಣ್ಣು ನಿನ್ನಂಗದೊಳಗಿರುವ ಸತ್ವವನು।
ಮಣ್ಣುಗೂಡಿಪಳು- ಘನಮಠ ||೪೧||

ಸತಿಯೆ ಸದ್ಗತಿಯೆಂದು। ಮತಿಗೇಡಿಯಾಗದಿರು।
ಸತಿ ಗಾಳಿಗಿಟ್ಟ ಸೊಡರಿನೊಲು ಅಳಿಯಲ್ಕೆ
ಗತಿಗೇಡಿ ನೀನು- ಘನಮಠ ||೪೨||

ಲಲನೆಯರ ಸಂಗವದು। ಬಲು ಚಂದ ನೋಡಲ್ಕೆ।
ಕಳೆಗುಂದಿ ದೇಹ ಗುಳಿ ಬೀಳಲಾಸೆಮಯ।
ಇಳೆಯೊಳಪಹಾಸ್ಯ- ಘನಮಠ ||೪೩||

ನಾರಿಯಳ ಒಲುಮೆಯದು। ನೀರಿನಂತ ಸ್ಥಿರವು।
ಸೋರುವದು ನೀರು। ನಾರಿ ತನ್ನಿಚ್ಛೆಯೊಳು।
ಜಾರುವಳು ಮನದಿ- ಘನಮಠ ||೪೪||

ಕ್ರೂರಂಗೆ ಕರುಣೆಯನು। ಚೋರಂಗೆ ನೀತಿಯನು।
ಜಾರತನವುಳ್ಳ ನಾರಿಯರಿಗ್ಹಿತ ನುಡಿಯು।
ಕೂರಂಬು ಕಾಣೋ- ಘನಮಠ ||೪೫||

## ★ ನಾರಿಯರ ಮುಖ್ಯತ್ವ ವಚನ ★

ನಾರಿ ಮಂಗಲಕೆಲ್ಲ| ನಾರಿಯಿಂ ಸರ್ವಸ್ವ|
ನಾರಿಯರೆ ಜಗದ ಸ್ಥಿತಿಲಯಕೆ ಕಾರಣರು|
ನಾರಿಯೇ ಗೌರಿ- ಘನಮಠ ||೪೬||

ನಾರಿ ಮಂಗಲ ಗೃಹಕೆ| ತೋರಣವು ಬಾಗಿಲಕೆ|
ನಾರಿಲ್ಲದಿರುವಾ ಮನೆ ಮಸಣ ಜಗದಂದ|
ನಾರಿಯೊಳಿಹುದು- ಘನಮಠ ||೪೭||

ನಾರಿಯಿಂದುತ್ಪತ್ತಿ| ನಾರಿಯಿಂದಲೆ ಲಯವು|
ನಾರಿಯೇ ವಿಶ್ವಕ್ಕೆ ಆಧಾರ ತಾರಕಳು|
ಮಾರಕಳು ನಾರೀ- ಘನಮಠ ||೪೮||

ನಾರಿಯರ ಹೃದಯವನು| ನೀರಿನಾ ನೆಲೆಯನ್ನು|
ಸೋರುವ ಭಾಂಡದೊಳು| ಪಾಕ ಮಾಡುವ ಬುದ್ಧಿ|
ಯಾರಿಂದಲಹುದು- ಘನಮಠ ||೪೯||

ನಾರಿಯರ ಹಂಬಲದಿ| ಕಾರಿರುಳು ತಿರುಗದಿರು|
ಘೋರ ಪರಿತಾಪ ಬಿಡದೆಂದು ಹರಣವದು|
ಹಾರುವದು ಸತ್ಯ- ಘನಮಠ ||೫೦||

ಪರ ಸತಿಯನೆಂದೆಂದು| ಸ್ಮರಣೆ ಮಾಡದಲಿರಲು|
ಪರಿಶುದ್ಧವಹುದು ತನು ಕರಣ ಮನ ಶುದ್ಧ|
ಶರಣ ನೀನಹುದು- ಘನಮಠ ||೫೧||

ಅಂಗನೆಯ ಹಂಬಲವ| ಅಂಗದಿಂ ನೆನೆಯದಿರು|
ಸಂಗವನು ಮಾಡೈ| ಸಾಧುಸತ್ಪುರುಷರೊಡ|
ನ್ಹಿಂಗುವವು ಕುಗುಣ- ಘನಮಠ ||೫೨||

ಸುಂದರಿಯ ಮುಖ ನೋಡಿ| ಮಂದಮತಿಯಾಗದಿರು|
ಕುಂದೆಂದು ಬಿಡದು| ಸಂದೇಹದಿಂ ಜಗವು|
ಮುಂದೆ ನಂಬದದು- ಘನಮಠ ||೫೩||

ನೋಡಿದರೆ ಮನವು ಮಾತಾಡಿದರೆ ಧನವು ಒಡ।
ಗೂಡಲ್ಕೆ ಸರ್ವ ಸೆಳೆವ ಸ್ತ್ರಿ ಸಹವಾಸ।
ಕೇಡು ಸರ್ವಕ್ಕು- ಘನಮಠ ||೫೪||

ಯೋನಿಯಿಂ ಸರ್ವಸ್ವ। ಕಾಣುವದು ಜಗವೆಲ್ಲ।
ಯೋನಿಯಿಂ ಜನಿಸಿ ಜಯಿಸೆ ಮನ ವ್ಯಾಪಾರ।
ಯೋನಿಜರು ಯೋಗಿ- ಘನಮಠ ||೫೫||

## ★ ಮಾನವತೆ ವಚನ ★

ಸೇವಕನ ಸಲುಗೆಯದು। ಯಾವಕಾಲಕೂ ಬೇಡ।
ಮಾವನ ಮನೆಯು। ವಾಸವದು ಮಾನವಗೆ।
ಬೇವು ಸವಿದಂತೆ- ಘನಮಠ ||೫೬||

ದಾಸದಾಸೀ ಜನರ। ವಾಸವದು ತರವಲ್ಲ।
ಆಶೆಯೊಳಗಳತೆ ತಪ್ಪದಿರು ನಿನಗಾಗಿ।
ಕ್ಲೇಶ ಬಿಡದೆಂದೂ- ಘನಮಠ ||೫೭||

ಮುತ್ತಿಗಿಂತಲು ಹೊತ್ತು। ಅತ್ಯಂತ ಶ್ರೇಷ್ಠವದು।
ಹೆತ್ತಾಯಿ ಹೊತ್ತು ಗತಿಸಲ್ಕೆ ಮಾನವಗೆ।
ಮತ್ತೆ ಶಿಗವೆಂದು- ಘನಮಠ ||೫೮||

ತೊತ್ತಿನೊಳು ಸಹವಾಸ। ಕತ್ತೆ ವಾಹನವಾಗಿ।
ಹೊತ್ತರಿಯದಂತೆ ತಿರುಗುತಿಹ ಮಾನವಗೆ।
ಕುತ್ತು ಕಾದಿಹುದು- ಘನಮಠ ||೫೯||

ಮಾನವನೆ ಮಾನವನು। ಜ್ಞಾನದಿಂ ರಕ್ಷಿಸೈ।
ಮಾನವಿಲ್ಲದವ ಶ್ವಾನಗಿಂತಲು ಕಡೆಯು।
ಮಾನವೇ ಧನವು- ಘನಮಠ ||೬೦||

## ★ ಸುಖದ ಅಸ್ತಿತ್ವ ವಚನ ★

ಸುಖವು ಬೇಕೆಂದು ನೀ। ಬಕನಂತೆ ಧ್ಯಾನಿಸಲು।
ಸುಖವೇನು ಸಂತೆ ಸರಕಲ್ಲ ನಿಜ ಸುಖವು।
ಅಕಳಂಕಮತಿಗೆ- ಘನಮಠ ||೬೧||

ಸುಖವೆಂಬುವಾ ವಸ್ತು। ನಿಖಿಲ ವಿಶ್ವದೊಳಿಲ್ಲ।
ವಿಕಸಿತನ ಹೃದಯದೊಳಗುಂಟು ಸತ್ಯಾತ್ಮ।
ಸುಖಿಯು ನಿತ್ಯದೊಳು– ಘನಮಠ ॥೬೨॥

ಸುಖವು ಬಡತನದಿಲ್ಲ। ಸುಖವು ಸಿರಿತನದಿಲ್ಲ।
ಸುಖವು ಆತ್ಮ ತೃಪ್ತಿನೊಳು ವಿಶ್ವದೊಳು।
ಸುಖವು ಶರಣರಿಗೆ– ಘನಮಠ ॥೬೩॥

ತಿರುಕ ತಿರಿದುಂಡರೂ। ಮುರುಕ ದೇವಾಲಯದಿ।
ಹರುಷದಿಂದಿರುವ। ಹಗಲಿರುಳು ಸುಖದುಃಖ।
ಸರಿಸಮದಿ ಕಾಣ್ವ– ಘನಮಠ ॥೬೪॥

ಸಿರಿವಂತ ಸತಿ ಸುತರ। ಕೊರತೆ ಯಾವದಕ್ಕಿಲ್ಲ।
ನರಳುವನು ನಿತ್ಯ। ದಿನರಾತ್ರಿ ಬಿಡದಂತೆ।
ಸ್ಥಿರ ಸುಖನ ಕಾಣ– ಘನಮಠ ॥೬೫॥

ಅಂತಕಾರಿಯು ನೆನಹು। ಚಿಂತೆಯನು ತಾ ದೂಡಿ।
ಸಂತರೊಡನಾಟದೊಳಗಿರಲು ಜೀವಿ ನಿ।
ಶ್ಚಿಂತ ಸುಖಿಯಹನು– ಘನಮಠ ॥೬೬॥

★ ಸಂಸಾರ ಜೀವನ ನಜನ ★

ಅತಿರೂಪ ಸತಿ ಶತೃ। ಅತಿ ಕೋಪ ಯತಿಶತೃ।
ಸುತಗಹಿತ ನೆನೆವ। ಪಿತಶತೃ ಮತಿಹೀನ।
ಸುತ ಶತೃ ಗ್ರಹಕೆ– ಘನಮಠ ॥೬೭॥

ವಾಸಿಸಲು ಮನೆಯಿಲ್ಲ। ಪೋಷಣೆಗೆ ಸತಿಯಿಲ್ಲ।
ಕ್ಲೇಶವನು ಕಳೆವ ಸುತರಿಲ್ಲದನ ಸಿರಿಯು।
ವೇಶೆಯಾ ಗಳಿಕೆ– ಘನಮಠ ॥೬೮॥

ಮಕ್ಕಳಿರೆ ಮನೆ ಚಂದ। ಅಕ್ಕರೆಯ ಸೋದರರು।
ರೊಕ್ಕದಾ ಕೊರತೆ ಇಲ್ಲದಿರೆ ಸಂಸಾರ।
ಚೊಕ್ಕಟವ ಕಾಣು– ಘನಮಠ ॥೬೯॥

ಅನುಜರಾಗ್ರಜರಿಂದ। ಗುಣವಂತೆ ಸತಿಯಿಂದ।
ಧನಕನಕ ಸಕಲ ಸಂಭ್ರಮದಿ ಶೋಭಿಸುತಿರುವ।
ಮನೆಯೆ ತಾ ಸ್ವರ್ಗ– ಘನಮಠ ॥೨೦॥

ಶೀಲ ಗುಣ ಸತಿಸುತರು। ಹಾಲ್ಕರೆವ ಹಸುವುಗಳು।
ಮೇಲೆನಿಪ ಗ್ರಾಮದಧಿಕಾರವಿರಲು ಅನು।
ಕೂಲ ಧನಲಕ್ಷ್ಮೀ– ಘನಮಠ ॥೨೧॥

ಶೀಲ ಸತಿಯೊರಳಿಲ್ಲ। ಹಾಲ್ಕರೆವ ಹಸುವಿಲ್ಲ।
ಕೀಳರೊಡನಾಟ। ಕೇಳುವವರಾರಿಲ್ಲ।
ಮೇಳು ವಿಧಿಲಕ್ಷ್ಮೀ– ಘನಮಠ ॥೨೨॥

ಆದರಿಲ್ಲದ ಸ್ವಜನ॥ ಸ್ವಾದವಿಲ್ಲದ ಊಟ।
ವಾದಿಸುವ ಸತಿಯು। ಸಹವಾಸದಿಂ ಮೇಲು।
ಸಾಧುಗಳ ಮೇಳ– ಘನಮಠ ॥೨೩॥

ಯೋಗಿ ಷಡ್ರುಚಿಯೊಲ್ಲ। ರೋಗಿ ಕ್ಷೀರವನೊಲ್ಲ।
ಭೋಗಿ ತಾ ಬಲ್ಲ ರುಚಿಯೂಟ ವಿಶ್ವವಿ।
ರಾಗಿ ಜಗವಂದ್ಯ– ಘನಮಠ ॥೨೪॥

ಮನದ ಮಲಿನತೆಯುಳಿದು। ಚಿನುಮಯಾತ್ಮಕನಾಗಿ।
ದಿನವಿರುಳು ಸರಳದಿರುವಂಗೆ ಸಂಸಾರ।
ಕನಸಿನಂತಹುದು– ಘನಮಠ ॥೨೫॥

ಪರ ನಾರಿಯಿಂ ದೂರ ಜರಿದು ದುರ್ಜನ ಸಂಗ।
ಹರನರಿವು ತನ್ನ ಆತ್ಮದೊಳು ಬಿಡದಿರುವ।
ನರನೆ ಪರನಾಗ್ವ– ಘನಮಠ ॥೨೬॥

ಕಸ್ತೂರಿಯ ಕಟ್ಟಿದಾ। ವಸ್ತ್ರ ಹಳೆದಾದರೂ।
ಕಸ್ತೂರಿಯ ಕಂಪು। ಬಿಡದಂತೆ ಜ್ಞಾನಿ ನುಡಿ।
ಶಾಸ್ತ್ರದ ಸಾರ– ಘನಮಠ ॥೨೭॥

ಮುಕ್ತಿಗಿಂತಲು ಅಧಿಕ ತತ್ವವೇತ್ತನ ವಾಣಿ।
ಮುತ್ತೊಡೆದು ರೂಪಗೆಡುತಿಹುದು ಸೂಳ್ನುಡಿಯು।
ನಿತ್ಯವೆಂದೆಂದೂ- ಘನಮಠ ॥೭೮॥

ಮನದಿರುವ ಗೌಪ್ಯವನು। ಹಣದೊರೆವ ಹಾದಿಯನು।
ಗುಣಹೀನರೆದುರು ಮನೆಯ ಮಡದಿಯ ಮುಂದೆ।
ನೆನೆಯದಿರು ಎಂದೂ- ಘನಮಠ ॥೭೯॥

ರುಣಶೇಷವನು ಮತ್ತೆ। ಅಗ್ನಿ ಶೇಷವ ಮನುಜ।
ಮನದಿಂದ ಮರೆದು। ದಿನಗಳೆಯಲಂತ್ಯಕ್ಕೆ।
ಮನೆಯೆ ನಾಶವದು- ಘನಮಠ ॥೮೦॥

## ★ ನಿಜಸಾಧು ಜೀವನ ವಚನ ★

ಎಲ್ಲ ವಸ್ತುವಿನೊಳಗೆ। ಸಲ್ಲಲಿತ ಶಿವಭಾವ।
ಉಲ್ಲಾಸವಿಲ್ಲ ವಿಷಯದೊಳು ಸಮಭಾವ।
ಉಳ್ಳವನೆ ಸಾಧು- ಘನಮಠ ॥೮೧॥

ಅಶನವಸನಗಳಾಶೆ। ಪೊಸ ಭೂಷಣಗಳಾಶೆ।
ನಶಿಸಿರುವ ಸರ್ವ ವಿಷಯಾಶೆ ಒಳಹೊರಗೆ।
ಸಶರೀರಿ ಸಾಧು- ಘನಮಠ ॥೮೨॥

ಅಂತರಂಗದೊಳಾತ್ಮ ಚಿಂತೆಯೇ ಘನವಾಗಿ।
ಸಂತಸದಿ ವಿಶ್ವ ಚರಿಸುವಾ ಜೀವಿ ನಿ।
ಶ್ಚಿಂತ ನಿಜ ಸಾಧು- ಘನಮಠ ॥೮೩॥

## ★ ಕಪಟ ಸಾಧುಗಳ ಜೀವನ ವಚನ ★

ಸಾಧುಗಳು ನಾವೆಂದು। ಬೋಧೆಯನು ಬೀರುತ್ತ।
ಸ್ವಾದವಿಲ್ಲದಲೆ ತಿರುಗುತಿಹ ಕಪಟಿಗಳು।
ಬೋದು ತೊಲೆ ಜಂತಿ- ಘನಮಠ ॥೮೪॥

ಕಾವಿ ಲಾಂಛನ ಮೇಲೆ| ಭಾವ ಶಿವನೊಳಗಿಲ್ಲ|
ಜಾವಜಾವಕ್ಕೆ ಶಿವನಾಮ ನುಡಿವನಿವ|
ನ್ಯಾವ ಘನ ಸಾಧು- ಘನಮಠ ||೮೫||

ಕ್ಷಣಕೊಮ್ಮೆ ಶಿವನಾಮ| ಎಣಿಕೆ ಇಲ್ಲದೆ ನುಡಿವ|
ಗಣಿಕೆಯರ ಧ್ಯಾನ ಮನದೊಳಗೆ ಇವ ಸಾಧು|
ಗಣನೆಯೊಳಗಿಲ್ಲ- ಘನಮಠ ||೮೬||

ಹೆಂಡ ಕಂಡವ ತಿಂದು| ಮುಂಡೆಯರ ಜತೆಗೂಡಿ|
ಅಂಡಲೆವ ಸಾಧು| ವೇಷಮೊಳುಗಿವಗಿಂತ|
ಭಂಡರಾರಿಲ್ಲ- ಘನಮಠ ||೮೭||

ಹರನಾಮ ನುಡಿಯಲ್ಕೆ| ಚರವೇಷ ಹೊದಿಯಲ್ಕೆ|
ಕೊರಳಕ್ಷಮಾಲೆ ಧರಿಸಲ್ಕೆ ನರನೆಂದು|
ಸ್ಥಿರಸಾಧುವಲ್ಲ- ಘನಮಠ ||೮೮||

ದುಡಿದುಣ್ಣಲಾರದವ| ಮಡದಿಯರ ಕಾಣದವ|
ಪಡಲನ್ನಕಾಗಿ ಪೊಡವಿಯೊಳು ತಿರುಗುತಿಹ|
ಜಡನೆಂತು ಸಾಧು- ಘನಮಠ ||೮೯||

ಮಾತಿನೊಳು ನಿಜವಿಲ್ಲ| ಪೂತಭಾವನೆಯಿಲ್ಲ|
ಪೋತಿಂಗೆ ಗಡ್ಡ ಬೆಳೆದಂತೆ ರೋಮವಿರೆ|
ಯಾತರ ಸಾಧು- ಘನಮಠ ||೯೦||

ತಂದೆ ತಾಯಿ ಗಳಿಸಿರುವ| ಬಂಧುರಾಸ್ತಿಯನೆಲ್ಲ|
ದುಂದು ಗಾರಿಕೆಯೋಳಳಿವಲಿಯುತಿಹ ಸಾಧು|
ನಿಂದಕನು ಜಗದಿ- ಘನಮಠ ||೯೧||

ಮನೆ ಸುತಗಳನ್ನೆಲ್ಲ| ಮನಸಿಜನ ಜೇಷ್ಠೆಯೊಳು|
ಎಣಿಕೆ ಇಲ್ಲದಲೆ ಅಳಿದತಿಯುತಿಹ ಸಾಧು|
ರುಣಗೇಡಿ ಮರ್ತ್ಯ- ಘನಮಠ ||೯೨||

ಕಳ್ಳ ಸುಳ್ಳರ ಸಂಗ। ದೆಲ್ಲವನು ಕಳಕೊಂಡು।
ಜೊಳ್ಳು ವೇದಾಂತ ನುಡಿಯುತ್ತ ತಿರುಗುತಿಹ।
ಮಳ್ಳು ಸಾಧಿವನು- ಘನಮಠ ||೯೩||

ಇದ್ದುದನು ಕಳಕೊಂಡು। ಬುದ್ಧಿಯದು ಮೊದಲಿಲ್ಲ।
ಬುದ್ಧಿವಂತರನು ನೋಡಿ ಸಹಿಸದ ಸಾಧು।
ಬದ್ಧಾಡಿ ಜೀವಿ- ಘನಮಠ ||೯೪||

ನರ ದೇಹದಾ ಘನತೆ। ಅರಿವು ಅಂತಕರದಿಲ್ಲ।
ತಿರುಗುತಿಹ ಜೀವಿ ನರಿ ನಾಯಿಗಳ ತೆರದಿ।
ನರನಜ್ಞ ಸಾಧು- ಘನಮಠ ||೯೫||

## ★ ಸರಳ ಜೀವನದ ವಚನ ★

ಇದ್ದುದನೆ ಘನವೆಂದು। ಬುದ್ಧಿಯಿಂ ಬಳಸುತ್ತ।
ಸದ್ದಿಲ್ಲದಂತೆ ಸುಖ ಜೀವನದಿ ಬಾಳ್ವ।
ಮುದ್ದು ಸಂಸಾರಿ- ಘನಮಠ ||೯೬||

ತನ್ನ ಸತಿ ಸುತರಲ್ಲಿ। ಮನ್ನಣೆಯ ಪೊಂದುತ್ತ।
ಅನ್ಯರುತ್ಕರ್ಷ ಮನದ್ಹಿಗ್ಗುವನೆ ಬಾಳು।
ಹೊನ್ನಿನಂತಕ್ಕು- ಘನಮಠ ||೯೭||

ಪರವಸ್ತುಗಳ ಬಯಕೆ। ಇರುಳ್ಹಗಲು ಬಯಸದಿಹ।
ನರನವನು ಎಲ್ಲಾ ಜೀವರೊಳು ಪಡೆವನವ।
ಹಿರಿಪದವಿ ಸತ್ಯ- ಘನಮಠ ||೯೮||

ತನು ಮನುವ ಧನ ನಿತ್ಯ। ಘನ ಕಾರ್ಯದೊಳು ಸವಿಸಿ।
ಮನುಜ ತಾ ಪಡೆವ ಸ್ಥಿರಮುಕ್ತಿ। ಭುವನದೊಳು
ಜನಿಸನವ ಮತ್ತೆ- ಘನಮಠ ||೯೯||

ಬಲ್ಲ ಮಾನವ ತನ್ನ। ಎಲ್ಲ ಸಂಸಾರದೊಳು।
ಉಳ್ಳ ಶಿವನೆಂದರಿವ ಶಿವನಿಲ್ಲದಾ ವಸ್ತು।
ಇಲ್ಲ ಜಗದೆನುವ- ಘನಮಠ ||೧೦೦||

ಧಿಟವಲ್ಲದೀ ಜಗದಿ। ಸಟೆಯಾದ ಸಂಸಾರ।
ನಿಟಿಲನೇತ್ರನ ಧ್ಯಾನ। ಘಟದಿರಲು ಮಾನವನು।
ತಟಗಾಣ್ಬ ಭವದ- ಘನಮಠ ॥೧೦೧॥

ಮಂಗಲವು ಕರುನಾಡ। ದೆಲ್ಲ ಮತದ್ಧಿ ರಿಯರಿಗೆ।
ಮಂಗಲವು ಅಷ್ಟಮಪಥ ಪೂರ್ಣವಾಗಲ್ಕೆ।
ಜಂಗಮನ ಕರುಣೆ- ಘನಮಠ ॥೧೦೨॥

— ಇತಿ ೧೦೨ ನೇ ವಚನಕ್ಕೆ ಅಷ್ಟಮ ಪಥ ಮಂಗಲಂ —

## — ನವಮ ಪಥ —

### ★ ರಾಷ್ಟ್ರಸೇವೆಯ ವಚನಗಳು ★

ಧರೆಯನಾಳುವ ನರಗೆ। ಅರಸನೆಂದೆನುತಿಹರು।
ಕರುಣೆಯಿಂದವನು। ಧರೆಯ ಪಾಲಿಸದಿರಲು।
ದುರುಳ ದಾನವನು- ಘನಮಠ ॥೧॥

ಅರಸನಾಜ್ಞೆಯ ತನ್ನ। ಶಿರದಿ ಧರಿಸುತ ನಿತ್ಯ।
ಧರೆಯ ಜನರೆಲ್ಲರನು। ಕರುಣೆಯಿಂ ಪಾಲಿಸುವ।
ಪರಮ ನರಮಂತ್ರಿ- ಘನಮಠ ॥೨॥

ಜನತೆಯ ಸುಖ ದುಃಖ। ವನುಕರಿಸಿದರೆ ಸ್ವಾರ್ಥ।
ವನು ಮಾಡಿಕೊಂಡು। ಸ್ವಾರ್ಥ ಬಯಸುವ ಮಂತ್ರಿ।
ಶುನಕನವ ಜಗದಿ- ಘನಮಠ ॥೩॥

ಹೆತ್ತ ಮಕ್ಕಳ ತೆರದಿ। ತೊತ್ತಿನಾ ಸೇವೆ ಮನ।
ಸೋಕ್ತ ಮಾಡದಿಹ ಮಾನವನ ಜನ್ಮವದು।
ವ್ಯರ್ಥ ವಿಶ್ವದೊಳು- ಘನಮಠ ॥೪॥

ರಾಜ ಪ್ರಜೆರೊಳು ಪ್ರೇಮ। ನೈಜವಾಗಿರುತಿರಲು।
ಪೂಜಗಕೆ ವಂದ್ಯ ಸತ್ಯನವ ರಾಮ।
ರಾಜ ಧಿಟವಯ್ಯ- ಘನಮಠ ॥೫॥

ಸತ್ಯ ದಯೆ ಶಾಂತಿಯನು। ನಿತ್ಯ ಬಿಡದಾಳುತಿಹ।
ಸತ್ಯಾತ್ಮನವನೇ ಜಗದೊಡೆಯನಾಗಿರಲು।
ಸತ್ಯ ಹರಿಶ್ಚಂದ್ರ- ಘನಮಠ ॥೬॥

ಸತ್ಯಶವೆದವೆ ಶಾಂತಿ। ಸಹಕಾರ ತತ್ವವನು।
ನಿತ್ಯ ಭೋಧಿಸುತ ಸ್ವಾತಂತ್ರ್ಯವನು ಪಡೆದ।
ಸತ್ಯಾತ್ಮ ಗಾಂಧಿ- ಘನಮಠ ॥೭॥

ಗಾಂಧಿಯಾದೇಶ ಮನ। ದಿಂದ ಪಾಲಿಸಿ ವಿಶ್ವ।
ಬಂಧನವ ಕಳೆದು ಸ್ವಾತಂತ್ರ್ಯ ಸಾರಿದಾ।
ತಂದೆ ಶ್ರೀನೆಹರು- ಘನಮಠ ॥೮॥

ಬುದ್ಧಿಯಿಂ ಭಾರತದ। ಸಿದ್ಧಿ ಸ್ವಾತಂತ್ರ್ಯವನು।
ಗೆದ್ದು ಭಾರತದ ಹಿರಿಮಂತ್ರಿ ತಾನಾದ।
ಮುದ್ದು ಶ್ರೀ ನೆಹರೂ- ಘನಮಠ ॥೯॥

ಪಂಡಿತೋತ್ತಮನು ಭ್ರ। ಹ್ಮಾಂಡದೊಳಂ ಹೆಸರಾಗಿ।
ಖಂಡಿತಾವಾದಿ ನೆಹರು ಲಂಡನ್ನಿನೊಳು।
ಪಂಡಿತರ ಗೆದ್ದ- ಘನಮಠ ॥೧೦॥

ಈರೇಳು ವರ್ಷವೂ। ಭಾರತದ ಹಿರಿಮಂತ್ರಿ।
ಕಾರಣಿಕ ಪುರುಷ। ಪಂಡಿತ ಜವಾಹೀರ।
ನೇರವಾಗ್ಯಾಳ್ದ- ಘನಮಠ ॥೧೧॥

ನ್ಯಾಯ ನಿಷ್ಠುರನಾದಿ। ಕಾಯದೊಳು ಪರಿಶುದ್ಧ।
ಧ್ಯೇಯ ಭಾರತದ ಸ್ವಾತಂತ್ರ್ಯ ಸರದಾರ।
ಜೀಯ ಪಾಟೀಲ- ಘನಮಠ ॥೧೨॥

ವಜ್ರದೇಹಿಯು ತಾನು। ಗರ್ಜಿಸುತ ಭಾರತದಿ।
ಬೊಜ್ಜು ಬೆಳದಿರುವ। ಸಂಸ್ಥಾನಿಕರನೆಲ್ಲ।
ವರ್ಜಿಸಿದ ಶೂರ- ಘನಮಠ ॥೧೩॥

ಕಠಿಣ ಮಾನಸನವನು। ಕುಟೀಲ ತಂತ್ರದೊಳಿರುವ।
ಶಠರ ಶಿಕ್ಷಿಸುತ ಭಾರತವ ರಕ್ಷಿಸಿದ।
ನಿಟಿಲಾಕ್ಷನಂಶ- ಘನಮಠ ॥೧೪॥

ಬಾರ್ಡೋಲಿ ಜನ್ಮಸ್ಥಳ। ಭಾರತದ ಬಂಧು ಇವ।
ಶೂರತನದಿಂಗ್ಲಿಷರ ಕಾರಭಾರವನಳಿದ।
ವೀರ ಸರ್ದಾರ- ಘನಮಠ ॥೧೫॥

ತರುಳ ಶಶಿ ಸುಭಾಸ। ಕರುಣೆಯಿಂ ತಾ ಬೆಳೆದು।
ಪರಮ ದಯಾಳು ಬಡವರನು ಪೋಷಿಸುತ।
ಮೆರೆದ ಭಾರತದಿ- ಘನಮಠ ॥೧೬॥

ಭಾರತದ ಸ್ವಾತಂತ್ರ್ಯ। ವೀರರೊಳು ಮಹವೀರ।
ತೋರುತಾಂಗ್ಲರಿಗೆ ಇಂಗ್ಲಂಡದಾ ದಾರಿ।
ಭಾರತದ ಚಂದ್ರ- ಘನಮಠ ॥೧೭॥

ದೇಶ ಸೇವೆಯೆ ತನಗೆ। ಈಶಸೇವೆಯದೆಂದು।
ಗಾಸಿಗೊಳಿಸಿದನು ಇಂಗ್ಲೀಷರಾ ಮೋಸ।
ಪಾಶವನು ಹರಿದ- ಘನಮಠ ॥೧೮॥

ಭಾರತದ ಬಂಧನವ। ಬೇರ್ಪಡಿಸಲಿಕೆ ತಾನು।
ಹಾರಿದನು ದೂರ ಪರರಾಷ್ಟ್ರ ಸೇರಿದನು।
ಶೂರ ಸೇನಾನಿ- ಘನಮಠ ॥೧೯॥

ರಾಷ್ಟ್ರಕಾಗಿಯೆ ತನ್ನ। ಶ್ರೇಷ್ಠ ದೇಹವನಳಿದ।
ನಿಷ್ಠೆಯಿಂ ಭಾರತದ ಕಷ್ಟ ಕಳೆದನು ಶೂರ।
ಶೇಷ್ಠ ಸೇನಾನಿ- ಘನಮಠ ॥೨೦॥

ಭಾರತದ ಹಿರಿಮಂತ್ರಿ। ತಾರೆಯಂತವ ಬೆಳಗಿ।
ಕಾರಣಿಕ ಪುರುಷ ಲಾಲ್ಬಹಾದ್ದೂರ ಶಾಸ್ತ್ರಿ।
ತೋರಿ ಮರೆಯಾದ– ಘನಮಂತ ॥೨೧॥

ತನ್ನ ಸುಖವನು ಮರೆದು। ಅನ್ಯರ್ಹಿತವನು ಬಯಸಿ।
ಮಾನ್ಯತೆಯ ಶಾಸ್ತ್ರಿ ಲಾಲ್ಬಹಾದ್ದೂರವರು।
ಪುಣ್ಯಾತ್ಮರವರು– ಘನಮಂತ ॥೨೨॥

ಪುಣ್ಯ ಪುರುಷನು ಶಾಸ್ತ್ರಿ। ಅನ್ಯರಾಳಿಕೆಯಳಿದು।
ಪುಣ್ಯ ಭಾರತದ ಉನ್ನತಿಯು ತಾ ತೋರಿ।
ಮಾನ್ಯ ತಾನಹನು– ಘನಮಂತ ॥೨೩॥

ಪುಣ್ಯ ಪುರುಷರ ನಾಮ। ನನ್ನಿಯಿಂ ಸ್ಮರಿಸಿದೊಡೆ।
ಶುನ್ನ ಮಾನವನು ಗಣ್ಯನೆನಿಸುವ ಜಗದಿ।
ಮಾನ್ಯತೆಯ ಪಡೆವ– ಘನಮಂತ ॥೨೪॥

ಅರ್ಥಶಾಸ್ತ್ರದಿ ಗಣ್ಯ। ಸ್ವಾರ್ಥವನು ತಾ ಮರೆದು।
ಸ್ತೋತ್ರ ಮಾಡುವದು ಭಾರತದ ಜನಕೋಟಿ।
ಕೀರ್ತಿಯ ಪುರುಷ– ಘನಮಂತ ॥೨೫॥

ಮನುಜ ತಾ ಮನದಿಂದ। ಜನಸೇವೆಯನು ಮಾಡೆ।
ಮನಸಿಜಾರಿಯ ಕೃಪೆಗೆ ಪಾತ್ರನಾಗುವ ವಿಶ್ವ।
ಮಣಿಯುವದು ಅವಗೆ– ಘನಮಂತ ॥೨೬॥

## ★ ಕಲಿಕಾಲ ಪ್ರಭಾವ ವಚನ ★

ಹರಿಜನರ ಮೇಲಾಟ। ಕಿರಿಜನರ ಕೊರಚಾಟ।
ಹರಿಹರ ಪೂಜ್ಯ ಭಾವನೆಯು ಅಳಿಯುವದು।
ನರರ ನರಳಾಟ– ಘನಮಂತ ॥೨೭॥

ಮೇಲು ಕೀಳೆಂಬುವಾ। ಆಲಾಪವಳಿಯುವದು।
ಮೇಲು ಕೀಳಾಗಿ ಕೀಳು ತಾ ಮೇಲಹುದು।
ಕಾಲದಾ ಮಹಿಮೆ– ಘನಮಂತ ॥೨೮॥

ನಂಬಿಗೆಯು ಮೊದಲಿಲ್ಲ। ಸಾಂಘನ ನೆನೆಹಿಲ್ಲ।
ಕುಂಭಿನಿಗೆ ಕ್ಷೇಮ ಮೊದಲಿಲ್ಲ ವಿಶ್ವದೊಳು।
ಹುಂಬರದೆ ರಾಜ್ಯ- ಘನಮಠ ॥೧೯॥

ಸತ್ಯತೆಯು ತಾನಳಿದು। ಮಿಥ್ಯವದು ಮೇಲಾಗಿ।
ಸತ್ಯಾತ್ಮರೆಲ್ಲಾ ಅಶನ ಕಾಣದೆ ಕೂಳು।
ತುತ್ತಿಗೆರವಾಗಿ- ಘನಮಠ ॥೨೦॥

ಅನ್ನ ಅನ್ನವದೆಂದು। ಬನ್ನ ಬಿಡುವದು ಜಗವು।
ಕುನ್ನಿಗಳವೇ ರಜ್ಯ ಸಂಪನ್ನರನು ಜಗದಿ।
ಮನ್ನಿಸುವರಿಲ್ಲ- ಘನಮಠ ॥೨೧॥

ಹಿಂದೆ ಮಾಡಿದ ಕರ್ಮ। ಇಂದು ಕಾಡುತ್ತಿಹುದು।
ಮುಂದೆಂದು ದ್ರೋಹ ಮನದಿ ಮಾಡಲಿಬೇಡ।
ದಂದುಗವು ಬಹಳ- ಘನಮಠ ॥೨೨॥

ಹೊನ್ನು ಹೆಣ್ಣು ಮಣ್ಣು। ಅನ್ಯರವು ಬಯಸದಿರು।
ನಿನ್ನಂತೆ ಪರರ ವಡವೆಗಾಸಿಪ ನಿನ್ನ।
ಮಣ್ಣು ಗೂಡಿಪವು- ಘನಮಠ ॥೨೩॥

ದೇಶ ದ್ರೋಹವು ಬೇಡ। ಈಶ ದೇಶದೊಳುಂಟು।
ಹೇಸದೆ ಮನುಜ ದೇಶ ಘಾತಕ ಮಾಡೆ।
ಈಶ ತಾ ಮೆಚ್ಚ- ಘನಮಠ ॥೨೪॥

ನಿನ್ನ ನುಡಿಯೊಂದಾಗಿ। ನಡೆಯು ಬೇರಾಗಲ್ಕೆ।
ಮನ್ನಿಸದು ಜಗವು ಕಾದಿಹುದು ದುಃಖ ಸಂ।
ಪನ್ನ ನೀನಾಗೋ- ಘನಮಠ ॥೨೫॥

ನಡೆನುಡಿಯು ಒಂದಾಗಿ। ಮೃಢನೊಲಿಮೆ ಪಡೆಯಲ್ಕೆ।
ಕಡೆತನಕ ನಿನ್ನ ಸಂಸಾರ ಸಾಗರದಿ।
ಸಡಗರವ ಕಾಣೋ- ಘನಮಠ ॥೨೬॥

## ★ ರಾಷ್ಟ್ರೀಯ ವಚನನಗಳು ★

ಸಾದರದಿ ಮಾನವನೆ। ಖಾದಿಯನು ನೀ ತೊಟ್ಟು।
ಮೇದಿನಿಯು ನಮ್ಮ ಭಾಶತ ಬಡತನವ।
ನೀ ದೂಡು ಬೇಗ- ಘನಮಠ ||೩೭||

ಯಂತ್ರ ತಂತ್ರಗಳೇಕೆ। ಮಂತ್ರ ಮಾಟಗಳೇಕೆ।
ಜಂತ್ರದಿಂ ನೂಲು ತೆಗೆಯಲ್ಕೆ ಭಾರತ ಸ್ವ।
ತಂತ್ರ ತಾನಹುದು- ಘನಮಠ ||೩೮||

ಖಾದಿಯ ಉತ್ಪತ್ತಿ। ಬೋಧಿಸಿದನವ ಗಾಂಧಿ।
ಹಾದಿ ಸ್ವಾತಂತ್ರ್ಯ ಭಾರತಕೆ ಮೊದಲಾಯ್ತು।
ಪೋದ ಪರದೇಶಿ- ಘನಮಠ ||೩೯||

ಇಂಗ್ಲೀಷರಾ ತಂತ್ರ। ದಿಂಗಿತವ ತಾನರಿದು।
ಭಂಗ ಬಡಿಸಿದರು ರಾಷ್ಟ್ರದಾ ಪ್ರೇಮಿಗಳು।
ನೆಹರು ಸರ್ದಾರ- ಘನಮಠ ||೪೦||

ಹತ್ತು ಮೇಲೊಂಬತ್ತು। ಮತ್ತೆ ನಲವತ್ತೇಳು।
ಹತ್ತಿ ಬಂದಿರುವ ಆಗಸ್ಟ ಹದಿನೈದು।
ಸೊತ್ತು ಸ್ವಾತಂತ್ರ್ಯ- ಘನಮಠ ||೪೧||

ಭಾರತದ ಸ್ವಾತಂತ್ರ್ಯ। ವೀರ ನೆಹರು ಗಾಂಧಿ।
ದಾರಿ ತೋರಿದರು ಇಂಗ್ಲಿಷರಿಲ್ಲಿಂದಾ।
ಜಾರಿದರು ಬೇಗ- ಘನಮಠ ||೪೨||

— ಇತಿ ೪೨ ನೇ ವಚನಕ್ಕೆ ನವಮ ಪಥ ಮಂಗಲಂ —

## — ದಶಮ ಪಥ —

### ★ ಕೃಷಿ ಜೀವನದ ವಚನಗಳು ★

ಸತ್ಯಶಮೆದಮೆಯೆಂಬ ನಿತ್ಯ ತಾಳನೆ ಮೂರು।
ಹೊತ್ತಿರುವ ಕೃಷಿಕನ। ಬಿತ್ತುವ ಕೂರಿಗೆಯು।
ಸೊತ್ತು ವಿಶ್ವಕ್ಕೆ- ಘನಮಠ ॥೧॥

ಧರ್ಮದಿಂದ್ರಿಯದಿಂದ। ಕರ್ಮ ಮಾಡಲು ಕೃಷಿಕ।
ಮರ್ಮವನು ಅರಿತ ಶರಣ ಜೀವನವೆ ಸ।
ದ್ಧರ್ಮವದು ಜಗಕೆ- ಘನಮಠ ॥೨॥

ಬಿತ್ತುವ ವಕ್ಕಲಿಗ। ಚಿತ್ತ ಚಂಚಲ ಕಳೆದು।
ಸತ್ಯ ಜಿಂಹ್ವೆಯೊಳು। ಸ್ಥಿರವಿರಲಿ ಕೂರಿಗೆಯು।
ಗೊತ್ತುಗುರಿವ ಕಾಣೊ · ಘನಮಠ · ॥೩॥

ಒಕ್ಕಲಿಗ ನೀನನ್ನ। ಇಕ್ಕು ನಿರ್ಗತಿಗರಿಗೆ।
ಸೊಕ್ಕು ಬೇಡೈ ನೀನು। ಗುಣವಂತನಾಗಲ್ಕೆ।
ಮುಕ್ಕಣ್ಣ ನೊಲಿವ- ಘನಮಠ ॥೪॥

ಹಸಿದವರಿಗನ್ನವನು। ಖುಷಿಯಿಂದ ನೀಡಲ್ಕೆ।
ಕೃಷಿಕನೆ ನಿನ್ನ ಕಾಯಕದ ಕೈಗೂಲಿ।
ಪಶುಪತಿಯು ಕೊಡುವ- ಘನಮಠ ॥೫॥

ಕರಚರಣ ಮೊದಲಾದ। ಶರಿರೇಂದ್ರಿಯಗಳಿಂದ।
ಪರಸೊತ್ತನೆಂದೂ। ಬಯಸದಿಹ ಕೃಷಿಕನಿಗೆ।
ಹರನೊಲಿಮೆ ನಿತ್ಯ- ಘನಮಠ ॥೬॥

ಕಾಯವಾಚಾ ಮನದ। ಆಯತವನೆಂದು ಅ।
ನ್ಯಾಯ ವನ್ನೆಂದೂ ಗೈಯ್ಯದವ ವಿಶ್ವಕ್ಕೆ।
ನ್ಯಾಯದಾ ಮೂರ್ತಿ- ಘನಮಠ ॥೭॥

ಮನವ ನಿರ್ಮಲತೆಯೊಳು। ತನುವ ದಂಡಿಸಿ ಕರ್ಮ।
ವನು ಗೆಯ್ವ ಕೃಷಿಕ ತ್ರಿಣಯನೊಲಿಮೆಯ ಪಡೆವ।
ಜನಮನಕೆ ವಂದ್ಯ- ಘನಮಹ ।೮॥

ಯಾವನೇ ಕಾಯಕವ ಭಾವ ಶುದ್ಧತೆಯಿಂದ।
ಆವ ಗೈಯ್ಯುವನವಗೆ। ಭಾವಜಾರಿಯ ಒಲಿಮೆ।
ಯಾವಾಗಲುಂಟು- ಘನಮಹ ॥೯॥

ಎಲ್ಲ ಕಾಯಕದೊಳಗೆ। ಸಲ್ಲಿಲಿತ ಕೃಷಿಕರ್ಮ।
ಸಲ್ಲಿ ಸುತ್ತಿಹದು ಜೀವಕೋಟಿಗೆ ಅನ್ನ।
ಬಲ್ಲವರ ನುಡಿಯು- ಘನಮಹ ॥೧೦॥

ಸಕಲ ಪಂಥಗಳಲ್ಲಿ। ಅಕಲಂಕ ಕೃಷಿಪಂಥ।
ಭಕುತಿಗೂ ಶಕುತಿಗೂ। ಮುಕುತಿಗಿದು ನಿರ್ಮಲದ।
ಮುಕುರವೀ ಪಂಥ- ಘನಮಹ ॥೧೧॥

ಕೃಷಿಕನೇ ಬೆನ್ನೆಲಬು। ಋಷಿವೆತ್ತ ಜಗಕೆಲ್ಲ।
ರಸನೆಯಿಂ ಬಣ್ಣಿಸಲಸಾಧ್ಯವೀ ಕೃಷಿಕರ್ಮ।
ವಿಸುನಿಯುಂತಹುದು- ಘನಮಹ ॥೧೨॥

ಕೃಷಿಯೆ ಪ್ರಾಧಾನ್ಯವು। ಕೃಷಿ ಸಕಲ ಮಾನ್ಯವು।
ಕೃಷಿಯಿಂದ ಸಕಲ। ಷಡಿಪದಾರ್ಥವು ಜಗದಿ।
ಕೃಷಿಪಂಥ ಮೇಲು- ಘನಮಹ ॥೧೩॥

ಆ ಯೋಗಿ ಈ ಯೋಗಿ। ಕೃಷಿಕ ಭುವನಕೆ ಯೋಗಿ।
ಯೋಗಿ ನೇಗಿಲಕೆ। ನಿಜಯೋಗಿ ಅವನಿಂದ।
ಆಗುಹೋಗುಗಳು- ಘನಮಹ ॥೧೪॥

ರಾಗ ಭೋಗತ್ಯಾಗ! ಯೋಗವೆಲ್ಲವು ಜಗದಿ।
ಆಗಮ ಶೃತಿಶಾಸ್ತ್ರ ಪೌರಾಣತತಿಗಳು।
ಬಾಗುವವು ಕೃಷಿಗೆ- ಘನಮಹ ॥೧೫॥

ಅರಿತು ಮಾಡುವದೊಳಿತು। ಮರವೆಯದು ತರವಲ್ಲ।
ಕಿರಿದಾಗಿ ಕಾಂಬ ಕೃಷಿಕರ್ವ ವಿಶ್ವಕ್ಕೆ।
ಹಿರಿದೆಲ್ಲದರೊಳು— ಘನಮಠ ॥೧೬॥

ಹಕ್ಕಿ ಮೊಟ್ಟೆಯನಿಟ್ಟು। ಅಕ್ಕರದಿ ಮರಿಮಾಡಿ।
ರೆಕ್ಕೆ ಬರುವತನಕ। ಕೃಷಿಕನ ಧ್ಯಾನವನು।
ಲೆಕ್ಕಿಪುದು ಮನದಿ— ಘನಮಠ ॥೧೭॥

ಒಕ್ಕಲಿಗನೆಂಬುವ। ಅಕ್ಕರೆಯ ನುಡಿ ಚಂದ।
ತಕ್ಕಂತೆ ಕೃಷಿ ಮಾಡಿ। ಧಾನ್ಯದ ರಾಶಿಯನು।
ಒಕ್ಕುವನು ಕೃಷಿಕ— ಘನಮಠ ॥೧೮॥

ಶಂಭುನಾಮವ ಕೃಷಿಕ। ನಂಬಿ ತಾ ಕೃಷಿಮಾಡೆ।
ಇಂಬು ಗೊಡುತಿಹಳು। ಭೂದೇವಿ ಕೃಷಿಕನವ।
ಕುಂಭಿನಿಗೆ ಮಿಗಿಲು— ಘನಮಠ ॥೧೯॥

ಆತಾಯಿ ಈತಾಯಿ। ಕೃಷಕನೊಡನಾಡುವ।
ಭೂತಾಯಿ ಮಿಗಿಲು। ವಿಶ್ವಕ್ಕೆ ಕೃಷಿಕನವ।
ತಾತನೆಲ್ಲಕ್ಕೆ— ಘನಮಠ ॥೨೦॥

ಆದಿಯಿಂ ಕೃಷಿ ಪಥವ। ಸಾಧಿಸುತ ಮಾನವನು।
ಶೋಧಿಸಿಹನನ್ನ ದೊರಕುವ ಸತ್ಪಥವ।
ಸಾಧಕನೆ ಮಿಗಿಲು— ಘನಮಠ ॥೨೧॥

ತನ್ನ ತಾಸೇ ಸವಿಸಿ। ಚನ್ನಾಗಿ ಬೆವರಿಳಿಸಿ।
ಅನ್ನವನು ದೊರಕಿಸುವ। ಕೃಷಿಕನವ ಜನುಪುರದ।
ಚನ್ನನ ಕೃತಿಯು— ಘನಮಠ ॥೨೨॥

ತನ್ನ ದೇಹದ ಕೃಷಿಯ। ಮುನ್ನ ಮಾಡಲು ಕೃಷಿಕ।
ಚೆನ್ನಾಗಿ ಶಿವನ ಒಲುಮೆಯಿಂ ವಿಶ್ವದೊಳು।
ಉನ್ನತಿಯ ಪಡೆವ— ಘನಮಠ ॥೨೩॥

ಕಾಯ ಪರಿಶುದ್ಧದಲಿ। ಧ್ಯೇಯ ಸಾಧನೆಗೈಯ್ಯೋ।
ಕಾಯ ಜಾರಿಯ ಕೃಪೆಯು ಕಾಯಕದ ಕೃಷಿಕನಿಗೆ।
ನ್ಯಾಯ ದೊರಕಿಪುದು- ಘನಮಠ ॥೨೪॥

ಶರಣ ಸಮುದಾಯವದು। ಹರನ ಕೃಪೆಯಿಂದವರು।
ಶರೀರ ಪಾವಿತ್ರ್ಯ। ನತಗೈಯ್ವ ಕಾಯಕದ।
ಸ್ಥಿರವೆ ಕೈಲಾಸ- ಘನಮಠ ॥೨೫॥

ಯಾವ ಕಾಯಕವಿರಲಿ। ಭಾವನಿರ್ಮಲತೆಯಿಂ।
ಗೈಯ್ವ ಮಾನವಗೆ ಶಿವನು ಸ್ಥಿರಮುಕ್ತಿ ಪದ।
ಯೀಯ್ವನಿದು ಸತ್ಯ- ಘನಮಠ ॥೨೬॥

ಶರೀರ ಶುದ್ಧತೆಯಿಂದ। ಹರಶರಣರಾದಿಯೊಳು।
ತರತರದ ಕಾಯಕವ ಗೈಯ್ದರವರಂತ್ಯಕ್ಕೆ।
ಸ್ಥಿರಮುಕ್ತಿಯುತರು- ಘನಮಠ ॥೨೭॥

ಮಾಳಿಗೆಯ ಮಾರಯ್ಯ। ಮಡಿವಾಳ ಮಾಚಯ್ಯ।
ಕಾಲಾರಿ ಶರಣ ಸಮುದಾಯ ತಮ್ಮಯಾ।
ಶೀಲ ಮತಿಯುತರು- ಘನಮಠ ॥೨೮॥

ಕುಲಬೇರೆಯಾದರೂ। ಛಲವಂತೆ ಶರಣರು।
ಕುಲಗೆಡಿಸಿ ತಮ್ಮ ಛಲದಿಂದ ಗೆದ್ದ ಶಿವ।
ಕುಲಜರಾಗಿಹರು- ಘನಮಠ ॥೨೯॥

## ★ ಕಾಯಕದ ಮಹಿಮೆ ★

ಕುಂಬಾರ ಕಾಯಕವು। ಸಂಭ್ರಮವು ವಿಶ್ವಕ್ಕೆ।
ಇಂಬುಗೊಡುತಿಹುದು। ವಿಶ್ವದಾ ಪಾಕಕ್ಕೆ।
ಶಂಭುವಿನ ಒಲಿಮೆ- ಘನಮಠ ॥೩೦॥

ಪ್ರತಿಯೊಂದು ಕಾಯಕದ। ಇತಿ ಮಿತಿಯನರಿಯುತ್ತ।
ಶಿತಿಕಂಠಧ್ಯಾನದಿಂ ಕಾಯಕವ ಮಾಡಲ್ಕೆ।
ಕ್ಷಿತಿಯೊಳವಧನ್ಯ- ಘನಮಠ ॥೩೧॥

ಕಾಯಕದ ಪರಿಪೂರ್ಣ। ಆಯತವನರಿಯುತ್ತ।
ಜೀಯ ಪರಶಿವನ ಧ್ಯಾನದಿರೆ ಮಾನವಗೆ।
ಆಯತವು ಶಿರಿಯು- ಘನಮಠ ॥೩೨॥

ಕುಂಭಾರ ಗುಂಡಯ್ಯ। ನಂಬಿ ಕಾಯಕ ಮಾಡೆ।
ಸಾಂಬ ತಾನಿತ್ತ ಗಣಪದವಿ ಕಾಯಕವು।
ಕುಂಭಿನಿಗೆ ಮಿಗಿಲು- ಘನಮಠ ॥೩೩॥

ನೇಕಾರ ಕಾಯಕದಿ। ಸಾಕಾರ ಶಿವನಾಮ।
ಏಕಾಂತದೊಳಗೆ। ಧ್ಯಾಸಿಸುತದಾಸ್ಮಯ್ಯ।
ಲೋಕದೊಳು ಪೂಜ್ಯ- ಘನಮಠ ॥೩೪॥

ದೇವರದಾಸ್ಮಯ್ಯ। ಭಾವಜಾರಿಯ ಶರಣ।
ಭಾವ ಶುದ್ಧಿಯೊಳು। ಕಾಯಕದಿ ನಡೆದನವ।
ದೇವ ಸನ್ನಿಧಿಗೆ- ಘನಮಠ ॥೩೫॥

ಸತಿಪತಿಗಳುಭಯರು। ಜೊತೆಗೂಡಿ ಕಾಯಕವ।
ಹಿತದಿಂದ ಮಾಡೆ ಶರಣ ಸಂಸಾರಿಗಳು।
ಕ್ಷಿತಿಯಿಲ್ಲಿ ಸ್ಥಿರರು- ಘನಮಠ ॥೩೬॥

ಬಸವ ಕಲ್ಯಾಣದೊಳು। ಪಶುಪತಿಯ ಶರಣಗಣ।
ವಸುಧಿಗ್ಗೆ ಸರಾದ ಕಾಯಕವ ಮಾಡುತ್ತ।
ಯಶವ ಪಡೆದಿಹರು- ಘನಮಠ ॥೩೭॥

## ★ ಕಲಿಕಾಲ ಪ್ರಭಾವ ವಚನ ★

ಕಲಿಕಾಲದೊಳು ಜಗದಿ। ಲಲನೆಯರ ಒಡೆತನವು।
ಛಲದಿಂದ ರಾಜ್ಯಭಾರವನ್ನು ನಡೆಸುವರು।
ಕುಲಕೋಟಿ ನಾರಿ- ಘನಮಠ ॥೩೮॥

ತಿಪ್ಪೆಯದು ಉಪ್ಪರಿಗೆ। ಉಪ್ಪರಿಗೆಯದು ತಿಪ್ಪಿ।
ಮುಪ್ಪುರ ಹರನ। ಭಜನೆ ಕೀರ್ತನೆ ನಾದ।
ಸಪ್ಪಳವು ಇಲ್ಲ- ಘನಮಠ ॥೩೯॥

ರಾಜ್ಯರಾಜ್ಯದಿ ಕ್ರಾಂತಿ। ಮೂಜಗದಿ ನಡೆಯುವದು।
ಸಾಜದಾಡಳಿತೆ ಮೊದಲಿಲ್ಲ ವಿಶ್ವದೊಳು!
ರಾಜ್ಯಕ್ಕೆ ಕೇಡು– ಘನಮಠ ॥೪೦॥

## ★ ಸನ್ಮಿಶ್ರ ವಚನಗಳು ★

ಒಕ್ಕಲಿಗ ಮುನಿಯಲ್ಕೆ। ಬಿಕ್ಕುವದು ಜಗವೆಲ್ಲ।
ಒಕ್ಕಲಿಗ ಗೈಯ್ವ ಕೃಷಿಯು ಜಗದಾಧಾರ।
ಒಕ್ಕಲಿಗ ದೇವ– ಘನಮಠ ॥೪೧॥

ನಿನ್ನ ಮನಬುದ್ಧಿಯದು। ಚನ್ನಾಗಿ ಇರುತಿರಲು।
ಮುನ್ನ ಮನ್ನಿಸುತ। ಮುಂದಕ್ಕೆ ಕರೆವರೈ।
ಚನ್ನಾಗಿ ನಡೆಯೋ– ಘನಮಠ ॥೪೨॥

ನಿನ್ನ ಮನಭಾವವದು। ಚನ್ನಾಗಿ ಇರದಿರಲು।
ನಿನ್ನ ದೂಡುವದು। ಜಗವೆಲ್ಲ ಮನ್ನಿಸದು।
ಕುನ್ನಿ ನೀನಹುದು– ಘನಮಠ ॥೪೩॥

ಅನ್ನ ದಾನಿಯು ಜಗದಿ। ಮಾನ್ಯನೈ ಸರ್ವರೊಳು।
ನೀನಿತ್ತ ಅನ್ನ ನಿನ್ನಗಾಪತ್ತಿನೊಳು।
ಮುನ್ನ ರಕ್ಷಿಪದು– ಘನಮಠ ॥೪೪॥

ಅನ್ನವಿತ್ತವರನ್ನು ಮುನ್ನೆಂದು ಮರೆಯದಿರು।
ಬಿನ್ನಿಲ್ಲದಂತೆ ಸರ್ವಸಮತಾಭಾವ।
ಮನ್ನಣೆಯು ನಿನಗೆ– ಘನಮಠ ॥೪೫॥

ಗುಣವಂತನಾಗೆಲವೊ। ಹಣದಾಶೆ ಮಾಡದಿರು।
ಗುಣ ನಿನ್ನ ಜೀವನವ। ಕಡೆತನಕ ರಕ್ಷಿಪುದು।
ಹಣ ಕಾಯದೆಂದು– ಘನಮಠ ॥೪೬॥

ತಾಯ್ನುಡಿಯ ಮರೆಯದಿರು। ಬಾಯ ರುಚಿಯ ಬಯಸದಿರು।
ತಾಯಿ ಋಣನನೆಂದೂ ಮರೆಯದಿರು ಬಾಲಕನೆ।
ಕಾಯುವದು ನಿನ್ನ– ಘನಮಠ ॥೪೭॥

ತಂದೆ ತಾಯ್ಮುಡಿ ಮನದಿ। ಒಂದೆ ಭಾವದಿ ಕೇಳು।
ಸಂದೇಹ ಬೇಡ ತಂದೆ ತಾಯ್ಮುಡಿ ವೇದ।
ಕುಂದು ಬರದೆಂದು- ಘನಮಠ ||೪೮||

ನಾಡನುಡಿಯಭಿಮಾನ। ದೂಡದಿರು ಮನದೆಂದು।
ಕೇಡು ನಿನಗುಂಟಃ ಅಭಿಮಾನವಿಲ್ಲದಿರೆ।
ಹೇಡಿಯಾಗುವಿಯೊ- ಘನಮಠ ||೪೯||

ಚಿಕ್ಕ ವಯದೊಳು ನೀನು। ಸೊಕ್ಕಿನವನಾಗದಿರು।
ಸಿಕ್ಕ ಸಿಕ್ಕವರ। ಸಹವಾಸ ಬೇಡವೈ।
ಮುಕ್ಕಣ್ಣನೊಲಿವ- ಘನಮಠ ||೫೦||

ಪುಣ್ಯಮಯ ಗುರುದೇವ। ನಿನ್ನಭಯ ಹಸ್ತಗಳ।
ಇನ್ನಾದರೀ ಕುನ್ನಿ ಮಾನವನ ಮಸ್ತಕದಿ।
ಚೆನ್ನಾಗಿ ಇರಿಸೊ- ಘನಮಠ ||೫೧||

ಮರೆಯದಿರು ಗುರುವರನೆ ತರುಳನೊಳು ಕರುಣೆಯಿಂ।
ಸರಗಟ್ಟಿ। ಹರಿವ ಕಣ್ಣೀರನೊರೆಸಯ್ಯ।
ಮರೆಯನೆಂದೆಂದೂ- ಘನಮಠ ||೫೨||

ಎನ್ನ ಬೇಡಿಕೆಯನ್ನು ಮಾನ್ಯ ಮಾಡೈಯೋಗಿ।
ನಿನ್ನ ಸದ್ಧರ್ಮ ಜನತೆಯೊಳು ನೆಡೆಸಲ್ಕೆ।
ಸನ್ನುತನೆ ಬಾರೋ- ಘನಮಠ ||೫೩||

ಮತ್ತೆ ನೀ ಧರೆಯೊಳಗೆ। ಚಿತ್ತ ಜಾರಿಯ ಧರ್ಮ।
ಬತ್ತಿಹುದು ಬೇಗ। ಹೊತ್ತಿಸೈ ಶಿವಯೋಗಿ।
ಒತ್ತರದಿ ಬಾರೋ- ಘನಮಠ ||೫೪||

ಸಹಕಾರ ಶಕ್ತಿಯೇ। ಇಹಪರಕೆ ಕಾರಣವು।
ಸಹಕಾರದೊಳಗೆ ಶಿವನುಂಟು ವಿಶ್ವಕ್ಕೆ।
ಸಹಕಾರ ಮುಖ್ಯ- ಘನಮಠ ||೫೫||

ಶಾರದೆಯು ಇರುವಲ್ಲಿ। ಮಾರಮಾತೆಯು।
ಊರ್ವರೊಂದಿಯೇ ಸಾಹಿತ್ಯ ಗ್ರಂಥಾಗಿ।
ತೋರುವದು ಜಗದೀ- ಘನಮಠ ||೫೬||

ಕವಿಯ ಕೃತಿ ನಾಡಿನೊಳು। ರವಿಯ ಛವಿ ಕಾಣಲ್ಕೆ।
ಸವಿನಯದಿ ಬೇಡ್ವೆ ಶಿರಿವಂತರಾ ಕೃಪೆಯು।
ಅವನಿಯೊಳು ಮುಖ್ಯ- ಘನಮಠ ||೫೭||

ಶಿವಜೀವರೈಕ್ಯತೆಯು ಅವನಿಯೊಳು ಲಿಂಗಾಗಿ।
ಭುವಿಜನರ ಕಲ್ಯಾಣಕಾರಕವು ತಾರಕವು।
ಶಿವನೆ ಶಿವಲಿಂಗ- ಘನಮಠ ||೫೮||

ಪರಮ ಶಿವಲಿಂಗವದು। ನಿರುಪವು ನಿರ್ಗುಣವು।
ಹರಶಕ್ತಿ ವುಭಯರಾ ಸಗುಣ ವಿಶ್ವಾತ್ಮವಿದು।
ಚರವೆ ಚರಲಿಂಗ- ಘನಮಠ ||೫೯||

ಕರದಿಷ್ಟಲಿಂಗವಿದು। ಹರಿಸುವದು ಮಾನವನ।
ದುರಿತ ದೂರ್ಮಾಡಿ ಹರನೆನಿಸುವದು ನರನ।
ಪರಮ ಶಿವಲಿಂಗ- ಘನಮಠ ||೬೦||

ಗೋಮಾತೆಯಿಂ ಬಂದ। ಗೋಮಯುವ ದಹಿಸಲ್ಕೆ।
ಭೂಮಿಯೊಳಗದುವೆ ಭಸ್ಮ ವೆನಿಸುವದದನು।
ನೇಮದಿಂ ಧರಿಸೋ- ಘನಮಠ ||೬೧||

ಭೂತಿಯನು ಧರಿಸಲ್ಕೆ। ಭೂತಬಾಧೆಯರ ನಾಶ।
ಪಾತಕವ ಕಳೆವ ಪಾವನವು ಭಸ್ಮವಿದು।
ಖ್ಯಾತಿ ವಿಶ್ವದೊಳು- ಘನಮಠ ||೬೨||

ಮೂರು ಬೆರಳಿನ ಭಸ್ಮ। ತೋರಲ್ಕೆ ಹಣೆಯಲ್ಲಿ।
ವೀರನೆನಿಸುತೆ ನರನ। ಹರಭಕ್ತರೆನಿಸುವದು।
ಘೋರಘವುನಾಶ- ಘನಮಠ ||೬೩||

ನೀಲಕಂಠನೆ ದೇವ। ನೀಲತನು ಸುಖದೇವ।
ವ್ಯಾಲಮಾಲನೆ ದೇವ। ಫಾಲನೇತ್ರನೇ ಜಗವ।
ಪಾಲಿಸೈ ನಿರುತ- ಘನಮಠ ॥೧೪॥

ಕಾಮವೈರಿಯೆ ದೇವ। ಸೋಮಧಾರಿಯೆ ದೇವ।
ಸ್ವಾಮಿ ಶಂಕರನೇ ಪ್ರೇಮದಿಂದೀ ಜಗವ।
ಪ್ರೇಮದಿಂ ಪೊರೆಯೊ- ಘನಮಠ ॥೧೫॥

ಉರಗಮಾಲೆಯು ನಿನ್ನ। ಕೊರಳೊಳಗೆ ಧರಿಸಿರುವಿ।
ಶಿರದಿ ಧರಿಸಿರುವಿ। ಧರೆಯು ಪಾವನಗಂಗೆ।
ಗಿರಿಜೆಪತಿ ಕಾಯೋ- ಘನಮಠ ॥೧೬॥

ಕರದಿರುವ ಶೂಲದಿಂ। ಇಂದು ಕಾಲನ ಕೊಂದೆ।
ಹರುಷದಿಂದಮರಕವಿಯು ಪಾಡುವ ನಿನ್ನ।
ಹಿರಿಯ ಗುಣಗಾನ- ಘನಮಠ ॥೧೭॥

## ★ ಕರ್ನಾಟಕದ ವರ್ಣನೆ ವಚನ ★

ಸತ್ಯಯುಗದಾರಂಭ। ಶ್ರೇಷ್ಠ ಕನ್ನಡ ನಾಡು।
ಮತ್ತೆ ಮಸ್ವಾದಿ ಋಷಿ ಬಣ್ಣಿಸಿದ ನಾಡು।
ಚಿತ್ತಕಾನಂದ- ಘನಮಠ ॥೧೮॥

ವೀರಾದಿ ವೀರನವ। ಶೂರ ಮಾರುತಿ ನಾಡು।
ಮಾರ ಹರಮತ। ವೀರಶೈವರಗಣಿತ ಸಂಖ್ಯೆ।
ತೋರುವೀ ನಾಡು- ಘನಮಠ ॥೧೯॥

ಸಿದ್ಧ ರೇವಣ ಶಿವಾದ್ವೈತ್ಯ ಮತ ಶಿವನಾಡು।
ಮಧ್ವ ರಾಮಾನುಜಾದ್ವೈತ ಶಂಕರ ನಾಡು।
ಬುದ್ಧದಯೆ ನಾಡು- ಘನಮಠ ॥೨೦॥

ಬಸಾವಾದಿ ಪ್ರಮಥರಿಂ। ಹೆಸರಾದುದೀನಾಡು।
ವಸುಧಿಯೊಳಗ್ಗೆ ಸರು। ಪಡೆದುದೀ ಕರುನಾಡು।
ದಶದಿಶದಿ ಖ್ಯಾತಿ– ಘನಮಠ ॥೭೧॥

ಎಲ್ಲ ಮತಗಳು ಇಲ್ಲಿ। ಉಲ್ಲಾಸದಿಹ ನಾಡು।
ಎಲ್ಲ ಕಲೆ ಕವಿವಾಗ್ಮಿ। ಮಲ್ಲಯೋಧರು ಸದಾ।
ಇಲ್ಲಿರುವ ನಾಡು– ಘನಮಠ ॥೭೨॥

## ★ ಶ್ರೀ ಘನಮಠ ಶಿವಯೋಗೀಶ್ವರ ಪ್ರಾರ್ಥನಾ ವಚನ ★

ಗುರುವೆ ಘನಮಠ ಯೋಗಿ। ತ್ವರದಿಂದ ನೀ ಸಾಗಿ।
ಭರದಿ ಪುನರವತಾರ ಮಾಡಲ್ಕೆ ಶಿವಯೋಗಿ।
ಧರೆಗೆ ನೀ ಬಾರೋ– ಘನಮಠ ॥೭೩॥

ಶಿವಯೋಗಿವರ್ಯನೆ ಭವರೋಗ ವೈದ್ಯನೆ।
ಶಿವಮತೋದ್ಧಾರಕೆ ಅವತರಿಸು ನೀ ಬೇಗ।
ಭುವನ ಬರಡಾಯ್ತು– ಘನಮಠ ॥೭೪॥

ಹಲವು ದೇಶವ ತಿರುಗಿ ಕೆಲವೂರ ನೀ ನಂಬಿ।
ನಿಲಯ ಸ್ಥಿರ ಮಾಡಿ ನೆಲೆಸಲ್ಕೆ ತ್ವರೆ ಮಾಡಿ।
ಚಲುವ ನೀ ಬಾರೊ– ಘನಮಠ ॥೭೫॥

ಎನ್ನ ಬೇಡಿಕೆಯನ್ನು। ಮಾನ್ಯಮಾಡೈ ನೀನು।
ಇನ್ನೊಮ್ಮೆ ಧರೆಯ ಪಾವನವ ಮಾಡಲ್ಕೆ।
ಮುನ್ನ ನೀ ಬಾರೋ– ಘನಮಠ ೭೬॥

ಶಿವನಾಜ್ಞೆಗಿಂತಲೂ। ಶಿವಯೋಗಿ ನಿನ್ನಾಜ್ಞೆ।
ಅವನಿಯೊಳಗಧಿಕ ವೆಂದರಿದು ಕರೆಯುವೆವು।
ಜವದಿ ನೀ ಬಾರೋ– ಘನಮಠ ॥೭೭॥

ಲೋಕರಕ್ಷಕ ನೀನು। ಏಕೆ ನಮ್ಮನು ತೊರೆದೆ।
ಸಾಕಾಯ್ತು ಕೆಲವೂರ ಭಕ್ತರ ಸೇವೆಯದು।
ನೀ ಕರುಣಿ ಬಾರೋ- ಘನಮಠ ॥೭೮॥

ಕಲಿಕಾಲ ಮಹಿಮೆ ಇದು। ಬಲಹೀನರಾಗಿಹೆವು।
ಛಲದಿಂದ ಬಾರೋ ಕೆಲವೂರ ಭಕ್ತರನು।
ಸಲಹಲ್ಕೆ ಬೇಗ- ಘನಮಠ ॥೭೯॥

ಯತಿವರ್ಯ ನೀ ನಿರದ। ಕತದಿಂದ ನಾವೆಲ್ಲ।
ಪತಿಯಿಲ್ಲದಾ ಸತಿಯ ತೆರನಂತೆ ಬಳಲುವೆವು।
ಹಿತದ ಗುರು ಬಾರೋ- ಘನಮಠ ॥೮೦॥

ಶಿವಯೋಗಿ ಗುರುವರ್ಯ। ಭವರೋಗ ವೈದ್ಯನೀ।
ಅವಧರಿಸು ಕೆಲವೂರ ಗುರುಮಠದ ಅಮರಕವಿ।
ಅವಿರತವು ನೆನೆವ- ಘನಮಠ ॥೮೧॥

ನಿನ್ನಭಯ ಹಸ್ತಗಳ। ಪುಣ್ಯದಿಂದೀ ಕೃತಿಯ।
ನಿನ್ನ ಪದ ಪದ್ಮಯುಗಳಕ್ಕೆ ಅರ್ಪಿಸುವೆ।
ಸನ್ನುತನೆ ಗ್ರಹಿಸೋ- ಘನಮಠ ॥೮೨॥

ಶಂಕರನ ಸುತ ನಾನು। ಕಿಂಕರನು ಅಮರಕವಿ।
ಮಂಕನಾಗಿರುವೆ ಕೆಲವೂರಗಾತುರದಿ।
ಶಂಕಿಸದೆ ಬಾರೋ- ಘನಮಠ ॥೮೩॥

ತನುವೆಂಬ ತೋಟದೊಳು। ಮನವೆಂಬ ಮರ್ಕಟವು।
ವನವ ಹುರಿಯಲ್ಕೆ ಬಿಸುಗುತಿಹ ಕೋತಿಯನು।
ಮಣಿಸಿ ನಿಗ್ರಹಿಸೋ- ಘನಮಠ ॥೮೪॥

ಭಾರತಕೆ ಮಂಗಲವ। ಹಾರೈಸಿ ಮನದಿಂದ।
ವೀರರೆನಿಸಿರುವ ರಾಷ್ಟ್ರ ಸೇವಕರ ಮನ।
ವಾರೆ ನೀ ಪೊರೆಯೋ- ಘನಮಠ ॥೮೫॥

ಕನ್ನಡದ ಗುರು ಜನಕೆ। ಮುನ್ನ ಬಾಗಿಸಿ ಶಿರವ।
ಚನ್ನಾಗಿ ನಮ್ಮ ಕನ್ನಡಾಂಬೆಯ ಚರಣ।
ಮುನ್ನ ಮಣಿಯುವೆನು- ಘನಮಠ ॥೮೬॥

ಭಾವವೇ ಬ್ರಹ್ಮವು। ಭಾವವೇ ಜಗದರಿವು।
ಭಾವವಿಲ್ಲದಿರೆ ಜಗವೆಲ್ಲ ಶೂನ್ಯವದು।
ಭಾವವೇ ಬ್ರಹ್ಮ- ಘನಮಠ ॥೮೭॥

## ★ ಈಶ್ವರೇಚ್ಛೆ ವಚನ ★

ಆರ ಕೈಯೊಳಗಿಲ್ಲ। ಆರ ಇಚ್ಛೆಯೊಳಿಲ್ಲ।
ಮೀರುವದು ಸಾಧ್ಯ ಶಿವ ನಿಚ್ಛೆಯನು ನರರು।
ಅದು ಈಶ್ವರೇಚ್ಛೆ- ಘನಮಠ ॥೮೮॥

ಬಡವ ಬಲ್ಲಿದನಹನು। ಬಲ್ಲಿದನು ಬಡವನಹ।
ಸುಡುಗಾಡ ಸಿರಿಯು ಅರಮನೆಯು ಆಗುವದು।
ವೃಥನಿಚ್ಛೆಯಿರಲು- ಘನಮಠ ॥೮೯॥

ಮನುಜನಿಚ್ಛೆಯು ಜಗದಿ। ಘನತೆಗೇರಲ್ಕೆ ತನು।
ಮನದಿಂದ ಶಿವರೂಪಿ ಶಿವಯೋಗಿ ಧ್ಯಾನವನು।
ನೆನೆಯೊ ಶಿವನಿಚ್ಛೆ- ಘನಮಠ ॥೯೦॥

ದೇವಾಂಶ ಶ್ರೀ ಕೃಷ್ಣ। ರಾಮಚಂದ್ರಾದಿಗಳು।
ಆವಪರಿ ಕಷ್ಟಪಟ್ಟರೈ ಭೂಮಿಯೊಳಗೆ।
ದೇವ ಶಿವನಿಚ್ಛೆ- ಘನಮಠ ॥೯೧॥

ನರರಿದನು ಅರಿಂದರಿದು। ಮರೆದು ಮರುಳಾಗುವರು।
ಸುರಮುನಿಗಳೆಲ್ಲಾ। ಬಳಲಿದರು ಬಹುಪರಿಯ।
ಅರಿಯೋ ನೀನದನೇ- ಘನಮಠ ॥೯೨॥

## ★ ಜಯವಾಣಿ ವಚನ ★

ಭಾರತಕೆ ಜಯ ನಮ್ಮ| ವೀರ ಹಿಂದೂ ಮತಕೆ|
ಕೋರುವೆನು ರಾಷ್ಟ್ರಪಿತರು ಗಾಂಧಿಯು ಜವಾ|
ಹೀರರಿಗೆ ಜಯವು- ಘನಮಠ ||೯೩||

ಕನ್ನಡದ ನಾಡಕವಿ| ರನ್ನ ಹರಿಹರರು ಸಂ|
ಪನ್ನ ದ್ಯಾಂಪುರದ ಚನ್ನಕವಿ ನಿಕರಕ್ಕೆ|
ಮುನ್ನ ನಾ ಮಣಿವೆ- ಘನಮಠ ||೯೪||

ಮೂಡಲ್ಕೆ ರವಿ ಜಗದಿ| ಓಡುವದು ಕತ್ತಲೆಯು|
ನಾಡ ಕತ್ತಲೆಯು ಕಳೆಯಲ್ಕೆ ಕೆಲವೂರ|
ಗೋಡಿ ನೀ ಬಾರೋ- ಘನಮಠ ||೯೫||

ಕನ್ನಡಾಂಬೆಯ ನುಡಿಯ| ಹಂಬಲದಿ ನಾನುಡಿವೆ|
ಸಾಂಬನವತಾರಿ ಶಿವಯೋಗಿ ಘನಮಠನೆ|
ನಂಬಿ ನಾ ಕರೆವೆ- ಘನಮಠ ||೯೬||

ಸಂತೆಕೆಲವೂರ| ಮಹಂತಿನಾ ಮಠದೊಡೆಯ|
ಸಂತ ಮಹಂತ ಗುರು ಧ್ಯಾನದಿಂ ಕೃತಿಯು|
ಅಂತಿಮವಗೊಳಿಪೆ- ಘನಮಠ ||೯೭||

ಶಾಲಿವಾಹನ ಶಕೆಯ| ಅಂಕೆ ಹತ್ತೊಂಬತ್ತು|
ಶತವು ಮೇಲೊಂದು ಸಿದ್ಧಾರ್ಥಿ ವರ್ಷದ|
ಕಾಲ ಶ್ರಾವಣದಿ- ಘನಮಠ ||೯೮||

ನಾಗಪಂಚಮಿಯ ದಿನ| ನಾಗಭೂಷಣ ಯತಿಯು|
ತ್ಯಾಗಿ ಅಂಕಿತದಿ ತ್ರಿಪದಿಗಳ ಮಾಲಿಕೆಯು|
ಬೇಗ ಸಂಪೂರ್ಣ- ಘನಮಠ ||೯೯||

ತಂದೆ ಶಂಕರವಾಮ| ತಾಯಿ ಸಂಗಾಂಬೆಯಾ|
ಕಂದನಿವ ಕವಿಯ ಕಿಂಕರನು ಅಮರ ಕವಿ|
ನಿಂದ ಕೆಲವೂರ- ಘನಮಠ ||೧೦೦||

ಹಲವಾರು ಕಲೆಕುಶಲ। ಮಿಳಿತವಾಗಿಹ ಪೂರು।
ಕೆಲವೂರು ನಾಮ ಸಾರ್ಥಕವು ಶಾಶ್ವತವು।
ಸಂತೆಕೆಲವೂರು– ಘನಮಠ ॥೧೦೧॥

— ಇತಿ ೧೦೧ ನೇ ವಚನಕ್ಕೆ ದಶಮ ಪಥ ಮಂಗಲಂ —

— ಒಟ್ಟು ವಚನಗಳು ೧೦೦೧ ಕ್ಕೆ ಮಂಗಲಂ —

## ★ ಶ್ರೀ ಘನಮಠೇಶ ಭಜನೆ ★

ಪಾಹಿಮಾಂ ಘನಮಠೇಶ। ರಕ್ಷಮಾಂ ಘನಮಠೇಶ।
ರಕ್ಷರಕ್ಷ ಘನಮಠೇಶ। ಪಾಹಿಮಾಂ ಭಕ್ತಪೋಷ ॥ಪಲ್ಲ॥

ತಂದೆತಾಯ್ಗಳನ್ನು ತೊರೆದು। ಬಂಧುಬಳಗವೆಲ್ಲ ಬಿಟ್ಟು।
ಬಂದೆ ನಮ್ಮ ಚಲುವ ಕರ್ನಾಟಕಕ್ಕೆ ಘನಮಠೇಶ ॥೧॥

ಹಿಂದೆ ಮೆರೆದ ಬಸವ ಚನ್ನಬಸವ ಅಲ್ಲಮಾದಿ ಪ್ರಮಥ।
ರಂದುಗೈದ ಶಿವನ ಸೇವೆ ಇಂದುಗೈದೆ ಘನಮಠೇಶ ॥೨॥

ಬೇಕು ಬೇಡವೆಂಬ ಶಬ್ದ। ನೂಕಿ ನಿನ್ನ ಅಂತರಾಳ।
ಸಾಕುಮಾಡಿ ಮನೆಯತೊರೆದೆ ಮೋಹದೂರ ಘನಮಠೇಶ ॥೩॥

ಲೋಕದೊಳಗೆ ಶ್ರೇಷ್ಠ ಶಿವಪಿ। ನಾಕಿ ಮತದ ಹಿರಿಯ ತತ್ವ।
ಏಕ ನಿಷ್ಠೆಯಿಂದ ಜಗದಿ ಸಾರಿದೈಯ್ಯ ಘನಮಠೇಶ ॥೪॥

ಜೀವ ಗುಣಗಳೆಲ್ಲ ಕಳೆದು ಭಾವ ಶುದ್ಧನಾಗಿ ಜಗದಿ।
ಭಾವಜಾರಿ ಶರಣ ವಚನ ಶಾಸ್ತ್ರಬೋಧೆ ಘನಮಠೇಶ ॥೫॥

ದೇವ ಬಸವ ಬಸವದೇವ। ನೆಂಬ ತತ್ವನಾಡ ಜನದ।
ಭಾವದೊಳಗೆ ಸ್ಥಿರವ ಗೈದೆ ದೇವದೇವ ಘನಮಠೇಶ ॥೬॥

ಅಂದು ಚಿಂಚೋಳಿಯಲ್ಲಿ ನಿಂದು ನೀನು ಬಸವ ಮಹಿಮೆ।
ಅಂದವಾಗಿ ತೋರಿ ಮೆರೆದ ತಂದೆ ನೀನು ಘನಮಠೇಶ ॥೭॥

ದುಷ್ಟ ಜನರ ಶಿಕ್ಷೆಗೈದು। ಶಿಷ್ಟರನ್ನು ಪಾಲಿಸುತ್ತ।
ಶ್ರೇಷ್ಠನೆನಿಸಿ ಜಗದಿ ಮೆರೆದ। ಶ್ರೇಷ್ಠ ತಂದೆ ಘನಮಠೇಶ ॥೮॥

ಅಂದು ಕೆಂಟೋಜಿಯಲ್ಲಿ। ನಿಂದು ಭಕ್ತರನ್ನು ಪೊರೆದು।
ಅಂದವಾದ ಚೌಕಿಯಲ್ಲಿ ಇಂದಿಗುಂಟು ಘನಮಠೇಶ ॥೯॥

ಮುಂದೆ ಸಂಗಮೇಶ ಕ್ಷೇತ್ರದಲ್ಲಿನಿಂದು ಬಸವ ಮಹಿಮೆ।
ಚಂದದಿಂದ ತೋರಿ ಮೆರೆದ ತಂದೆ ನೀನು ಘನಮಠೇಶ ॥೧೦॥

ನಾಡ ಜನರ ರಕ್ಷಿಸಲ್ಕೆ ರೂಢಿಯೆಲ್ಲ ಚರಿಸಿ ಬಂದೆ।
ಕಾಡುಜನರ ಮಂದ ಬುದ್ಧಿದೂಡಿ ಮೆರೆದ ಘನಮಠೇಶ ॥೧೧॥

ಬಸವ ಬಸವನೆಂಬ ನಾಮ। ಉಸುರಿಗೊಮ್ಮೆ ನುಡಿಯುತಿದ್ದೆ।
ಅಸಮ ಮಹಿಮಶಾಲಿ ನೀನು ಹೆಸರು ಪಡೆದೆ ಘನಮಠೇಶ ॥೧೨॥

ಸಂತೆಕೆಲ್ಲೂರೆಂಬ ಗ್ರಾಮ। ಅಂತರಂಗದಲ್ಲಿ ನೀನು।
ಚಿಂತಿಸುತ್ತ ಬಂದು ನಿಂತೆ। ಅಂತಕಾರಿ ಘನಮಠೇಶ ॥೧೩॥

ಅಂದಿಗುಂಟು ಇಂದಿಗುಂಟು। ಮುಂದೆ ಎಂದೆಂದಿಗುಂಟು
ಕಂದನಮರ ತಂದೆ ನೀನು ನುಡಿಯು ಸತ್ಯ ಘನಮಠೇಶ ॥೧೪॥

ಘನಮಠೇಶನನ್ನು ಭಜಿಸಿ। ಮನದ ಮಲಿನವೆಲ್ಲ ಕಳೆದು।
ಮನುಜರೆಲ್ಲ ಮನಸಿಜಾರಿ ಕರುಣೆಯಿಂದ ಘನಮಠೇಶ ॥೧೫॥

॥ ಶ್ರೀ ಗುರು ಬಸವಲಿಂಗಾಯ ನಮಃ ॥

# ಶ್ರೀ ಗುರು ಘನಮಠೇಶ ಸುಪ್ರಭಾತ

ಶ್ರೀ ಗುರು ಶಿವಾನ್ವಯ ಸುಸಾರ ಜಲಧಿಗೇ ಚಂದ್ರ
ಬಾಗಿ ನಮಿಪೆವು ನಿನಗೆ ಪರಮ ಗುರು ಯೋಗೀಂದ್ರ
ರಾಗರಹಿತನೆ ವರವಿರಾಗಿ ಘನಮಠಧೀಶ
ಜಾಗರವು ಬಂದಿಹುದು ಜಗದ ಕಣ್ಗೇ
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೧॥

ಮಾರಹರನಾಜ್ಞೆಯನು ಪೊತ್ತು ಶಿರದಲಿ ರವಿಯು
ಸಾರುತಿಹ ನುದಯ ಗಿರಿನೆತ್ತಿಯೊಳು ತಾನು।
ತೂರಿ ಬರುತಿಹವವನ ಕಿರಣಗಳು ಮುನ್ನುಗ್ಗಿ।
ಮಾರಹರ ಯೋಗಿ ನೀ ಬೇಗನೇಳೋ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೨॥

ಶಿವಶಿವಾಣಿಯರಾಜ್ಞೆಯಂತೆ ಜಗದೊಳು ಪುಟ್ಟಿ।
ಶೈವ ಮತ ಕಂಟಕರ ವೀರತನದಿಂ ಕುಟ್ಟಿ।
ಭಾವೈಕ್ಯ ಭಕ್ತಿಯನು ಜನಮನದಿ ನೀಸಿಟ್ಟಿ।
ಸಾವು ಹುಟ್ಟನು ಗೆಲಿದಾ ಪರಮ ಗುರು ಶ್ರೇಷ್ಠಿ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೩॥

ಪ್ರಾಂತವಾಂಧ್ರದ ದೋರವಾಡ ಗ್ರಾಮದಿ ನೀನು।
ಶಾಂತಗುಣಿ ವೀರಮ್ಮನುದರದಲಿ ಜನಿಸಿರುವಿ।
ಭ್ರಾಂತವಹ ಸಂಸಾರ ಬಂಧನವ ಹರಿದೊಗೆದೇ।
ಕ್ರಾಂತಿಯನು ಮಾಡಿರುವಿ ನೀ ಯೋಗ ಬಲದಿ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೪॥

ಜನ್ಮ ಭೂಮಿಯು ತೊರೆದು ಮೆರೆಯುತಿಹ ಕನ್ನಡದ।
ಚಿನ್ನಾಡ ಸಂಚರಿಸಿ ಸರಳವಹ ಕನ್ನಡದಿ।
ನಿನ್ನಾತ್ಮ ನಿಶ್ಚಯದ ನಿತ್ಯಾನುಭವ ಪೂರ್ಣ।
ರನ್ನದಂತಹ ಕಾವ್ಯಗಳ ರಚಿಸಿ ನೀ ಮೆರೆದಿ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ||೫||

ಲಿಂಗ ರೂಪದ ಜಗದಿ ಅಂಗವಿಡಿದಾತ್ಮವನು।
ಲಿಂಗ ಮುಖದಿಂದರಿದ ಪರಮ ಶಿವಯೋಗಿ।
ಮಂಗಲಾಂಗನೆ ನಿನ್ನ ಮಹಿಮೆ ಅಪರಿಮಿತ ಗುರು।
ಅಂಗಜಾರಿಯು ರೂಪ ನೀ ಬೇಗನೇಳೋ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ||೬||

ನಾಗಭೂಷಣ ನಾಮದೊಡನೆ ಗುರುನಾಮ ಸಂ।
ಯೋಗಗೊಳಿಸುತ ಭಕ್ತ ಸಂತತಿಯು ಕರೆದಿರುವ।
ಶ್ರೀಗುರುವೇ ಘನಮಠದ ನಾಗಭೂಷಣರೆಂಬ।
ರಾಗರಂಜಿತ ನಾಮದಿಂ ಜಗದಿ ಮೆರೆವೇ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ||೭||

ಕನ್ನಡದ ನಾಡ ಸಂಚರಿಸುತ್ತಲಲ್ಲಲ್ಲಿ।
ಉನ್ನತದ ಸುಕ್ಷೇತ್ರಗಳ ದರುಶನವ ಮಾಡಿ।
ಮನ್ನಣೆಯಾ ಸಂತೆಕೆಲವೂರಿನಲಿ ನೆಲೆ ನಿಂತ।
ಚಿನ್ಮಯನೇ ಚಿದ್ಘನ ಪ್ರಭುವೇ ನೀ ಏಳೋ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ||೮||

ತನುವಿನ ತಮದ ನಿದ್ದೆಯನು ತೊರೆದಂತಾರ್ಯ।
ಘನವಾದ ತುರಿಯ ನಿದ್ಧೆಯೊಳಿದ್ದ ಶ್ರೀಗುರುವೇ।
ಮನಸಿಜಾರಿಯ ಭಕ್ತ ಸಂತತಿಯು ಬಂದಿಹುದು।

ನೆನೆಗೋಲನೂರುತ್ತ ಬೇಗನೇಳು।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೯॥

ಕವಿವಾಣಿ ಅವಿನಾಶಿ ಜಗದೊಳಗೆ ಸ್ಥಿರವು।
ಕವಿಗೆ ದೊರಕುತಲಿಹುದು ತಾನಿಹವು ಪರವು।
ಭವಭವಾಂತರ ಯೋಗಿ ಸಾನ್ನಿಧ್ಯ ಸದ್ಗತಿಯು।
ಶಿವಯೋಗಿ ಘನಮಠರ ಚರಣಕೀ ಕೃತಿಯು।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೧೦॥

ಮಂಗಲವು ಮಹಿಮ ಗುರು ಸಂಗನಾ ಬಸವನಿಗೆ।
ಮಂಗಲವು ಮಹಿತ ಶಿವಯೋಗಿ ಸಂಕುಲಕೆಲ್ಲ।
ಮಂಗಲವ ನೀ ನೀಡೋ ಕವಿ ಚನ್ನಬಸವನ ಮತಿಗೆ।
ಮಂಗಲವು ಸಂತೆಕೆಲವೂರ ಸ್ಥಿರವಾಸನಿಗೆ।
ಸುಪ್ರಭಾತದಿ ನಿನ್ನ ಸ್ಮರಣೆ ಘನಮಠ ಯೋಗಿ ॥೧೧॥

## — ಶ್ಲೋಕ —

ಸುಪ್ರಭಾತಾಮಿದಂ ನಿತ್ಯಂ ಯಃ ಪಠೇತ್ ಗುರುಸನ್ನಿಧೌ ಸಂಪ್ರಾ-
ಪ್ನೋತಿ ಫಲಂ ಸರ್ವಂ ಮುಕ್ತಿ ಸಾಮ್ರಾಜ್ಯ ವೈಭವಂ

— ಜ. ಚ. ಬ. ಕೃತ

## — ಮಂಗಲ —

[ರಾಗ— ಭಿಂಪ್ಲಾಸ್]

ಜಯ ಜಯ ಗುರು ಘನಮಠೇಶ॥
ಚಿನುಮಯಾತ್ಮಕ ಸುಗುಣ ಕೋಶ ರೋಷ ನಾಶ ಭಕ್ತ ಪೋಷ ॥ಪ॥

ಶಿವಮತಾಬ್ಧಿ ಶೀತ ಕಿರಣ ಜವದಿ ಮಾಡ್ವೆ ನಿಮ್ಮ ಸ್ಮರಣ।
ಜನನ ಮರಣ ತಾಪ ಹರಣ ಭವ ಕುಠಾರ ಭಯವಿದೂರ ॥೧॥

ಪಾರಮಾರ್ಥ ತತ್ವದಾ ವಿ ಚಾರ ರೂಪ ಕೃಷಿಯ ಸಾರ।
ಧರೆಯ ಜನಕೆ ಸಾರಿ ಮೆರೆದೆ ಪರಮ ಯೋಗಿ ವರ ವಿರಾಗಿ ॥೨॥

ಕಂತುಹರನ ರೂಪನಾಗಿ ಭ್ರಾಂತಿ ಅಳಿದೆ ಜನದ ಜನರ।
ಸಂತೆಕೆಲವೂರೇಶ ಮಹಿಮ ಅಂತಕಾಂತ ಯೋಗಿವರನೆ ॥೩॥

# ತಪ್ಪು ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨ | ೬ | ದ್ಧರಿಸಿದ | ದ್ಧಾರಿಸಿದ |
| ೨ | ೧೩ | ಕಾಟಕಳಿದು | ಕಾಟಕಳೆದು |
| ೫ | ೧೨ | ರೂಪನಾಗುವಿಯಾ | ರೂಪನಾಗುವಿಯೊ |
| ೫ | ೨೧ | ಕೊಂಡುಕೊಳುವ | ಕೊಡುಕೊಳುವ |
| ೬ | ೧೬ | ಹರತನಕಾಯಾ | ಹರತನಯಕಾಯೊ |
| ೭ | ೧ | ಗಣಪತಿಯ | ಗಣಪತಿಯೆ |
| ೭ | ೨ | ಅಪರಾಧನು | ಅಪರಾಧವನು |
| ೭ | ೧೦ | ಗಣಪತಿಯ ಗುಣಮಣಿಯ | ಗಣಪತಿಯೆಗುಣಮಣಿಯೆ |
| ೮ | ೫ | ವಳವಾದಿ | ವಶವಾದಿ |
| ೮ | ೧೩ | ಸೂಡಿವನೆ | ಸೂಡಿದನೆ |
| ೮ | ೧೭ | ಯನಿಸಿವನು | ಯನಿಸಿದನು |
| ೯ | ೨ | ಪೊಗಳಲವಲ್ಲ | ಪೊಗಳಲಳವಲ್ಲ |
| ೧೦ | ೫ | ಸುರಗಣಾರ್ಜಿತ | ಸುರಗಣಾರ್ಚಿತ |
| ೧೦ | ೨೧ | ಸಾಣು | ಸ್ಥಾಣು |
| ೧೧ | ೨೧ | ನಿನಗಾಗಿ | ನೀನಾಗಿ |
| ೧೨ | ೯ | ಹರನಂತರಾತ್ಮವಾ | ಹರನಂತರಾತ್ಮದಾ |
| ೧೨ | ೧೨ | ಬಿಡವೆಂದೆಂದಿಗೂ | ಬಿಡರೆಂದೆಂದಿಗೂ |
| ೧೨ | ೨೦ | ಸುಂದರವ | ಸುಂದರದ |
| ೧೨ | ೨೩ | ತನು | ತನುವ |
| ೧೩ | ೬ | ಸ್ಥಾಪಿಸಿ | ಸ್ಥಾಪಿಸಿದ |
| ೧೪ | ೧೫ | ಗರು | ಗುರು |
| ೧೪ | ೧೬ | ಪಂಡಿತರಾಧ್ಯ | ಪಂಡಿತಾರಾಧ್ಯ |
| ೧೫ | ೨ | ವಿಶದೊಳು | ವಿಶ್ವದೊಳು |
| ೧೫ | ೩ | ಅವರಿತಂ | ಅವಿರತಂ |

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೧೫ | ೧೧ | ಗರುಗಳೈವರರ | ಗುರುಗಳೈವರರ |
| ೧೫ | ೧೨ | ದಮನಿ | ಧವನಿ |
| ೧೫ | ೧೯ | ಶಶಿಕಂಠ | ಶಿತಿಕಂಠ |
| ೧೭ | ೪ | ಆಭರಣಗಳು | ಆವರಣಗಳ |
| ೧೭ | ೧೩ | ಗುರು | ಗುರುವು |
| ೧೭ | ೧೮ | ಗರುಬೇಕು | ಗುರುಬೇಕು |
| ೧೮ | ೪ | ಲಿಂಗವಾ | ಲಿಂಗದಾ |
| ೧೮ | ೧೯ | ಜಂಗಮನು | ಜಂಗಮವು |
| ೧೯ | ೮ | ಧೋಳೋದಕವು | ದೂಳೋದಕವು |
| ೨೦ | ೩ | ನಾಳಿಪುದು | ನಾಸಿಪುದು |
| ೨೦ | ೧೦ | ಪುಸಾದವದು | ಪ್ರಸಾದವದು |
| ೨೧ | ೯ | ಭಿಸ್ಮಿತವದು | ಭಸಿತವದು |
| ೨೨ | ೧೫ | ಪರಿಸಲ್ಕೆ | ಪರಿಸಲ್ಕೆ |
| ೨೨ | ೨೧ | ಕರಣೇಂದ್ರ | ಕರಣೇಂದ್ರ |
| ೨೩ | ೧೧ | ಆಸುವಳಿದ | ಆಸುವಳಿವ |
| ೨೩ | ೨೧ | ಪರತೃಪ್ತಿಯೆ | ಪರರತೃಪ್ತಿಯೆ |
| ೨೪ | ೨ | ಸತಿಗಳೆಯುತೆಂದು | ಸತಿಗಳೆಯುದೆಂದು |
| ೨೬ | ೮ | ಪೋ | ಪೊಸ |
| ೨೮ | ೧೧ | ಕುಣ್ಣನರ | ಕಾಣ್ವನರು |
| ೨೮ | ೧೪ | ಶ್ಯಾಮ್ಯಾಂಗರೊಳು | ಶ್ಯಾಮಾಂಗರೊಳು |
| ೨೯ | ೨೧ | ವಿಧ್ಯೈನ | ವಿಂಧ್ಯೈನ |
| ೨೯ | ೨೩ | ನೋಕಾರ | ನೊಂಕಾರ |
| ೩೦ | ೨ | ದಶಕಠನ | ದಶಕಂಠನ |
| ೩೧ | ೧೨ | ಪ್ರೀತಿಯ | ಪ್ರೀತಿಯಿಂ |
| ೩೫ | ೧೪ | ಗುಡಿಯುವರು | ನುಡಿಯುವರು |

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೩೬ | ೨೧ | ಎನ್ನ | ಉನ್ನ |
| ೪೦ | ೧೨ | ಕುಲ್ಲರ | ಕಲ್ಲರ |
| ೪೦ | ೮ | ಯಿ। | ಯಿಂ। |
| ೪೪ | ೪ | ಸೆರೆಯೊಳುಳಿಹೆ | ಸೆರೆಯೊಳಿಹ |
| ೪೪ | ೧೧ | ಮಠದವರು | ಮಠರವರ |
| ೪೭ | ೪ | ಶಿವಯೋಗಿ | ಯೋಗಿ |
| ೪೭ | ೭ | ಧ್ಯಾನವ | ಧ್ಯಾನ |
| ೪೭ | ೧೬ | ಜೀವು | ಜೀವ |
| ೪೮ | ೩ | ಎಮ್ಮಿಗನೂರ | ಎಮ್ಮಿಗನೂರಿ |
| ೪೮ | ೮ | ನೆಲೆಯು | ನೆಲೆಯ |
| ೪೮ | ೧೭ | ಮಡಲೊಳಗಿಟ್ಟ | ಮುಡಿಲೊಳಗಿಟ್ಟು |
| ೪೮ | ೨೧ | ನೀರಲಕೇರಿ | ನೀರಲಕೆರಿ |
| ೪೯ | ೧೬ | ಒಡೆಯರಿಸ್ವಾಮಿ | ಒಡೆಯ ಎರಿಸ್ವಾಮಿ |
| ೪೯ | ೧೪ | ಮೊದಲಲ್ಲಿ | ಮೊದಲಲ್ಲ |
| ೪೯ | ೨೧ | ತಿಕ್ಕಯ್ಯವನು | ತಿಕ್ಕಯ್ಯನವ |
| ೫೦ | ೪ | ಚಚನ | ವಚನ |
| ೫೦ | ೧೪ | ಕ್ಷಿರಪುರೆ | ಕ್ಷೀರಪುರ |
| ೫೨ | ೯ | ಕಂಗಳಿಸುತವನು | ಕಂಗಳಿತ್ತವನು |
| ೫೪ | ೩ | ಮುನ್ನಡೆಯು | ಮುನ್ನಡೆಯ |
| ೫೬ | ೧೫ | ಅವಿತರವು | ಅವಿರತವು |
| ೫೭ | ೧ | ನಂತರಂಗ | ಅಂತರಂಗ |
| ೫೭ | ೨ | ಭ್ರಾಂತಿಯಿಂ | ಭ್ರಾಂತಿಯಂ |
| ೫೭ | ೭ | ದೂರಚರಿಸಿ | ದೂರಿರಿಸಿ |
| ೬೦ | ೧೫ | ಶಿರಿತವನವ | ಶಿರಿತನವ |
| ೬೩ | ೧೫ | ಸದಾಚಾರ್ಯ ಅವ | ಸದಾಚಾರಿ ಪರ |

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೬೭ | ೫ | ದೊಡ್ಡವ | ದೊಡ್ಬಸವ |
| ೬೯ | ೫ | ಗಣ\| ನಿಜ | ನಿಜಗುಣ |
| ೭೩ | ೧೫ | ಪರಮಿತ | ನಪರಿಮಿತ |
| ೭೪ | ೧೭ | ಎಕರ | ಕರ |
| ೮೦ | ೭ | ಭಾವಜಾತಕ | ಭಾವಜಾಂತಕ |
| ೮೧ | ೩ | ಪದವಿ | ಪರಂ |
| ೮೧ | ೫ | ಕೊಡುವ | ಕೊಡುಕೊಳುವ |
| ೮೧ | ೧೩ | ಸಂಸಾರ | ಸಂಸ್ಕಾರ |
| ೮೧ | ೧೪ | ಸ್ವಾನಭವಿ | ಸ್ವಾನುಭವಿ |
| ೮೨ | ೮ | ವಿಕ್ರಮದಿ | ವಿಕ್ರಮ |
| ೮೪ | ೧೬ | ಮುನ್ನಿಸುವ | ಮನ್ನಿಸುವ |
| ೮೫ | ೮ | ಮಿಡುಕುವನೆಂದೂ | ಮಿಡುಕನವನೆಂದೂ |
| ೮೬ | ೧೦ | ಪ್ರಾಣಿಯೋಳ್ | ಪ್ರಾಣದೋಳ್ |
| ೯೩ | ೮ | ಮೆರೆದು | ಮರೆದು |
| ೯೩ | ೧೭ | ಶಿವನೆ | ಶಿವನ |
| ೯೪ | ೨ | ಹಣಮಂತ | ಹನುಮಂತ |
| ೯೫ | ೪ | ನಿತ್ಯದಾಮಾಹಾರ | ನಿತ್ಯದಾಹಾರದೊಳು |
| ೯೫ | ೧೮ | ಅಂದು | ಅರಿದು |
| ೯೬ | ೮ | ಶಿವನು | ಶಿವನ |
| ೧೦೨ | ೧೨ | ಪ್ರೀಯಿತಿ | ಪ್ರೀತಿಯಿರೆ |
| ೧೦೩ | ೨೨ | ತನವು | ತನುವು |

6. D. 4 H.M.T. W. Colony
Bangalore-31



ಶ್ರೀ ಶಿವಶಕ್ತಿ ಪ್ರಿಂಟಿಂಗ ಪ್ರೆಸ್, ಬಾಗಲಕೋಟೆ.

...e from imported steel.
...edge—chromium sputtered,
...ve you the 24 carat shave
MADE IN INDIA
...LTD., NEW DELHI-110020.
(LICENSED USERS)
...CE Rs. 3.00 (INCL. OF LOCAL TAXES)

...rasmic
GOLD

MB 8 2 2

Erasmic
GOLD
5 STAINLESS BLADES
Made from imported steel.
...est edge—chromium sputtered,
...give you the 24 carat shave
MADE IN INDIA
...DGE LTD., NEW DELHI-110020.
(LICENSED USERS)
...CE Rs. 3.00 (INCL. OF LOCAL TAXES)

...rasmic
GOLD

MB 8 2 1

Erasmic
GOLD
5 STAINLESS BLADES
Made from imported steel.
...est edge—chromium sputtered,
...give you the 24 carat shave
MADE IN INDIA
...DGE LTD., NEW DELHI-110020.
(LICENSED USERS)
...CE Rs. 3.00 (INCL. OF LOCAL TAXES)

Erasmic
GOLD
Erasmic
GOLD

NEW
IS:7371

Erasmic
GOLD
Erasmic
GOLD

NEW
IS:7371

Erasmic
GOLD
Erasmic
GOLD